ನವೆಂಬರ್ 16, 2025

41ನೇ ವರ್ಷದಲ್ಲಿ

www.facebook.com/firstcrimenewspaper/

ಸ್ಥಾಪಕ ಸಂಪಾದಕ : ದಿ||ಎಂ. ಮಲ್ಲಿಕಾರ್ಜುನಯ್ಯ

# ಪೊಲೀಸ್ ನ್ಯೂಸ್

2011

ಪರಿಶೋಧನೆ, ಪತ್ತೇದಾರಿಕೆ ಮತ್ತು ರೋಚಕ ಸುದ್ದಿಗಳ ಸಚಿತ್ರ ಕನ್ನಡ ವಾರಪತ್ರಿಕೆ

ಬೆಲೆ : ₹20/-

## ವಿಕೃತಕಾಮಿಗೆ-ಉಗ್ರನಿಗೆ ರಾಜಾತಿಥ್ಯ!

# ಸೆಂಟ್ರಲ್ ಜೈಲ್‌ಗೆ ಮೇಜರ್ ಸರ್ಜರಿ!



## ಸೇಡು ತೀರಿಸಿಕೊಂಡನೆ ದಾಸ?!

## ವಿಡಿಯೋ ಹರಿಬಿಟ್ಟದ್ದು ನಿಜಕ್ಕೂ ಧನ್ವೀರಾ?!



## ಆಸ್ತಿಗಾಗಿ ಮಲಮಗಳ ಕೊಂದಳು!





## ನವೆಂಬರ್ ಕ್ರಾಂತಿ... ಬ್ರಾಂತಿ... ವಾಂತಿ...

## ಚಿಂತನೆಗೆ ದೂಡುವ ಜಿ.ಎ. ಬಾಬಾ ಪತ್ರ



## ಮಕ್ಕಳ ಕೊಂದು ಆತ್ಮಹತ್ಯೆ ಮಾಡಿಕೊಂಡಳು!



## ಸಂಪಾದಕರು ಸ್ಥಾಪಿಸಿದ ಪತ್ರಿಕೆಗಳು

**1975ರಲ್ಲಿ 'ಶಿಕ್ಷಣ ಸುಧಾರಕ'**
(ಮೊಟ್ಟ ಮೊದಲ ಶಿಕ್ಷಣ ಪಾಕ್ಷಿಕ)

**1984ರಲ್ಲಿ 'ಪ್ರದೇಶ ಸಮಾಚಾರ'**
(ದಿನಪತ್ರಿಕೆ)

**1985ರಲ್ಲಿ 'ಪೊಲೀಸ್ ನ್ಯೂಸ್'**
(ಕನ್ನಡ ವಾರಪತ್ರಿಕೆ)

**1987ರಲ್ಲಿ 'ಪೊಲೀಸ್ ನ್ಯೂಸ್'**
(ತಮಿಳು, ಹಿಂದಿ, ಇಂಗ್ಲೀಷ್)

**1989ರಲ್ಲಿ 'ಲೋಕವಾಣಿ'**
(ಕನ್ನಡ ದೈನಿಕ)

**1990ರಲ್ಲಿ 'ಮಂಗಳೂರು ಮಿತ್ರ'**
(ಮಂಗಳೂರಿನ ಮೊಟ್ಟ ಮೊದಲ ಸಂಜೆ ದೈನಿಕ)

**1992ರಲ್ಲಿ 'ಕರ್ನಾಟಕ ಮಲ್ಲ'**
(ಮುಂಬೈನಲ್ಲಿ ಪ್ರಕಟಿತ ಮೊಟ್ಟ ಮೊದಲ ಕನ್ನಡ ದೈನಿಕ)

**1996ರಲ್ಲಿ 'ಆದರ್ಶ ಗಂಡ ಹೆಂಡತಿ'**
(ಕನ್ನಡ ಮಾಸಪತ್ರಿಕೆ)

**1997ರಲ್ಲಿ 'ಕ್ರೀಡಾ ಸಮಯ'**
(ಕನ್ನಡ ಮಾಸಿಕ)

**1999ರಲ್ಲಿ 'ಶುಭದಿನ'**
(ಕನ್ನಡ ವಾಣಿಜ್ಯ ದೈನಿಕ)

**1999 ರಲ್ಲಿ 'ಸಿಟಿ ಟುಡೆ'**
(ಇಂಗ್ಲೀಷ್ ಸಂಜೆ ದೈನಿಕ)

**'ಪೊಲೀಸ್ ನ್ಯೂಸ್'**
(ಸಪ್ಲಿಮೆಂಟರಿ)

**'ದೇಗುಲ ಪ್ರಭೆ'**
(ಕನ್ನಡ ಮಾಸಿಕ)

## ಸಂಸ್ಥಾಪಕ ಸಂಪಾದಕರ ಸವಿನೆನಪಿನಲ್ಲಿ......



## ಲಯನ್ ಎಂ. ಮಲ್ಲಿಕಾರ್ಜುನಯ್ಯ

ಸಂಸ್ಥಾಪಕ ಸಂಪಾದಕರು

ಜನನ : 29-03-1954 ಮರಣ : 22-11-2005

### ಸ್ಥಾಪಿಸಿದ ಹಾಗೂ ಸೇವೆ ಮಾಡಿದ ಸಂಘ-ಸಂಸ್ಥೆಗಳು

- ಲಯನ್ಸ್ ಕ್ಲಬ್ ಮೆಜೆಸ್ಟಿಕ್ ಶಾಖೆ - ಅಧ್ಯಕ್ಷರು
- ಕಾರ್ಯನಿರತ ಪತ್ರಕರ್ತರ ಸಂಘ - ರಾಜ್ಯ ಖಜಾಂಚಿ
- ದೇಗುಲ ಮಠ ಹಳೇ ವಿದ್ಯಾರ್ಥಿಗಳ ಸಂಘ - ಪ್ರಧಾನ ಕಾರ್ಯದರ್ಶಿ
- ವಿಶ್ವ ಸೇವಾ ಕೇಂದ್ರ - ಉಪಾಧ್ಯಕ್ಷರು
- ಕನ್ನಡ ವೈದ್ಯ ಸಾಹಿತ್ಯ ಪರಿಷತ್ತು - ಗೌರವ ಪ್ರಧಾನ ಕಾರ್ಯದರ್ಶಿ
- ಬಸವ ಬಳಗ - ಸಂಸ್ಥಾಪಕರು, ಅಧ್ಯಕ್ಷರು
- ಮಂಗಳೂರು ಪ್ರೆಸ್ ಕ್ಲಬ್ - ಸಂಸ್ಥಾಪಕರು
- ಕನ್ನಡ ಸಾಹಿತ್ಯ ಸಮ್ಮೇಳನ (ದಾವಣಗೆರೆ) - ಅಧ್ಯಕ್ಷರು

## ಸಂದ ಪ್ರಶಸ್ತಿ ಪುರಸ್ಕಾರಗಳು

**'ಸಾಧಕರು'**
(ಅಖಿಲ ಭಾರತ ಪತ್ರಕರ್ತರ ಸಮ್ಮೇಳನ)
ದಾವಣಗೆರೆ 1993-94

**'ವಿಶಿಷ್ಟ ಸೇವಾ ಪದಕ'**
(ಕರ್ನಾಟಕ ಪತ್ರಿಕಾ ಅಕಾಡೆಮಿ, ಕರ್ನಾಟಕ ಸರ್ಕಾರ)

**'ವೈದ್ಯ ಸಾಹಿತ್ಯ ಸಾಧಕ'**
(ಕನ್ನಡ ವೈದ್ಯ ಸಾಹಿತ್ಯ ಪರಿಷತ್)

**'ಮುದ್ರಣ ಕಲೆ ಸಾಧಕ'**
(ಯೂರೋಪ್ ಕನ್ನಡ ಬಳಗ)

**'ಶಾಂತಿ ಧೂತ'**
(ಇಂಡಿಯನ್ ಕಲ್ಚರಲ್ ಅಕಾಡೆಮಿ)

**'ಕನ್ನಡ ರತ್ನ'**
(ಪೊಲೀಸ್ ಅಸೋಸಿಯೇಷನ್ ಕರ್ನಾಟಕ)

**'ಪತ್ರಿಕೋದ್ಯಮಿ ಶಿವರತ್ನ'**
(ವೀರಶೈವ ವಿಚಾರ ವೇದಿಕೆ)

**'ಕರ್ನಾಟಕ ಮಲ್ಲ'**
(ಮುಂಬೈ, ಕನ್ನಡ ಬಳಗ)

**'ಬಹುಮುಖಿ'**
(ಅಭಿಮಾನಿ ಪ್ರಕಾಶನ-
'ಈ ಸಂಜೆ' ಮತ್ತು 'ಅರಗಿಣಿ' ಪತ್ರಿಕೆ ಅಂಗ ಸಂಸ್ಥೆ)

**'ದುಬೈ, ಅಬುದಾಬಿ ಕನ್ನಡ ಬಳಗದಿಂದ ಗೌರವ ಸ್ವೀಕಾರ'**

# ಬೆಳಿಗ್ಗೆ 'ಆದರ್ಶ ಗಂಡ ಹೆಂಡತಿ' ಸಾಯಂಕಾಲ 'ಪೊಲೀಸ್ ನ್ಯೂಸ್' ಸಮಾರಂಭ.....

ಪತ್ರಿಕೆ ನಡೆಸುವವರೆಲ್ಲ ಸಾರ್ವಜನಿಕವಾಗಿ ಸಭೆ ಸಮಾರಂಭ ಏರ್ಪಡಿಸಿ ಜನರಲ್ಲಿ ಜಾಗೃತಿ ಮೂಡಿಸುವ ಕೆಲಸ ಮಾಡುವುದಿಲ್ಲ. ಆದರೆ ನಮ್ಮ ಸಂಪಾದಕರು ತಿಂಗಳಿಗೊಮ್ಮೆ ಪಬ್ಲಿಕ್‌ನಲ್ಲಿ ಅವೇರ್ ನೆಸ್ ಮೂಡಿಸೋ ಕಾರ್ಯ ಕ್ರಮ ಏರ್ಪಡಿಸುತ್ತಿದ್ದರು. ಅದು ಶಾಲಾ ಮೈದಾನದಲ್ಲಾಗಿರ ಬಹುದು, ಜೈಲು ಆವರಣ ಆಗಿರಬಹುದು. ಅಥವಾ ದೊಡ್ಡ ಹಾಲ್‌ನಲ್ಲಿ.



ಜ್ಯೋತಿ ಬೆಳಗುತ್ತಿರುವ ಸಾಂಗ್ಲಿಯಾನ ಹಾಗೂ ಗಣ್ಯರೊಂದಿಗೆ ಸಂಪಾದಕರು



ಪೊಲೀಸ್ ನ್ಯೂಸ್-ಆದರ್ಶ ಗಂಡ ಹೆಂಡತಿ ಜಂಟಿ ಸಮಾರಂಭ




ಸಮಾಲೋಚನೆಯಲ್ಲಿ ಪಾಲ್ಗೊಂಡಿದ್ದ ವೈದ್ಯ ಸಮೂಹ

ಒಟ್ಟಾರೆ, ಒಂದಲ್ಲಾ ಒಂದು ಕಡೆ ಆಗಾಗ ಚಿಂತಕರನ್ನು ಒಂದೆಡೆ ಸೇರಿಸಿ ಜನ ಜಾಗೃತಿ ಸಭೆ ನಡೆಸುತ್ತಿದ್ದರು. 1997-98 ಪೊಲೀಸ್ ನ್ಯೂಸ್ ಬಳಗದ ಎಲ್ಲಾ ಪತ್ರಿಕೆಗಳು ಉಚ್ರಾಯ ಸ್ಥಿತಿಯಲ್ಲಿ ಪ್ರಕಟಗೊಳ್ಳುತ್ತಿದ್ದ ಕಾಲ. ನೀವು ನಂಬಲಾರಿರಿ, ಪೊಲೀಸ್ ನ್ಯೂಸ್ ಸುಮಾರು ಒಂದೂವರೆ ಲಕ್ಷ ಪ್ರತಿ ಪ್ರಿಂಟ್ ಆಗುತ್ತಿತ್ತು.

'ಆದರ್ಶ ಗಂಡ ಹೆಂಡತಿ' ಸುಮಾರು 60 ಸಾವಿರ ಪ್ರತಿ ಮುದ್ರಣಗೊಳ್ಳುತ್ತಿತ್ತು.ಈ ಪುಸ್ತಕದಲ್ಲಿ ಖ್ಯಾತ ವೈದ್ಯರು ಬರೆಯುತ್ತಿದ್ದರು. ಪೊಲೀಸ್ ನ್ಯೂಸ್‌ನಲ್ಲಿ ಕ್ರೈಂ ಸುದ್ದಿಗಳ ಜೊತೆ ಜೊತೆಯಲ್ಲೇ 'ಅಪರಾಧ ವಿಜ್ಞಾನ' ಮಾಹಿತಿಯನ್ನು ನಿಮ್ಹಾನ್ಸ್‌ನ ಆಗಿನ ನಿರ್ದೇಶಕರು ಹಾಗೂ ಮನೋ ಶಾಸ್ತ್ರಜ್ಞ ಸಿ.ಆರ್. ಚಂದ್ರಶೇಖರ್ ಬರೆಯುತ್ತಿದ್ದರು. ರತಿವಿಜ್ಞಾನ, ಸುರತಿ, ಚಕೋರಿ... ಮುಂತಾದ ಪುಸ್ತಿಕೆಗಳಲ್ಲಿ ಬರುತ್ತಿದ್ದ ಅಸಹ್ಯಕರ ಸೆಕ್ಸ್ ನಮ್ಮ 'ಗಂಡ ಹೆಂಡತಿ' ಮಾಸಿಕದಲ್ಲಿ ಮೂಡುತ್ತಿರಲಿಲ್ಲ...

☞ 3



ಸಂಪಾದಕ
**ಎಂ. ರಾಹುಲ್**


**ನನ್ನ ಟೀಂ**

**ಹೆಚ್.ಕೆ. ಮಹದೇವ್**
**ಸಿದ್ದು ಮನ್ನಾಪೂರ**
**ಮೋಹನ್ ಬೋಳಂಗಡಿ**
**ಕೋ.ನಾ. ಪ್ರಭಾಕರ್**
**ವೀರಶೆಟ್ಟಿ ಕುಂಬಾರ**
**ಬಿ.ಎಂ. ಲವಕುಮಾರ್**
**ಶಾಂತರಾಜು ಜಿ. ಕಲ್ಲಹಳ್ಳಿ**
**ಬಿ.ವಿ. ಕುಲಕರ್ಣಿ**
**ಡಿ. ಸಿದ್ದರಾಜು**
**ರಾಜೀವ್ ಕೆ. ಬೈರಿ**
**ಸಂತೋಷ್‌ಕುಮಾರ್ (ಜ್ಯೋತಿಷಿ)**
**ವೀರನಗೌಡ**
**ಮಂಜುನಾಥ ಕರೋಳಿ**

ಅಕ್ಷರ ಜೋಡಣೆ :
**ಈ. ರಾಜೇಶ್**
ಪ್ರಸರಣಾಧಿಕಾರಿ :
**ಜಿ. ವೀರನಗೌಡ**

# ಕಂದಾಯ ಇಲಾಖೆ ಜಾರಿಗೆ ತಂದಿರುವ Round Robin ಪದ್ಧತಿಯಿಂದ ಸಮಸ್ಯೆಗಳ ಮಹಾಪೂರವೇ ಸೃಷ್ಟಿಯಾಗುತ್ತಿದೆ...

ಗ್ರೇಟರ್ ಬೆಂಗಳೂರು ಪ್ರಾಧಿಕಾರವು ಬೆಂಗಳೂರಿನ 5 ಪಾಲಿಕೆಗಳ ಕಂದಾಯ ಇಲಾಖೆ ವಿಭಾಗದಲ್ಲಿ ಜಾರಿಗೆ ತಂದಿರುವ **e-Aasthi** ತಂತ್ರಾಂಶದ **Round Robin** ಪದ್ಧತಿಯು ಬಹಳ ಗೊಂದಲ ಮಯವಾಗಿದೆ ಅನ್ನೋ ದೂರು ಸಾರ್ವಜನಿಕ ವಲಯದಿಂದ ಕೇಳಿ ಬರುತಿದೆ.




ಬೆಂಗಳೂರು ಮಹಾನಗರದ ವ್ಯಾಪ್ತಿಯಲ್ಲಿ **e-Aasthi** ತಂತ್ರಾಂಶ ಖಾತಾಗಳನ್ನು ಕೋರಿ ಪ್ರತೀ ನಿತ್ಯ ಸಾವಿರಾರು ಸಂಖ್ಯೆಯ ಅರ್ಜಿಗಳು ಸಲ್ಲಿಕೆಯಾಗುತ್ತಿದ್ದು, ಇತ್ತೀಚೆಗೆ ಜಾರಿಗೆ ಬಂದಿರುವ **Round Robin** ಪದ್ಧತಿಯ ಅನುಸಾರ ಸಂಬಂಧಪಟ್ಟ ಸಹಾಯಕ ಕಂದಾಯ ಅಧಿಕಾರಿ ಅಥವಾ ಅವರ ಬದಲಾಗಿ ಸಂಬಂಧಪಟ್ಟ **e Khata** ಅರ್ಜಿಗಳು ಬೇರೆ ಬೇರೆ ವಿಭಾಗಗಳ ಕಂದಾಯ ಅಧಿಕಾರಿಗಳು / ಉಪ ವಿಭಾಗಗಳ ಸಹಾಯಕ ಕಂದಾಯ ಅಧಿಕಾರಿಗಳಿಗೆ ವರ್ಗಾವಣೆಯಾಗುತ್ತಿರುವ ಹಿನ್ನೆಲೆಯಲ್ಲಿ, ಎರಡು ಮೂರು ದಿನಗಳ ಒಳಗಾಗಿ ಆಗಬೇಕಿರುವ ಕೆಲಸ ಹತ್ತಾರು ದಿನಗಳ ಕಾಲವಾದರೂ ಸಹ, ನಾಗರಿಕರು **e Khata** ಕೋರಿ ಸಲ್ಲಿಸಿರುವ ಅರ್ಜಿಗಳು ಅನುಮೋದನೆ ದೊರೆತು ವಿಲೇವಾರಿಯಾಗುತ್ತಿಲ್ಲ.

ಸಾವಿರಾರು ಜನರು ಸಲ್ಲಿಸಿರೋ **e Khata** ಅರ್ಜಿಯು ಕಳೆದ ಒಂದೂವರೆ ತಿಂಗಳಿನಿಂದ ಪ್ರತೀ ಎರಡು ದಿನಗಳಿಗೊಮ್ಮೆ ಬೇರೆ ಬೇರೆ ವಿಭಾಗಗಳ ಕಂದಾಯ ಅಧಿಕಾರಿಗಳು / ಉಪ ವಿಭಾಗಗಳ ಸಹಾಯಕ ಕಂದಾಯ ಅಧಿಕಾರಿಗಳಿಗೆ ವರ್ಗಾವಣೆಯಾಗುತ್ತಲೇ ಇದೆ ಎನ್ನಲಾಗುತ್ತಿದೆ. ಆದರೆ, ಈವರೆವಿಗೂ ಅರ್ಜಿದಾರರು ಕೋರಿರುವ ಕಾರ್ಯವು ಸಾಧ್ಯವಾಗದೆ, ಅರ್ಜಿದಾರರು ಪ್ರತಿನಿತ್ಯ ಕಛೇರಿಯಿಂದ ಕಛೇರಿಗೆ ಅಲೆದಾಡುವ ಪರಿಸ್ಥಿತಿ ಎದುರಿಸಬೇಕಾಗಿದೆ.


ಕೆಲ ಅರ್ಜಿಗಳು ಒಮ್ಮೆ ಉತ್ತರಹಳ್ಳಿ ವಿಭಾಗದ ಸಹಾಯಕ ಕಂದಾಯ ಅಧಿಕಾರಿಗಳ ಕಛೇರಿಯ **Login**ನಲ್ಲಿ ಪ್ರತ್ಯಕ್ಷವಾದರೆ, ಮತ್ತೆರಡು ದಿನ ಕಳೆದು ಅರಕೆರೆ ಉಪ ವಿಭಾಗದ ಸಹಾಯಕ ಕಂದಾಯ ಅಧಿಕಾರಿಗಳ **Login**ನಲ್ಲಿ ಪ್ರತ್ಯಕ್ಷವಾಗಿರುತ್ತದೆ. ಮತ್ತೆರಡು ದಿನಗಳ ನಂತರ ಬೇಗೂರು ವಿಭಾಗದ ಸಹಾಯಕ ಕಂದಾಯ ಅಧಿಕಾರಿಗಳ **Login**ನಲ್ಲಿ ಕಾಣಿಸಿಕೊಂಡಿರುತ್ತದೆ.

ಪಾಲಿಕೆಯ ಕಂದಾಯ ಇಲಾಖೆಯ ಸಹಾಯಕ ಕಂದಾಯ ಅಧಿಕಾರಿಗಳು / ಕಂದಾಯ ಅಧಿಕಾರಿಗಳು / ಉಪ ಆಯುಕ್ತರುಗಳಿಗೆ ಸೂಕ್ತವಾದ ತರಬೇತಿಯನ್ನು ನೀಡದೆ, ಏಕಾಏಕಿ ಆತುರಾತುರವಾಗಿ ಇಂತಹ **Round Robin** ಪದ್ಧತಿಯನ್ನು ಜಾರಿಗೆ ತಂದಿರುವುದೇ ಈ ಅಪಸವ್ಯಕ್ಕೆ ಕಾರಣವಾಗಿರುತ್ತದೆ. ಕೆಲವರು ಈಗಾಗಲೇ ಸಲ್ಲಿಸಿರುವ **e khata** ಅರ್ಜಿಗಳಿಗೆ ಸಂಬಂಧಿಸಿದಂತೆ ಪಾಲಿಕೆಯ ಕಂದಾಯ ಇಲಾಖೆಯ ಜಂಟಿ ಆಯುಕ್ತರು ಕಳೆದ ಹತ್ತು ದಿನಗಳಿಂದ ನಿರಂತರವಾಗಿ ಪ್ರಯತ್ನ ಪಡುತ್ತಿದ್ದರೂ ಸಹ ಸದರಿ ಅರ್ಜಿಯು **Round Robin** ಪದ್ಧತಿಯಲ್ಲಿ ಯಾವ ಕಂದಾಯ ಅಧಿಕಾರಿ / ಸಹಾಯಕ ಕಂದಾಯ ಅಧಿಕಾರಿಯ **Login** ನಲ್ಲಿ ಇದೆ ಎಂಬ ಮಾಹಿತಿಯನ್ನು ಪಡೆದುಕೊಳ್ಳಲು ಸಾಧ್ಯವಾಗಿರುವುದಿಲ್ಲ ಎಂಬ ವಿಷಯವು **Round Robin** ಪದ್ಧತಿಯ ಗೋಜಲುಗಳಿಗೆ / ಗೊಂದಲಮಯ ಪರಿಸ್ಥಿತಿಗೆ ಹಿಡಿದ ಕೈಗನ್ನಡಿಯಾಗಿರುತ್ತದೆ.

ಇದೊಂತರ ಮಹಮದ್ ಬಿನ್ ತುಘಲಕ್‌ನ ಹಾಸ್ಯಾಸ್ಪದ ಆಡಳಿತದಂತೆ ಗೋಚರಿಸುತ್ತಿದೆ ಎಂದು ಜನ **GBA** ಸರ್ವಾಧಿಕಾರಿಗಳನ್ನು ಶಪಿಸುತ್ತಿದ್ದಾರೆ. ಹೀಗೆ ಗೋಜಲು ಗೋಜಲಾಗಿರುವ **Round Robin** ಪದ್ಧತಿಯನ್ನು ಈ ಕೂಡಲೇ ರದ್ದು ಪಡಿಸಿ, ಈ ಮೊದಲಿನಂತೆ ಸಂಬಂಧಪಟ್ಟ ಕಂದಾಯ ಅಧಿಕಾರಿಗಳು / ಸಹಾಯಕ ಕಂದಾಯ ಅಧಿಕಾರಿಗಳ ಕಛೇರಿಯಿಂದಲೇ ಸಾರ್ವಜನಿಕರಿಗೆ ಅವಶ್ಯಕತೆ ಇರುವ **e - Aasthi** ತಂತ್ರಾಂಶ ಖಾತಾಗಳನ್ನು ನೀಡುವ ಸಂಬಂಧ ಆದೇಶವನ್ನು ಹೊರಡಿಸಬೇಕೆಂದು ಗ್ರೇಟರ್ ಬೆಂಗಳೂರು ಪ್ರಾಧಿಕಾರದ ಮುಖ್ಯ ಆಯುಕ್ತರನ್ನು ಪತ್ರಿಕೆ ಈ ಮೂಲಕ ಅಗ್ರಹಿಸುತ್ತಿದೆ.

ಇನ್ನೊಂದು ಬಹು ಮುಖ್ಯವಾದ ವಿಚಾರವೇನೆಂದರೆ, ಕಾಂಗ್ರೆಸ್ ಸರ್ಕಾರದ ತುಷ್ಟೀಕರಣ, ಓಲೈಕೆ ರಾಜಕಾರಣದ ಪರಿಣಾಮವಾಗಿ ಕರ್ನಾಟಕದ ಜೈಲುಗಳು ಉಗ್ರರ ಸ್ಲೀಪರ್ ಸೆಲ್‌ಗಳಾಗಿ ಮಾರ್ಪಟ್ಟಿದ್ದು, ರಾಷ್ಟ್ರೀಯ ಸುರಕ್ಷತೆಯ ಹಿತದೃಷ್ಟಿಯಿಂದ ಕೇಂದ್ರ ಸರ್ಕಾರ ಈ ಕೊಡಲೇ ಮಧ್ಯಪ್ರವೇಶಿಸಿ, ಕರ್ನಾಟಕದ ಜೈಲುಗಳಲ್ಲಿ ನಿಯಮಬಾಹಿರವಾಗಿ ಖೈದಿಗಳಿಗೆ ಸಿಗುತ್ತಿರುವ ಸವಲತ್ತುಗಳು, ಅಲ್ಲಿ ನಡೆಯುತ್ತಿರುವ ಅಕ್ರಮ ಚಟುವಟಿಕೆಗಳ ಬಗ್ಗೆ ಎನ್‌ಐಎ ತನಿಖೆ ನಡೆಸಬೇಕಿದೆ ಎಂದು ಬಿಜೆಪಿ ಅಗ್ರಹಿಸಿದೆ. ನಿಜಕ್ಕೂ ಇದು ತುರ್ತಾಗಿ ಆಗಬೇಕಾದ ಕೆಲಸವೇ ಎನ್‌ಐಎ ಸಹಯೋಗದಲ್ಲಿ ಕಾರಾಗೃಹಗಳ ಮೇಲೆ ಕೇಂದ್ರ ಸರ್ಕಾರ ನಿಗಾ ಇಡಬೇಕು. ಈ ವಿಷಯ ಅತ್ಯಂತ ಗಂಭೀರವಾದ ವಿಚಾರ.

ಹಿಡಿಪುಡಿ ರೌಡಿಗಳು ಹೇಗಾದ್ರು ಹಾಳಾಗಲಿ, ಆದ್ರೆ ದೇಶದ್ರೋಹಿ ಉಗ್ರರ ಕೈಗೆ ಮೊಬೈಲ್ ಕೊಟ್ಟಿದ್ದಾರೆ ಅಂದ್ರೆ ಏನರ್ಥ? ಅದೂ ಆಂಡ್ರಾಯ್ಡ್ ಮೊಬೈಲ್! ಈಗ ಮಾಡಿರುವುದು ಸಾಲದು ಅಂತ ಇನ್ನಷ್ಟು ವಿಧ್ವಂಶಕ ಕೃತ್ಯಗಳನ್ನು ಎಸಗಲಿ ಅಂತೇನಾದ್ರೂ ಕಾಂಗ್ರೆಸ್ ಸರ್ಕಾರದ ಜೈಲು ಅಧಿಕಾರಿಗಳು ಹೀಗೆ ಮಾಡಿದ್ದಾರಾ?



ಈ ಸರ್ಕಾರದ ವರ್ತನೆ ಹೇಗಿದೆಯೋ ನೋಡಿ, ಉಗ್ರರ ಕೈಗೆ ಮೊಬೈಲ್ ಕೊಟ್ಟವರನ್ನು ಹಿಡಿದು ಅದೇ ಜೈಲಿಗೆ ಕೂಡುವುದನ್ನು ಬಿಟ್ಟು, ವಿಡಿಯೋ ಬಿಡುಗಡೆ ಮಾಡಿದ್ದು ಯಾರು ಅಂತ ಹುಡುಕುತ್ತಿದೆ! ತಪ್ಪಿತಸ್ಥರನ್ನು ಕೇವಲ ಸಸ್ಪೆಂಡ್ ಟ್ರಾನ್ಸಫರ್ ಮಾಡಿದರೆ ಸಾಲದು... ಒದ್ದು ಜೈಲಿಗೆ ಹಾಕಿ ಕೊಳೆಸಬೇಕು. ಕಠಿಣ ಶಿಕ್ಷೆ ಆಗದ ಹೊರತು ಯಾರೂ ಹೆದರುವುದಿಲ್ಲ, ಇಂಥ ಅಕೃತ್ಯಗಳು ನಿಲ್ಲುವುದಿಲ್ಲ. ಇದು ಮಾನ್ಯ ಗೃಹ ಸಚಿವರಿಗೆ ಅರ್ಥ ಆಗುವುದೆಂತೋ...

**-ಸಂ.**

2 ☞

ಇದರಲ್ಲಿ ಆದರ್ಶ ದಾಂಪತ್ಯ ಕುರಿತು, ದಂಪತಿಗಳಲ್ಲಿ ಸಾಮರಸ್ಯ ಕುರಿತು, ಸಂಸಾರದ ತೊಂದರೆ ತೊಡಕು ಮತ್ತು ಅದಕ್ಕೆ ಪರಿಹಾರ ಕುರಿತು ಸಮೃದ್ಧ ಮಾಹಿತಿ ಪ್ರಕಟಗೊಳ್ಳುತ್ತಿತ್ತು. ಹೀಗಾಗಿ, ನಾಡಿನ ಜನ ಗಂಡ ಹೆಂಡತಿ ಮಾಸಿಕವನ್ನು ಅಕ್ಕರೆಯಿಂದ ಅಪ್ಪಿಕೊಂಡಿದ್ದರು.

ಹೀಗಾಗಿ, ನಮ್ಮ ಸಂಪಾದಕರಾದ ಶ್ರೀ ಎಂ. ಮಲ್ಲಿಕಾರ್ಜುನಯ್ಯನವರು ಆಗಾಗ ಸಾರ್ವಜನಿಕ ಸಭೆ ಸಮಾರಂಭ ಏರ್ಪಡಿಸಿ ಆದರ್ಶ ದಂಪತಿಗಳನ್ನು ಒಟ್ಟಿಗೆ ಸೇರಿಸಿ ತಜ್ಞ ವೈದ್ಯರಿಂದ, ವೈದ್ಯ ಸಾಹಿತಿಗಳಿಂದ ಪ್ರವಚನ ಕೊಡಿಸುತ್ತಿದ್ದರು. ಹಾಗೆಯೇ 'ಪೊಲೀಸ್ ನ್ಯೂಸ್'ಸಂಬಂಧಿತ ಆಗಿನ ಪೊಲೀಸ್ ಕಮಿಷನರ್, ಡಿಸಿಪಿ, ಎಸಿಪಿ, ಪಿಐ ಮುಂತಾದವರನ್ನೆಲ್ಲ ಒಟ್ಟಿಗೆ ಸೇರಿಸಿ ಕ್ರೈಂ ತಡೆ ಕ್ರಮಗಳನ್ನು ವಿವರಿಸಿ ಜನ ಜಾಗೃತಿ ಮೂಡಿಸುತ್ತಿದ್ದರು.

ಈಗ ನೀವಿಲ್ಲಿ ನೋಡ್ತಾ ಇದ್ದೀರಲ್ಲ, ಈ ಸಮಾರಂಭ ನಡೆದದ್ದು 1998 ರಲ್ಲಿ. ಬೆಳಿಗ್ಗೆ 'ಗಂಡ ಹೆಂಡತಿ' ಸಭೆ, ಸಾಯಂಕಾಲ 'ಪೊಲೀಸ್ ನ್ಯೂಸ್' ಸಮಾರಂಭ. ಆಗಿನ ಸೂಪರ್ ಕಾಪ್ ಗಳಾದ ಹೆಚ್ ಟಿ ಸಾಂಗ್ಲಿಯಾನ ಅವರು ಎಲ್. ರೇವಣಸಿದ್ಧಯ್ಯನವರು, ಬಿ.ಎನ್ ಗರುಡಾಚಾರ್.... ಇನ್ನೂ ಮುಂತಾದ ಗಣ್ಯರು ಆಗಮಿಸಿ ಸಂಪಾದಕರ ಕಾರ್ಯ ವೈಖರಿಯನ್ನು ಪ್ರಶಂಶಿಸುವುದರ ಜೊತೆಗೆ ಪಬ್ಲಿಕ್ ಅವೇರ್ ನೆಸ್ ಮೂಡಿಸಿದ್ದಾರೆ. ಅದೇ ರೀತಿ ವೈದ್ಯಕೀಯ ಇಲಾಖೆಯಿಂದ ಡಾ.ಸಿ ಆರ್. ಚಂದ್ರಶೇಖರ್, ಡಾ. ಟಿ.ಎಸ್. ಸತ್ಯನಾರಾಯಣ ರಾವ್, ಡಾ. ವಸುಂಧರ ರಾವ್, ಡಾ. ಹೆಚ್. ಗಿರಿಜಮ್ಮ, ಡಾ.ಪದ್ಮಿನಿ ರಾವ್, ಡಾ. ಸಿ. ಅಶ್ವಥ್, ಇತರೆ ಹೆಸರಾಂತ ವೈದ್ಯರು, ಸಾಹಿತಿಗಳು ಆಗಮಿಸಿದ್ದರು. ಇವರನ್ನೆಲ್ಲ ಸಭೆಗೆ ಸೇರಿಸುವಲ್ಲಿ ವೈದ್ಯ ಸಾಹಿತಿ ಎನ್.ವಿಶ್ವ ರೂಪಾಚಾರ್ ಪ್ರಮುಖ ಪಾತ್ರ ವಹಿಸುತ್ತಿದ್ದರು.ಇದೆಲ್ಲಾ ಈಗ ಸವಿ ಸವಿ ನೆನಪು.... ಸಾವಿರ ನೆನಪು.....



ಆದರ್ಶ ದಂಪತಿಗಳಿಗೆ ಸನ್ಮಾನ ಸಮಾರಂಭ


ಡಿಜಿಪಿ ಎಲ್. ರೇವಣಸಿದ್ದಯ್ಯನವರಿಗೆ ಗೌರವ ಸಮರ್ಪಣೆ

# ಜಮೀನು ಆಸ್ತಿಗಾಗಿ ಸ್ವಂತ ತಮ್ಮನ ಮಗನನ್ನೇ ಬಲಿ ಪಡೆದ ಕೀಚಕರು!



ಕೊಲೆಯಾದ ವಿಶ್ವನಾಥ

**ಅವರಿಬ್ಬರು ಒಂದೇ ತಾಯಿ ಹೊಟ್ಟೆಯಲ್ಲಿ ಹುಟ್ಟಿದ ಮಕ್ಕಳು ಅಕ್ಕ ತಮ್ಮ ಎರಡೂ ದೇಹ ಒಂದೇ ಪ್ರಾಣ ಅಂತ ಬದುಕುತ್ತಿದ್ದವರು. ಅವರೂ ಬೆಳೆದು ದೊಡ್ಡವರಾಗಿ ಬೆಳೆದಿದ್ದವರು. ಅಕ್ಕನಿಗೆ ಮದುವೆಯಾಗಿತ್ತು. ನಂತರದಲ್ಲಿ ತಮ್ಮನಿಗೂ ಮದುವೆ ಮಾಡಿದ್ದರು. ಅಕ್ಕ-ತಮ್ಮನಿಗೆ ಮಕ್ಕಳಿದ್ದವು. ಇಬ್ಬರಿಗೂ ವಯಸ್ಸಾಗಿತ್ತು. ಆದರೆ ಪೂರ್ವಜರ ಆಸ್ತಿಗಾಗಿ ಅಕ್ಕ ತಮ್ಮನ ಮಧ್ಯೆ ಇದ್ದ ಆಸ್ತಿ ಸಂಬಂಧ ಜಗಳ ಮುಗಿದಿರಲಿಲ್ಲ. ಆಸ್ತಿಗಾಗಿ ಅಕ್ಕ ತಮ್ಮನಿಗೆ ಪಾಲು ಕೊಡುವಂತೆ ಜಗಳ ಶುರು ಮಾಡಿದ್ದಳು. ಈ ಅಕ್ಕ-ತಮ್ಮನ ಕುಟುಂಬಸ್ಥರ ಆಸ್ತಿಗಾಗಿ ನಡೆದ ಗಲಾಟೆ ಸ್ವಂತ ತಮ್ಮನ ಮಗನನ್ನೇ ಹತ್ಯೆ ಮಾಡಿರುವುದು ದುರಾದುಷ್ಟಕರ ಸಂಗತಿ. ಈ ಘಟನೆ ನಡೆದಿರುವುದು ಬಾಗಲಕೋಟ ಜಿಲ್ಲೆ ಬೀಳಗಿ ತಾಲ್ಲೂಕಿನ ಲಿಂಗಾಪೂರ ಗ್ರಾಮದಲ್ಲಿ ಜರುಗಿದರ ಬಗ್ಗೆ ಬೀಳಗಿ ಪೊಲೀಸ್ ಠಾಣೆಯಿಂದ ವರದಿಯಾಗಿದೆ.**



ಶವದ ಪಂಚನಾಮೆ

**ಬಾಗಲಕೋಟೆ**

✍ ಮಂಜುನಾಥ ಕರೋಳಿ

**ಕೋ**ಟೆ ನಗರಿ ಬಾಗಲಕೋಟೆ ಜಿಲ್ಲೆ ಸಾಂಸ್ಕೃತಿಕ ಶಿಲ್ಪಕಲೆ ನಾಡು ಎಂದು ಪ್ರಸಿದ್ಧಿ. ಬಾಗಲಕೋಟೆ ಜಿಲ್ಲೆಯ ಬೀಳಗಿ ತಾಲ್ಲೂಕಿನ ಸುಮಾರು ಕಿಲೋಮಿಟರ್ ಅಂತರದ್'ಲ್ಲಿರುವ ಗ್ರಾಮ ಲಿಂಗಾಪೂರ. ಈ ಗ್ರಾಮದ ನಿವಾಸಿಯಾದ ಹನಮಂತ ಮರೆನ್ನವರ ಹಾಗೂ ಈತನ ಸಹೋದರಿ ಹನಮವ್ವ

### ಆಸ್ತಿ ಕಲಹ

ಅಕ್ಕಳಾದ ಯಮುನವ್ವ ಹಾಗೂ ತಮ್ಮನಾದ ಹನಮಂತ ಮರೆನ್ನವರ ಮಧ್ಯೆ ಸುಮಾರು ಏಳು ತಿಂಗಳುಗಳಿಂದ ಆಸ್ತಿ ವಿಚಾರಕ್ಕೆ ಜಗಳ ಶುರುವಾಗಿತ್ತು. ಅಂದರೆ ಹನಮಂತನ ಪೂರ್ವಜರ ಕಾಲದಿಂದ ಸುಮಾರು 10 ಎಕರೆ ಜಮೀನು ಇವರ ಹೆಸರಿನಲ್ಲಿದ್ದು, ಅದರಲ್ಲಿ ಪಾಲು ಕೊಡುವಂತೆ ಅಕ್ಕಳಾದ ಯಮುನವ್ವ ತಮ್ಮನಾದ ಹನಮಂತನ ಜೊತೆ ಕ್ಯಾತೆ ತೆಗೆದಳು. ಅದರಂತೆ ಹನಮಂತ ಮರೆನ್ನವರ ಆಯಿತು ಅಂತ 10 ಎಕರೆ ಜಮೀನಿನಲ್ಲಿ ಒಂದು ಎಕರೆ ಜಮೀನನ್ನು ಅಕ್ಕಳಾದ ಯಮನವ್ವಳ ಹೆಸರಿಗೆ ಬರೆದು



ಎಸ್ಪಿ ಸಿದ್ದಾರ್ಥ ಗೋಯಲ್



ಅ|| ಎಸ್ಪಿ ಪ್ರಸನ್ನ ದೇಸಾಯಿ



ಡಿವೈಎಸ್ಪಿ ಗಜಾನಂದ ಸುತಾರ

ಇನ್ನೂ ಆಸ್ತಿ ಪಾಲು ಕೊಡಲು ನಿರಾಕರಿಸಿದರೆ ನಿನ್ನನ್ನು ಹಾಗೂ ನಿನ್ನ ಕುಟುಂಬದವರನ್ನು ಉಳಿಸುವುದಿಲ್ಲ ಎಂದು ಜೀವ ಬೆದರಿಕೆ ಹಾಕಿದ್ದರಂತೆ. ಈ ನಿಟ್ಟನಲ್ಲಿ ಹನಮಂತನ ಮಗ ವಿಶ್ವನಾಥ ಮರೆನ್ನವರ ಯಾವಾಗ ಬೈಕ್‌ನಲ್ಲಿ ತೆರಳುವಾಗ ರಸ್ತೆಯಲ್ಲಿದ್ದ ಬುಟ್ಟಿಯನ್ನು ತೆಗೆದಿಡುವ ವಿಚಾರವಾಗಿ ವಿಶ್ವನಾಥ ಹಾಗೂ ಯಮುನವ್ವಳ ಕುಟುಂಬಸ್ಥರ ಮಧ್ಯೆ ಗಲಾಟೆ

☞ 14



ಬಂಧಿತ ಕೊಲೆ ಆರೋಪಿಗಳು

ಇಬ್ಬರೂ ಅಕ್ಕತಮ್ಮಂದಿರು. ತಂದೆ-ತಾಯಿ ಆಶ್ರಯದಲ್ಲಿ ಬೆಳೆದು ದೊಡ್ಡವರಾದರು. ಮೊದಲಿಗೆ ಅಕ್ಕಳಾದ ಹನಮವ್ವಳು ಬೆಳೆದು ದೊಡ್ಡವಳಾಗಿದ್ದರಿಂದ ಅವಳನ್ನು ಮದುವೆ ಮಾಡಿಕೊಡಲಾಗಿತ್ತು. ತದನಂತರದಲ್ಲಿ ತಮ್ಮನಾದ ಹನಮಂತನು ವಿದ್ಯೆ ನೈವೇದ್ಯವಾಗಿರದೇ ತಮ್ಮ ಜಮೀನಿನಲ್ಲಿ ಕೂಲಿ ಮಾಡಿಕೊಂಡು ಕೃಷಿ ವಾಣಿಜ್ಯ ಬೆಳೆಗಳನ್ನು ಬೆಳೆಯುತ್ತ ದೊಡ್ಡವನಾಗಿದ್ದನು. ಅವನಿಗೂ ಮದುವೆ ಮಾಡಿದ್ದರು. ಆತನೂ ಸಹ ಒಂದು ಕುಟುಂಬವನ್ನು ಕಟ್ಟಿಕೊಂಡು ಸಂಸಾರವನ್ನು ಸಾಗಿಸಿದ್ದನು. ಅಕ್ಕ ಯಮುನವ್ವಳು ತನ್ನ ಗಂಡನ ಮನೆಯಲ್ಲಿ ತನ್ನದೇ ಆದ ಸಂಸಾರ ಮಾಡಿಕೊಂಡು ಜೀವನ ನಡೆಸಿದ್ದಳು. ಹನಮಂತನಿಗೆ ಮೂರು ಜನ ಮಕ್ಕಳಿದ್ದು, ಮಗಳು ಚೆನ್ನಾಗಿ ಓದಿ ವೈದ್ಯಳಾಗಿದ್ದು, ಹಿರಿಯ ಮಗ ಭೀಮನಗೌಡ ಕೃಷಿ ಮಾಡಿಕೊಂಡಿದ್ದ. ಮೂರನೇ ಮಗ ವಿಶ್ವನಾಥ (26) ಬಿ.ಕಾಂ. ಪದವಿಯನ್ನು ಮುಗಿಸಿದ್ದ.

ಕೊಟ್ಟಿದ್ದರಂತೆ ಇದು ಸಾಕಾಗುವುದಿಲ್ಲ ಇದರಲ್ಲಿ ಇನ್ನೂ ಪಾಲು ಬೇಕು ಅಂತ ಪದೇಪದೇ ತಮ್ಮನೊಟ್ಟಿಗೆ ಪದೇ ಪದೇ ಪೀಡಿಸುತ್ತ ಬಂದಿದ್ದಳಂತೆ.



ಸಿಪಿಐ ಹೆಚ್.ಬಿ. ಸಣ್ಣಮನಿ



ಪಿಎಸ್ಐ ಎಸ್.ಎನ್. ಸಂಗಲದ

### ಜೀವ ಬೆದರಿಕೆ!

ಇನ್ನು ಆಸ್ತಿ ವಿಚಾರವಾಗಿ ಯಮನವ್ವ ಕುಟುಂಬಸ್ಥರು ವಿಶ್ವನಾಥನ ತಂದೆ-ತಾಯಿಗೆ ಬೆದರಿಕೆ ಹಾಕಿದ್ದರು. ಅಂದರೆ ಅಕ್ಕಳಾದ ಯಮನವ್ವ ಸ್ವಂತ ತಮ್ಮನಿಗೆ ನೀನು ತನ್ನ ತಂದೆ-ತಾಯಿಗೆ ತನ್ನ ಸೋದರತ್ತೆ ಜೀವ ಬೆದರಿಕೆ ಒಡ್ಡಿದ್ದರೋ ಆತ ಇನ್ನು ಶಿಕ್ಷಣ ಕಲಿಯುತ್ತಿದ್ದ. ಅದನ್ನು ಅರ್ಧಕ್ಕೆ ಬಿಟ್ಟು ಮರಳಿ ತಮ್ಮ ಗ್ರಾಮವಾದ ಲಿಂಗಾಪೂರ ಗ್ರಾಮಕ್ಕೆ ಬಂದು ತಂದೆ-ತಾಯಿಗೆ ಜೀವ ಬೆದರಿಕೆ ಇದ್ದ ಕಾರಣ ತಂದೆತಾಯಿಯೊಟ್ಟಿಗೆ ಇದ್ದ ವಿಶ್ವನಾಥ ಕೃಷಿಯಲ್ಲಿ ಆಸಕ್ತಿ ಹೊಂದಿದ್ದ. ನಂತರದಲ್ಲಿ ತಮ್ಮ ಜಮೀನಿನಲ್ಲಿ ಕೃಷಿ ಮಾಡಿಕೊಂಡು ತಂದೆ-ತಾಯಿಯೊಂದಿಗೆ ಜೀವನ ಸಾಗಿಸಿರುವಾಗ ಮುಂದೆ ನಡೆದೇ ಹೊಯ್ತು ಒಂದು ದುರಂತ ಅದೆನಂತೆರಾ...

### ಆಸ್ತಿಗಾಗಿ ಬಲಿ ಪಡೆದ ಕೀಚಕರು!

ಸುಮಾರು ತಿಂಗಳಿಂದ ಅಕ್ಕ ಮತ್ತು ತಮ್ಮನ ಮಧ್ಯೆ ನಡೆಯುತ್ತಿದ್ದ ಆಸ್ತಿ ವಿಚಾರವಾಗಿ ಅಂದು ದಿನಾಂಕ ಅಕ್ಟೋಬರ್ 16ರಂದು ಹನಮಂತನ ಮಗ ವಿಶ್ವನಾಥ ಹಾಗೂ ಅವನ ಸಹೋದರ

**ಆ**ಸ್ತಿಗಾಗಿ ಅದೆಷ್ಟೋ ಪ್ರಕರಣಗಳು ದಿನನಿತ್ಯ ಜರುಗುತ್ತಲೇ ಇದೆ. ಆದರೆ ಇರುವುದೊಂದು ಜೀವನ ಕೂತು ಮಾತಾಡಿಕೊಂಡು ಬಗೆಹರಿಸಬಹುದಾದ ವಿಷಯಗಳನ್ನು ಕೊಲೆಯಲ್ಲಿ ಅಂತ್ಯ ಕಾಣುತ್ತಿರುವುದು ಒಂದು ವಿಷಾದನೀಯ ಸಂಗತಿ. ಅಕ್ಕ-ತಮ್ಮ ಇಬ್ಬರೂ ಒಂದೇ ಹೊಟ್ಟೆಯಲ್ಲಿ ಹುಟ್ಟಿದವರು ಆಸ್ತಿಗಾಗಿ ಇಬ್ಬರ ಮಧ್ಯದಲ್ಲಿ ನಡೆದ ಕಲಹ ಒಂದು ಹತ್ಯೆಯಲ್ಲಿ ಬಗೆಹರಿತಾ? ಮುಂದೆ ಬಗೆಹರಿಯುತ್ತಾ? ಎಂಬುದು ಪ್ರಜ್ಞಾವಂತರ ಪ್ರಶ್ನೆ. ದ್ವೇಷಕ್ಕೆ ದ್ವೇಷವೇ ಶತ್ರು ಮಿತ್ರನಾಗಲು ಎಂದಿಗೂ ಸಾಧ್ಯವಿಲ್ಲ. ಹನಮಂತ ತನ್ನ ಸ್ವಂತ ಸಹೋದರಿ ತುಂಡು ಜಮೀನಿಗಾಗಿ ತನ್ನ ಮಗನನ್ನ ಬಲಿ ತೆಗೆದುಕೊಂಡಳು ಎಂದು ಹಿಡಿಶಾಪ ಹಾಕುತ್ತ ಮಗನ ಚಿಂತೆಯಲ್ಲಿ ಮರಗುತ್ತಿದ್ದಾನೆ. ಯಮನವ್ವ ಮತ್ತು ಆಕೆಯ ಕುಟುಂಬದರು ಸೋದರಳಿಯನ್ನು ಕೊಲೆ ಮಾಡಿ ಜೈಲಿನಲ್ಲಿ ಕಂಬಿ ಎಣಿಸುವ ಪರಿಸ್ಥಿತಿ ಎದುರಾಗಿದೆ. ಈ ಘಟನೆಯಿಂದ ಹನಮಂತ ಹಾಗೂ ಕುಟುಂಬಸ್ಥರು ಮಗನ ಕಳೆದುಕೊಂಡ ರೋಧನೆಯಲ್ಲಿದ್ದಾರೆ. ☯

# ಮಕ್ಕಳನ್ನು ಕೊಂದು ತಾಯಿ ಆತ್ಮಹತ್ಯೆ ಮಾಡಿಕೊಂಡಿದ್ದೇಕೆ?

**ಮಕ್ಕಳಿಗೆ ಜನ್ಮಕೊಡುವ ತಾಯಿ ಮಕ್ಕಳ ಬಗ್ಗೆ ಹತ್ತಾರು ಕನಸುಗಳನ್ನು ಕಟ್ಟಿಕೊಂಡಿರುತ್ತಾಳೆ. ಆದರೆ ಆ ಕನಸು ನನಸಾಗುವ ಮುನ್ನವೇ ಕೆಲವೊಮ್ಮೆ ಬದುಕಿನಲ್ಲಿ ನಿರಾಸೆಯ ಕಾರ್ಮೋಡ ಕವಿದು ಬದುಕೇ ಬೇಡವೆನ್ನುವ ಮಟ್ಟಕ್ಕೆ ಹೋಗಿ ಬಿಡುತ್ತದೆ. ಇಂತಹ ಸಂದರ್ಭಗಳಲ್ಲಿ ಧೈರ್ಯವನ್ನು ತಂದುಕೊಂಡು ಬದುಕನ್ನು ಮುನ್ನಡೆಸಬೇಕೇ ವಿನಃ ಆತ್ಮಹತ್ಯೆಗೆ ಶರಣಾಗಿ ಬಿಡುವುದಲ್ಲ... ಇವತ್ತು ಮೈಸೂರು ಜಿಲ್ಲೆಯ ಬೆಟ್ಟದಪುರದಲ್ಲಿ ತಾಯಿಯೊಬ್ಬಳು ಮಕ್ಕಳ ಕೊಂದು ತಾನು ಆತ್ಮಹತ್ಯೆ ಮಾಡಿಕೊಂಡ ಹೃದಯ ವಿದ್ರಾವಕ ಘಟನೆ ನಡೆದು ಹೋಗಿದೆ. ಇಷ್ಟಕ್ಕೂ ಅವಳು ಏಕೆ ಅಂಥದೊಂದು ಕೃತ್ಯಕ್ಕೆ ಮುಂದಾದಳು ಎಂಬುದನ್ನು ನೋಡುತ್ತಾ ಹೋದರೆ ತಾಯಿಯೊಬ್ಬಳ ಒಡಲಾಳದ ನೋವು ಮತ್ತು ಕಷ್ಟದ ಬದುಕು ಮಕ್ಕಳಿಗೆ ಬೇಡವೆನ್ನುವ ನಿರ್ಧಾರ ಎದ್ದು ಕಾಣಿಸುತ್ತದೆ.**

ಇವತ್ತು ಆತ್ಮಹತ್ಯೆಗಳು ಬೇರೆ, ಬೇರೆ ಕಾರಣಗಳಿಗೆ ನಡೆಯುತ್ತಿರುತ್ತದೆ. ಬಹಳಷ್ಟು ಸಂದರ್ಭಗಳಲ್ಲಿ ಹೆತ್ತ ತಾಯಂದಿರು ತಮ್ಮ ಬದುಕಿಗೆ ಇತಿಶ್ರೀ


ಅನ್ಯಾಯವಾಗಿ ಕೊಲೆಯಾದ ಹಸುಳೆಗಳ

ಹೇಳುವ ಮುನ್ನ ತಾವು ಸತ್ತು ಮಕ್ಕಳು ಉಳಿದರೆ ಅವರು ತಬ್ಬಲಿಗಳಾಗುತ್ತಾರೆ. ಅವರು ಕಷ್ಟದಲ್ಲಿಯೇ ಬದುಕಬೇಕಾಗುತ್ತದೆ ಎಂಬ ಕಾರಣಕ್ಕಾಗಿ ಮಕ್ಕಳೊಂದಿಗೆ ಆತ್ಮಹತ್ಯೆ ಮಾಡಿಕೊಳ್ಳುತ್ತಾರೆ. ಇಂತಹದೊಂದು ಘಟನೆಗಳು ಬಹಳಷ್ಟು ನಡೆಯುತ್ತವೆ. ಇನ್ನಷ್ಟು ಪ್ರಕರಣಗಳಲ್ಲಿ ಮಕ್ಕಳನ್ನು ಬಿಟ್ಟು ತಾಯಿಂದಿರು ಆತ್ಮಹತ್ಯೆ ಮಾಡಿಕೊಂಡ ಪರಿಣಾಮ ಮಕ್ಕಳು ಅನುಭವಿಸುವ ಕಷ್ಟಕೋಟಲೆಗಳು ನಮ್ಮ ಮುಂದೆ ಕಾಣಿಸುತ್ತಿರುತ್ತದೆ.

ಯಾವ ತಾಯಿಯೂ ಮಕ್ಕಳನ್ನು ಬಿಟ್ಟು ಅಥವಾ ಮಕ್ಕಳನ್ನು ಕೊಂದು ತಾನು ಆತ್ಮಹತ್ಯೆ ಮಾಡಿಕೊಳ್ಳುವ ನಿರ್ಧಯತೆ ತೋರುವುದಿಲ್ಲ. ಸಂಸಾರದಲ್ಲಿ ಯಾರ ಪ್ರೀತಿ ಸಿಗದಿದ್ದರೂ ಕಟ್ಟಿಕೊಂಡ ಗಂಡ ತನ್ನ ಪರವಾಗಿ ನಿಲ್ಲುತ್ತಾನೆ ಎಂಬ ಧೈರ್ಯವಿದ್ದರೆ ಯಾವ ಹೆಣ್ಣು ಕೂಡ ಆತ್ಮಹತ್ಯೆ ಮಾಡಿಕೊಳ್ಳುವ ನಿರ್ಧಾರ ಮಾಡಿಕೊಳ್ಳುವುದಿಲ್ಲ. ಎಲ್ಲರೂ ತನ್ನ ವಿರುದ್ಧ ನಿಂತಾಗ ಗಂಡನೂ ಹೆಂಡತಿಯ ಕಷ್ಟವನ್ನು ಅರ್ಥ ಮಾಡಿಕೊಳ್ಳಲಿಲ್ಲ ಎಂದರೆ ಅವಳಿಗೆ ಆಕಾಶವೇ ಕಳಚಿ ಬಿದ್ದ ಅನುಭವವಾಗುತ್ತದೆ.

ತಾನು ಏಕಾಂಗಿ, ನನಗೆ ಯಾರಿಲ್ಲ ಎಂಬ ಮಾನಸಿಕ ನೋವು ಕಾಡಲಾರಂಭಿಸುತ್ತದೆ. ಇಂತಹ ಸಂದರ್ಭಗಳಲ್ಲಿ ತಾನು ಹೊತ್ತುಕೊಂಡಿದ್ದ ಕನಸನ್ನು ಗಾಳಿಗೆ ತೂರುತ್ತಾಳೆ. ಬದುಕುವ ಆಸೆಯನ್ನೇ ಕಳೆದುಕೊಳ್ಳುತ್ತಾಳೆ..

**ಮೈಸೂರು**

**ಬಿ.ಎಂ. ಲವಕುಮಾರ್**

ಒಮ್ಮೆ ಮನಸಿನಲ್ಲಿ ಆತ್ಮಹತ್ಯೆ ನಿರ್ಧಾರ ಮಾಡಿಬಿಟ್ಟರೆ ಅವರು ಮೇಲ್ನೋಟಕ್ಕೆ ಎಲ್ಲರೊಂದಿಗೂ ಲವಲವಿಕೆಯಿಂದ ಇದ್ದಂತೆ ಕಂಡರೂ ಒಳಗೊಳಗೆ ತನ್ನ ಸಾವಿಗೆ ತಾನೇ ಮುಹೂರ್ತ ಫಿಕ್ಸ್ ಮಾಡಿಕೊಳ್ಳಲು ಆರಂಭಿಸಿರುತ್ತಾರೆ. ಹೊರ ಜಗತ್ತಿಗೆ ಗೊತ್ತೇ ಆಗದಂತೆ ಕೈಗೊಳ್ಳುವ ಆ ನಿರ್ಧಾರ ಯಾರಿಗೂ ತಿಳಿಯಬಾರದು ಎಂಬುದನ್ನು ಮೊದಲೇ ಮಾಡಿಕೊಳ್ಳುವುದರಿಂದ ತನ್ನ ಎದುರು ಸಿಕ್ಕವರೊಂದಿಗೆ ಖುಷಿ, ಖುಷಿಯಾಗಿಯೇ ಇರುತ್ತಾರೆ. ಹೀಗಾಗಿ ಇಂತಹ ಪ್ರಕರಣಗಳು ನಡೆದಾಗ ನಿನ್ನೆಯಷ್ಟೇ ಸಿಕ್ಕಿದಾಗ ಖುಷಿಯಾಗಿ ಮಾತಾಡಿದ್ದಳು.. ಇವತ್ತು ಹೀಗೆ ಮಾಡಿಕೊಂಡಿದ್ದಾಳೆ ಎಂದು ಜನ ಮಾತಾಡುವುದನ್ನು ನಾವು ಕೇಳುತ್ತಿರುತ್ತೇವೆ. ಬೆಟ್ಟದಪುರದಲ್ಲಿ ನಡೆದ ಘಟನೆಯಲ್ಲಿಯೂ ಅದೇ ಆಗಿದೆ..

ಇನ್ನು ಬದಲಾದ ಕಾಲದಲ್ಲಿಯೂ ಆತ್ಮಹತ್ಯೆಗಳು ನಿಂತಿಲ್ಲ. ಇದಕ್ಕೆ ನಿರ್ಧಿಷ್ಟ ಕಾರಣಗಳು ಇರುವುದೇ ಇಲ್ಲ. ಕೆಲವೊಮ್ಮೆ ಚಿಕ್ಕಪುಟ್ಟ ವಿಚಾರಕ್ಕೂ ಆತ್ಮಹತ್ಯೆಗಳು ನಡೆದುಹೋಗುತ್ತದೆ. ಆದರೆ ಇವತ್ತು ಬೆಟ್ಟದಪುರದಲ್ಲಿ ಮಕ್ಕಳ ಕೊಂದು ತಾನು ಆತ್ಮಹತ್ಯೆ ಮಾಡಿಕೊಂಡ ರಬಿಯಾ ಭಾನು ವಿಚಾರದಲ್ಲಿ ಇದು ಬಹಳಷ್ಟು ಯೋಚಿಸಿಯೇ ಮಾಡಿಕೊಂಡ ನಿರ್ಧಾರ ಎಂಬುದು ಗೊತ್ತಾಗಿ ಬಿಡುತ್ತದೆ. ಇಷ್ಟಕ್ಕೂ ಎರಡು ಹೆಣ್ಣು ಮಕ್ಕಳನ್ನು ಕೊಂದು ತಾನು ಆತ್ಮಹತ್ಯೆ ಮಾಡಿಕೊಳ್ಳುವ ನಿರ್ಧಾರಕ್ಕೆ ಆಕೆ ಬಂದಿದ್ದೇಕೆ?

ಬೆಟ್ಟದಪುರದ ಮಸ್ಲಿಂಬ್ಲಾಕ್‌ನ ಜನ ಇನ್ನೂ ಕೂಡ ಆ ಶಾಕ್‌ನಿಂದ ಹೊರ ಬಂದಿಲ್ಲ. ಅವರಿಗೆ ಬಾಳಿ ಬದುಕಬೇಕಾಗಿದ್ದ ಹೆಣ್ಣುಮಗಳು ಮಕ್ಕಳೊಂದಿಗೆ ರಕ್ತದ ಮಡುವಿನಲ್ಲಿ ಶವವಾಗಿ ಬಿದ್ದಿದ್ದ ದೃಶ್ಯಗಳು ಕಣ್ಮುಂದೆ ಹಾಗೆಯೇ ಉಳಿದು ಹೋಗಿವೆ. ಸದ್ಯಕ್ಕೆ ಮೌನ ನೆಲೆಸಿದೆ. ಆಕೆ ಹಾಗೆ ಮಾಡಬಾರದಿತ್ತು ಎಂದು ಜನ ಮಾತಾಡಿಕೊಳ್ಳುತ್ತಿದ್ದಾರೆ. ಅದು ನಿಜವೂ ಹೌದು.. ಆಕೆ ಮತ್ತು ಮಕ್ಕಳ ಬದುಕು ನಾಳೆ ಹೇಗಿತ್ತೋ ಗೊತ್ತಿಲ್ಲ. ಆದರೆ ತಾನು ಅನುಭವಿಸುವ ನೋವು ಮಕ್ಕಳಿಗೆ ಬೇಡ ಎನ್ನುವ ಕಠಿಣ ನಿರ್ಧಾರಕ್ಕೆ ರಬಿಯಾ ಬಾನು ಬಂದು ಬಿಟ್ಟಿದ್ದಳು. ಹೀಗಾಗಿಯೇ 2 ವರ್ಷದ ಅನಮ್ ಫಾತಿಮಾ ಮತ್ತು ಕೇವಲ 8 ದಿನಗಳ ಹಿಂದೆ ಹುಟ್ಟಿದ್ದ ಹಸುಗೂಸು ಪ್ರಾಣವನ್ನು ಚೆಲ್ಲುವಂತಾಗಿದೆ.


ರಬಿಯಾಬಾನು

ಮಕ್ಕಳಿಲ್ಲದ ಅದೆಷ್ಟೋ ದಂಪತಿಗಳು ಮಕ್ಕಳಿಗಾಗಿ ಪರದಾಡುತ್ತಿರುವಾಗ ಹುಟ್ಟಿದ ಮಕ್ಕಳನ್ನು ಕೊಂದ ಆಕೆಯ ಬಗ್ಗೆ ಏನೇ ಮಾತಾಡಿದರೂ ಆಕೆ ಅಂಥ ಕೃತ್ಯ ಎಸಗಬೇಕಾದರೆ ಮಾನಸಿಕವಾಗಿ ಖಿನ್ನತೆಗೆ ಒಳಗಾಗಿದ್ದಳು ಎನ್ನುವುದು ಅಷ್ಟೇ ಸತ್ಯ. ರಬಿಯಾ



ಬಾನು ಬಗ್ಗೆ ಹೇಳಬೇಕೆಂದರೆ ಬೆಟ್ಟದಪುರ ಮುಸ್ಲಿಂ ಬ್ಲಾಕ್‌ನ ನಿವಾಸಿಯಾಗಿದ್ದ ಇಪ್ಪತ್ತೊಂದು ವರ್ಷದ ಈಕೆಯನ್ನು 3 ವರ್ಷಗಳ ಹಿಂದೆ ಸೈಯದ್ ಮುಸಾವೀರ್ ಎಂಬಾತನಿಗೆ ಕೊಟ್ಟು ಮದುವೆ ಮಾಡಲಾಗಿತ್ತು. ಎರಡು ವರ್ಷಗಳ ಹಿಂದೆ ಅನಮ್ ಫಾತಿಮಾ ಎಂಬ ಹೆಣ್ಣು ಮಗುವಿಗೆ ರಬಿಯಾ ಬಾನು ಜನ್ಮ ನೀಡಿದ್ದಳು. ಆದರೆ ಅದು ವಿಕಲಚೇತನ ಮಗುವಾಗಿತ್ತು. ಹೀಗಿರುವಾಗಲೇ ಮತ್ತೊಮ್ಮೆ ಗರ್ಭಿಣಿಯಾಗಿದ್ದ ಈಕೆ ತವರು ಮನೆ ಬೆಟ್ಟದಪುರಕ್ಕೆ ಬಂದಿದ್ದು ಇಲ್ಲಿಯೇ ಇನ್ನೊಂದು ಹೆಣ್ಣು ಮಗುವಿಗೆ ಜನ್ಮ ನೀಡಿದ್ದಳು.

ಗಂಡು ಮಗುವನ್ನು ಬಯಸುವವರ ನಡುವೆ ಮತ್ತೊಂದು ಮಗು ಕೂಡ ಹೆಣ್ಣಾಗಿರುವುದು ಕುಟುಂಬದಲ್ಲಿ ಬೇಸರ ತರಿಸಿತ್ತು. ಮೊದಲ ಹೆಣ್ಣು ಮಗು ವಿಕಲಚೇತನ, ಎರಡನೇ ಮಗು ಗಂಡಾಗುತ್ತದೆ ಎಂದು ನಿರೀಕ್ಷೆಯಲ್ಲಿದ್ದವರಿಗೆ ಅದು ಹೆಣ್ಣಾಗಿತ್ತು. ಹೀಗಾಗಿ ಮಗುವನ್ನು ಹೆತ್ತ ರಬಿಯಾಬಾನು ಮಾನಸಿಕವಾಗಿ ಕುಗ್ಗಿ ಹೋಗಿದ್ದಳು. ಮುಂದೇನಾಗುತ್ತೋ ಎಂಬ ಭಯವೂ ಆಕೆಯನ್ನು ಕಾಡಲಾರಂಭಿಸಿತ್ತು. ಆದರೆ ಆ ಬಗ್ಗೆ ತೋರಿಸಿಕೊಳ್ಳದ ಆಕೆ ನೋವಿನಲ್ಲಿದ್ದಳು. ಹೆತ್ತವರು ಮಗಳಿಗೆ ಬಾಣಂತನ ಮಾಡುವುದರೊಂದಿಗೆ ಮಗಳು ಮತ್ತು ಮಗುವಿನ ಆರೋಗ್ಯದ ಕಡೆಗೆ ಗಮನಹರಿಸಿದ್ದಳು. ಹೆರಿಗೆಯಾಗಿ ಎಂಟು ದಿನವಾಗಿದ್ದರೂ ಮಗಳ ಮನಸ್ಸಿನಲ್ಲಿ ಅಂಥದೊಂದು ಆಲೋಚನೆ ಬಂದಿದೆ ಎಂಬುದೇ ಅವರಿಗೆ ಗೊತ್ತಾಗಿರಲಿಲ್ಲ. ಆದರೆ ಮಗಳಿಗೆ ಬೇಸರವಿದೆ ಎಂಬುದು ಅರ್ಥವಾಗಿತ್ತು. ಸಮಾಧಾನ ಮಾಡುತ್ತಾ ಬಂದಿದ್ದರು.


ಈ ನಡುವೆ ಅದೇನಾಯಿತೋ ರಬಿಯಾಬಾನು ಮಂಕಾಗಿದ್ದಳು. ಆಕೆಯ ಮನಸ್ಸಿನಲ್ಲಿ ಏನು ಓಡುತ್ತಿದೆ ಎಂಬುದನ್ನು ಅರ್ಥ ಮಾಡಿಕೊಳ್ಳುವಲ್ಲಿ ಮನೆಯವರು ಮತ್ತು ಅಕ್ಕಪಕ್ಕದವರು ವಿಫಲರಾಗಿದ್ದರು. ಆದರೆ ಇನ್ನೂ ಕೇವಲ 22 ವರ್ಷ ವಯಸ್ಸಿನ ಆಕೆ ಬದುಕಿ ಬಾಳಬೇಕಿತ್ತು. ಹೆಣ್ಣು ಮಕ್ಕಳಾದರೂ ಅವರನ್ನು ಸಾಕಿ ಸಲಹಿ ಗಂಡು ಮಕ್ಕಳಿಗೆ ಕಡಿಮೆ ಇಲ್ಲದಂತೆ ಬೆಳೆಸುವ ಗಟ್ಟಿತನ ತೋರಬೇಕಾಗಿತ್ತು. ಆದರೆ ಆಕೆ ಅದ್ಯಾವುದರ ಬಗ್ಗೆ ಆಲೋಚಿಸಲೇ ಇಲ್ಲ. ಚಿಕ್ಕ ವಯಸ್ಸಿಗೆ ಯಾರೂ ಯೋಚಿಸದ ನಿರ್ಧಾರ ಮಾಡಿದ ಅವಳು ಅವತ್ತು ಮಕ್ಕಳನ್ನು ಮುಗಿಸಿ ತಾನು ಇಹ




ಘಟನೆ ನಡೆದ ಮನೆ ಮುಂದೆ ಜನಸ್ತೋಮ

☞14

# ನಿವೃತ್ತ ಡಿಸಿಪಿ ಜಿ.ಎ. ಬಾವಾ ಧರ್ಮಸ್ಥಳ ಪ್ರಕರಣದ ಬಗ್ಗೆ ಬರೆದ ಎಲ್ಲರೂ ಆಲೋಚಿಸುವಂತ ಅಭಿಪ್ರಾಯ...



ನನ್ನ ಸ್ನೇಹಿತ ಬಳಗದ ಹಲವು ಹಿರಿಯ ಅಧಿಕಾರಿಗಳು, ಹಿತೈಷಿಗಳು ಧರ್ಮಸ್ಥಳದ ಕುರಿತು ಒಬ್ಬ ಪೊಲೀಸ್ ಅಧಿಕಾರಿಯಾಗಿ ನಿಮ್ಮ ಅಭಿಪ್ರಾಯ ಏನು ಎಂದು ಕೇಳುತ್ತಾರೆ. ನಾನು ಅನಿಸಿಕೆ ಹೇಳುವುದಕ್ಕೆ ಅಭ್ಯಂತರವಿಲ್ಲ. ಒಟ್ಟಾರೆಯಾಗಿ ಗೊಂದಲ ಮತ್ತು ತಿರುವುಗಳು ಇರುವ ಈ ಪ್ರಕರಣದಲ್ಲಿ ಮಾತನಾಡುವುದೇ ಅಪರಾಧ ಎನ್ನುವ ಭಯ ನನಗೂ ಇದೆ. ಪರ ಮತ್ತು ವಿರೋಧವು ವ್ಯಾಪಕ ಪ್ರಶ್ನೆ ಮತ್ತು ಸವಾಲುಗಳನ್ನು ನನ್ನ ವಿರುದ್ಧ ಸೃಷ್ಟಿಸುತ್ತದೆ, ಟೀಕೆ ಮತ್ತು ಅಪವಾದಗಳನ್ನು ಎದುರಿಸಲಾಗುತ್ತದೆ ಎಂದು ನನಗೆ ತಿಳಿದಿದೆ. ಒಂದು ರೀತಿಯಲ್ಲಿ ಸಂದಿಗ್ಧ ಪರಿಸ್ಥಿತಿಯಲ್ಲಿ ನಾನು ಸಿಕ್ಕಿ ಹಾಕಿಕೊಂಡಂತಹ ಅನುಭವ. ಆದರೆ, ಈ ಸಂದರ್ಭದಲ್ಲಿ ದೀರ್ಘ ಮೌನವಾಗಿರುವುದಕ್ಕೆ ಮನಸ್ಸು ಒಪ್ಪದೇ ಈ ಅನಿಸಿಕೆ ಬರೆದಿದ್ದೇನೆ.

ಧರ್ಮಸ್ಥಳ ಡಾ. ಶ್ರೀ ವೀರೇಂದ್ರ ಹೆಗಡೆಯವರ ಕೈಯಿಂದ ವಿದ್ಯಾರ್ಥಿ ವೇತನ ಪಡೆದು ನಾನು ಕಲಿತವನು. ನನ್ನ ವಿದ್ಯಾಭ್ಯಾಸಕ್ಕೆ ನೆರವು ನೀಡುವ ಜೊತೆ ನನ್ನ ಪ್ರತಿ ಬೆಳವಣಿಗೆಯಲ್ಲಿ ನನಗೆ ಪ್ರೋತ್ಸಾಹ ನೀಡಿದವರು. ಇಂದು ಧರ್ಮಸ್ಥಳ ದೇವಸ್ಥಾನದ ಅನ ಶೈಕ್ಷಣಿಕ ಮತ್ತು ಸಾಮಾಜಿಕ ಸಂಸ್ಥೆಗಳಿಂದ ನೆರವು ಪಡೆದು ಸಾವಿರಾರು ಜನರು ವಿವಿಧ ಕ್ಷೇತ್ರದಲ್ಲಿ ಸೇವೆ ಸಲ್ಲಿಸುತ್ತಿರುವುದು ಕಾಣುತ್ತೇವೆ. ಇಂದು ಉನ್ನತ ಸ್ಥಾನಗಳಲ್ಲಿ ಎಸ್.ಡಿ.ಎಂ.ನಲ್ಲಿ ಕಲಿತವರು ಇದ್ದಾರೆ. ರಾಜಕೀಯ, ಧಾರ್ಮಿಕ, ಶೈಕ್ಷಣಿಕ, ಸಾಮಾಜಿಕ ಮತ್ತು ಅದಕ್ಕಿಂತಲೂ ಮಿಗಿಲಾಗಿ ಲಕ್ಷಾಂತರ ಜನರ ಭಕ್ತಿಯ ಕ್ಷೇತ್ರವಾಗಿ ಧರ್ಮಸ್ಥಳ ಬೆಳೆದು ನಿಂತಿದೆ. ಕರ್ನಾಟಕ ರಾಜ್ಯದ ವಿಧಾನ ಸಭಾ ಸ್ಪೀಕರ್ ಶ್ರೀಯುತ ಯು.ಟಿ. ಖಾದರ್ ಸಾಬ್ ಕೂಡ ಎಸ್.ಡಿ.ಎಂ. ಕಾನೂನು ಕಾಲೇಜಿನಲ್ಲಿ ಕಲಿತವರು.

ಜನರ ಆತ್ಮೀಯ, ಆಧ್ಯಾತ್ಮಿಕ ಕ್ಷೇತ್ರದ ಸುತ್ತ ಆರೋಪ ಮತ್ತು ಅನುಮಾನಗಳು ಸೃಷ್ಟಿಸುವ ಪ್ರಯತ್ನಗಳಿಗೆ ಪೂರ್ಣ ವಿರಾಮ ಹಾಕಲು ಸನ್ಮಾನ್ಯ ಗೃಹಮಂತ್ರಿಗಳಾದ ಶ್ರೀ ಜಿ. ಪರಮೇಶ್ವರ್‌ರವರು ಎಸ್ ಐಟಿ ರಚಿಸಿ ಅದಕ್ಕೆ ಸಂಪೂರ್ಣ ಫ್ರೀ ಹ್ಯಾಂಡ್ ನೀಡಿದ್ದಾರೆ. ಈ ನಡುವೆ ಅವರು ವಿಧಾನಸಭೆಯಲ್ಲಿ ಧರ್ಮಸ್ಥಳದಲ್ಲಿ ನಡೆಯುತ್ತಿರುವ ಎಲ್ಲಾ ಬೆಳವಣಿಗೆಗಳಿಗೆ ಒಂದು ತಾರ್ಕಿಕ ಅಂತ್ಯ ಕೊಡಲಿದ್ದೇವೆ. ನ್ಯಾಯದ ಹೊರತಾದ ಯಾವುದೇ ಪರಿಹಾರ ಇಲ್ಲಿ ಇರುವುದಿಲ್ಲ. ತಪ್ಪು ಯಾರಿಂದ ಸಂಭವಿಸಿದರೂ ಅದು ಕಾನೂನು ಕ್ರಮಕ್ಕೆ ಅರ್ಹ ಆಗಿರುತ್ತದೆ. ಶ್ರೀಕ್ಷೇತ್ರದ ಬಗ್ಗೆ ನಮಗೆಲ್ಲ ಪೂಜನೀಯ ಭಾವನೆ ಇದೆ, ಬಂದಿರುವ ಆರೋಪಗಳ ಬಗ್ಗೆ ನಮಗೂ ಗಂಭೀರ ಆಲೋಚನೆಗಳು ಇದೆ. ತನಿಖೆಯಲ್ಲಿ ಎಲ್ಲಾ ಸತ್ಯವು ಹೊರ ಬರಲಿದೆ ಎಂದಿದ್ದರು.

ಈಗ ನನಗೆ ಏನು ಇದರಲ್ಲಿ ಹೆಚ್ಚಿನದು ಮಾತನಾಡಲು ಇರುವುದಿಲ್ಲ. ನನ್ನ ಆತ್ಮೀಯರೊಬ್ಬರು ಕರೆ ಮಾಡಿ, ಮುಸ್ಲಿಮರು ಈ ಪ್ರಕರಣದಲ್ಲಿ ಮೌನವಾಗಿರುವುದಕ್ಕೆ ನೀವೆಲ್ಲ ನಾಯಕರು ಒತ್ತಾಯಿಸಬೇಕು ಎಂದರು. ಕರೆ ಮಾಡಿದವರು ಒಬ್ಬ ಮುಸ್ಲಿಂ ಪತ್ರಕರ್ತ. ನಾನು ಅವರಿಗೆ ಪ್ರಶ್ನಿಸಿದೆ, ನಮ್ಮ ಸಮುದಾಯದ ಯಾವುದೇ ನಾಯಕರು, ಉಲೇಮಾ ವಿದ್ವಾಂಸರು, ಖಾಜಿಗಳು ಈ ಬಗ್ಗೆ ಮಾತನಾಡಿದ್ದಾರೆಯೇ? ಇಲ್ಲಾ ಎನ್ನುವ ಉತ್ತರ ಬಂತು. ಕೆಲವು ಮುಸ್ಲಿಂ ಸಾಮಾಜಿಕ ಹೋರಾಟಗಾರರು, ರಾಜಕೀಯ ಹಿನ್ನಲೆಯವರು, ವೃತ್ತಿಪರ ಮುಸ್ಲಿಂ ಪತ್ರಕರ್ತರು ಈ ಬಗ್ಗೆ ಮಾತನಾಡಿದ್ದನ್ನು ತಡೆಯಲು ಹೇಗೆ ಸಾಧ್ಯ? ನಾನು ವೈಯುಕ್ತಿಕವಾಗಿ ಮೌನ ಪಾಲಿಸಿದ್ದೇನೆ. ಮುಸ್ಲಿಮರು ಈ ಪ್ರಕರಣದಿಂದ ಅಂತರ ಕಾಯ್ದುಕೊಂಡು ವೀಕ್ಷಕರಾಗಿ ಇರುವುದು ಜಾಣತನ. ಕೆಲವರು ಮುಸ್ಲಿಂ ಸಮಾಜವನ್ನು ಆರೋಪಿ ಸ್ಥಾನದಲ್ಲಿ ನಿಲ್ಲಿಸುವ ಪ್ರಯತ್ನ ಮಾಡುತ್ತಲೇ ಇದ್ದಾರೆ. ಇದರ ಹಿಂದೆ ರಾಜಕೀಯ ಇಚ್ಛಾಶಕ್ತಿ ಮತ್ತು ಷಡ್ಯಂತ್ರವಿದೆ.

ಮುಸ್ಲಿಮರ ಮೇಲಿನ ಆರೋಪವನ್ನು ಸ್ವತಃ ಡಾ. ವೀರೇಂದ್ರ ಹೆಗ್ಗಡೆಯವರೂ ಒಪ್ಪಲಾರರು. ಅವರು ಮುಸ್ಲಿಂ ಸಮಾಜದ ವಿರುದ್ಧ ಒಂದು ಶಬ್ದ ಎತ್ತಿದವರಲ್ಲ. ಯಾವುದೇ ರಾಜಕೀಯ ಮತ್ತು ಸೈದ್ಧಾಂತಿಕ ಸಂಘಟನೆಗಳನ್ನು ಪ್ರತಿನಿಧಿಸಿದವರೂ ಅಲ್ಲ. ಅವರು ಮುಸ್ಲಿಂ ಸಮಾಜಕ್ಕೆ ಉಪಕಾರ ಮಾಡಿದ ಬಹಳಷ್ಟು ಉದಾಹರಣೆಗಳು ಇದೆ. ಕ್ಷೇತ್ರದ ಅಧೀನದ ಯಾವುದೇ ಸಂಸ್ಥೆಯಲ್ಲಿ ಅವರು ತಾರತಮ್ಯ ಮಾಡಿದ ಒಂದೇ ಒಂದು ಉದಾಹರಣೆ ನೀಡಲು ಯಾರಿಗೂ ಸಾಧ್ಯವಿಲ್ಲ, ಎಸ್.ಡಿ.ಎಂ. ಲಾ ಕಾಲೇಜಿನಲ್ಲಿ ಕಲಿತ ಮುಸ್ಲಿಮರು ಕಾನೂನು ವೃತ್ತಿ ಮಾಡುತ್ತಿರುವುದನ್ನು ನಿರಾಕರಿಸಲು ಸಾಧ್ಯವಿಲ್ಲ, ಬೇರೆ ಕ್ಷೇತ್ರದಲ್ಲಿ ಸಾಧನೆ ಮಾಡಿದ್ದನ್ನು ಸ್ಮರಿಸದೆ ಇರಲು ಸಾಧ್ಯವಿಲ್ಲ. ಹಿಂದುಳಿದ ಬೆಳ್ತಂಗಡಿ ತಾಲೂಕಿನ ಅದೆಷ್ಟೋ ಮುಸ್ಲಿಂ ಸಂಸಾರಗಳಿಗೆ ಕ್ಷೇತ್ರದ ವಿವಿಧ ಯೋಜನೆಗಳ ನೆರವು ಸಿಕ್ಕಿದೆ. ಮುಸ್ಲಿಂ ಎಂಬ ಕಾರಣಕ್ಕೆ ವಿರೋಧಿಸಿದ, ಪ್ರಯೋಜನ ನಿರಾಕರಿಸಿದ, ನಿರ್ಲಕ್ಷಿಸಿದ ಯಾವುದೇ ಘಟನೆಯೂ ನನ್ನ ಗಮನಕ್ಕೆ ಬಂದಿಲ್ಲ.

**ಈ ಸಾಮಾಜಿಕ ಮಾಧ್ಯಮ, ವಾಟ್ಸಾಪ್‌ಗಳಲ್ಲಿ ಯಾವುದೇ ಬರಹ, ವಾಯ್ಸ್, ಕಾಮೆಂಟ್‌ಗಳಿಗೆ ಈಗ ಯಾವುದೇ ಮಹತ್ವ ಇರುವುದಿಲ್ಲ. ಅದು ಗೊಂದಲ ಮತ್ತು ಆತಂಕ ನಿರ್ಮಿಸುವುದೇ ಹೊರತು ಪ್ರಸ್ತುತ ಈ ಪ್ರಕರಣಕ್ಕೆ ಯಾವುದೇ ಪರ್ಯಾಯ ನ್ಯಾಯ ವ್ಯವಸ್ಥೆಯನ್ನು ನಿರ್ಮಿಸುವುದಿಲ್ಲ. ಹಾಗಾಗಿ ಸ್ವಲ್ಪ ತಾಳ್ಮೆಯಿಂದ ಕಾಯುವುದು ಉತ್ತಮ.**

ಈ ಸಂದರ್ಭದಲ್ಲಿ ಇದೆಲ್ಲಾ ಏಕೆ ತಾವು ಉಲ್ಲೇಖಿಸುತ್ತಿದ್ದೀರಿ ಎಂದು ಪ್ರಶ್ನಿಸಲು ಮತ್ತು ಇದರ ಮೂಲಕ ಅಲ್ಲಿ ಆಗಿರುವ ತಪ್ಪುಗಳನ್ನು ಮರೆಮಾಚುವ ಪ್ರಯತ್ನ ನಿಮ್ಮದು ಎಂದು ನನ್ನಲ್ಲಿ ಕೇಳುತ್ತೀರಿ ಎಂದು ನನಗೆ ಗೊತ್ತಿದೆ. ನಾನು ಪೊಲೀಸ್ ಇಲಾಖೆಯಲ್ಲಿ ಬಹಳಷ್ಟು ವರ್ಷ ಸೇವೆ ಮಾಡಿದವನು. ಎಷ್ಟೇ ದೊಡ್ಡ ಶಿಫಾರಸು ಇರುವವನು ಅಥವಾ ಬಲಾಢ್ಯನಿಗೂ ನೂರಾರು ಕೊಲೆ ಅಥವಾ ಅತ್ಯಾಚಾರ ಮಾಡಲು ಧೈರ್ಯ ಬರುವುದಕ್ಕೆ ಸಾಧ್ಯವಿಲ್ಲ. ಒಂದು ಎರಡು ಪ್ರಕರಣ ಆದಾಗಲೇ ಅದು ಹೊರಕ್ಕೆ ಬರುತ್ತದೆ. ಕ್ರೈಮ್ ಮಾಡುವುದು ಅಷ್ಟು ಸುಲಭದ ಕೆಲಸವೂ ಅಲ್ಲ. ಮಾಡಿ ರಾಜಾರೋಷವಾಗಿ ಇರುವುದಾದರೆ ಇಂದು ಅದೆಷ್ಟೋ ಬಲಾಢ್ಯರು ಜೈಲಿನಲ್ಲಿ ಇರಲು ಸಾಧ್ಯವಾಗುತ್ತಿರಲ್ಲ.

ನನ್ನ ಹಿರಿಯ ಅಧಿ ಕಾರಿಯೊಬ್ಬರು ಒಂದು ಅಭಿಪ್ರಾಯ ಹೇಳಿದರು, ಲಕ್ಷಾಂತರ ಭಕ್ತರು ಬರುತ್ತಾರೆ, ಇಲ್ಲಿ ಸಾವುಗಳು, ಆತ್ಮಹತ್ಯೆಗಳು ನಡೆದಿದೆ. ಸರಕಾರಿ ನಿಯಮಗಳನ್ನು ಪಾಲಿಸದೇ ಶವಸಂಸ್ಕಾರ ಮಾಡಿರಲೂ ಬಹುದು. ಈ ನಿಯಮ ಉಲ್ಲಂಘನೆಯ ಧರ್ಮಸ್ಥಳದ ಪ್ರತಿಷ್ಠೆಯ ಧೈರ್ಯದಿಂದ ಅಧಿ ಕಾರಿಗಳು ಮಾಡಿರಬಹುದು. ಎಲ್ಲಿಯಾದರೂ ಇವರು ಆರೋಪಿಸುವಂತೆ ಇದ್ದಿದ್ದರೆ ಇಂದು ರಾಜ್ಯದ ಮೂಲೆ ಮೂಲೆಯಲ್ಲೂ ಸಂತ್ರಸ್ತರಿಂದ ಕೇಸು ದಾಖಲು ಆಗುತ್ತಿತ್ತು. ಸಿಕ್ಕಿದ ಸಮಯವನ್ನು ಅನ್ಯಾಯವನ್ನು ಹೇಳಿಕೊಳ್ಳಲು ಸರತಿ ಸಾಲಿನಲ್ಲಿ ಬರುತ್ತಿದ್ದರು.



ಈ ಸಾಮಾಜಿಕ ಮಾಧ್ಯಮ, ವಾಟ್ಸಾಪ್‌ಗಳಲ್ಲಿ ಯಾವುದೇ ಬರಹ, ವಾಯ್ಸ್, ಕಾಮೆಂಟ್‌ಗಳಿಗೆ ಈಗ ಯಾವುದೇ ಮಹತ್ವ ಇರುವುದಿಲ್ಲ. ಅದು ಗೊಂದಲ ಮತ್ತು ಆತಂಕ ನಿರ್ಮಿಸುವುದೇ ಹೊರತು ಪ್ರಸ್ತುತ ಈ ಪ್ರಕರಣಕ್ಕೆ ಯಾವುದೇ ಪರ್ಯಾಯ ನ್ಯಾಯ ವ್ಯವಸ್ಥೆಯನ್ನು ನಿರ್ಮಿಸುವುದಿಲ್ಲ. ಹಾಗಾಗಿ ಸ್ವಲ್ಪ ತಾಳ್ಮೆಯಿಂದ ಕಾಯುವುದು ಉತ್ತಮ.

ಒಟ್ಟು ಪ್ರಕರಣದ ಸಾರಾಂಶ ಕೇಳಿದೆ. ಪ್ರತಿದಿನ ಒಂದೊಂದು ತಿರುವುಗಳು. ಇದೊಂದು ರೀತಿಯಲ್ಲಿ ಯುದ್ಧ ಗೆಲ್ಲುವ ಉತ್ಸಾಹದ, ಜಿದ್ದು, ಹಠ ಮತ್ತು ಪಾಠ ಕಲಿಸುತ್ತೇವೆ ಎನ್ನುವ ಹಂತಕ್ಕೆ ಬಂದು ನಿಂತಿದೆ. ಅದಕ್ಕೆ ಮನರಂಜನೆ ನೀಡಲು ಮಾಧ್ಯಮಗಳ ಮತ್ತು ಯುಟ್ಯೂಬರ್ ಗಳ ಪೈಪೋಟಿ. ಒಂದು ಕಡೆ ಸೈಲೆಂಟಾಗಿ ಪ್ರಕರಣದ ತನಿಖೆಯನ್ನು ಎಸ್‌ಐಟಿ ಮಾಡುತ್ತಿದೆ. ಎರಡೂ ಭಾಗದ ಹೋರಾಟಗಾರರು ಇದನ್ನು ನ್ಯಾಯಯುತವಾಗಿ ತನಿಖೆ ಆಗುತ್ತಿದೆ ಎಂದು ಒಪ್ಪುತ್ತಾರೆ. ವರದಿ ಬರುವ ಮೊದಲೇ ನಾವು ಏಕೆ ಆತುರ ತೋರಿಸಬೇಕು?

ಧರ್ಮಸ್ಥಳ ಪ್ರಕರಣವು ಒಂದು ಹಂತದಲ್ಲಿ ಕರ್ನಾಟಕ ಜನರನ್ನೇ ಗೊಂದಲದಲ್ಲಿ ಸೇರಿಸಿದೆ. ಇದಕ್ಕೆ ಕಾರಣ ಎರಡೂ ಕಡೆಯ ಹೋರಾಟಗಾರರು ಮತ್ತು ಮಾಧ್ಯಮಗಳು. ಇಲ್ಲಿ ಎರಡೂ ಭಾಗದ ಹೋರಾಟಗಾರರಿಗೂ ನ್ಯಾಯ ಮತ್ತು ನೀತಿಗಿಂತ ಹೆಚ್ಚು, ತಕ್ಷಣ ಪ್ರತಿಕ್ರಿಯೆ ಮಾಡಿ ಯಾರನ್ನೋ ಓಲೈಸುವ, ಹೀರೋ ಆಗುವ, ಕೋಪ ತೀರಿಸುವ ಹಂತಕ್ಕೆ ಪ್ರಕರಣ ಬಂದು ನಿಂತಿದೆ. ಇಲ್ಲಿ ಹಲವು ವಿವಿಧ ಹೋರಾಟದ ಸ್ಪರ್ಧೆ ಇದೆ. ಸ್ವಾರ್ಥ ಹಿತಾಸಕ್ತಿ, ದ್ವೇಷ, ಧರ್ಮ ರಕ್ಷಣೆಯ ಸೋಗು, ರಾಜಕೀಯ ಪೈಪೋಟಿ, ಬೂಟಾಟಿಕೆ ಎಲ್ಲಕ್ಕಿಂತಲೂ ಮಿಗಿಲಾಗಿ ಸಾಮಾಜಿಕ ಜಾಲತಾಣದಲ್ಲಿ ಮಿಂಚುವ ಉನ್ಮಾದ ಇದೆ. ಇದೆಲ್ಲವೂ ಅಪರಾಧ ಮತ್ತು ಆರೋಪವನ್ನು ಆಯುಧವಾಗಿಸಿ ಪರಸ್ಪರ ಸ್ಪರ್ಧಿಸುವ ಹಂತಕ್ಕೆ ಬಂದಿದೆ.

ನಮ್ಮ ಈ ಅನಾರೋಗ್ಯಕರ ಪೈಪೋಟಿ ಒಂದು ಕ್ಷೇತ್ರ, ಒಂದು ಸುಂದರ ಸಮಾಜದ ಸ್ವಾಸ್ಥ್ಯ ಕೆಡಿಸುತ್ತದೆ ಎಂದು ಯಾರಿಗೂ ಅರ್ಥವಾಗುತ್ತಿಲ್ಲ. ಕೆಲವರು ಭ್ರಮೆಯಲ್ಲಿ ಮತ್ತು ಕೆಲವರು ಭಯದಲ್ಲಿ ಇದ್ದಾರೆ. ನನ್ನಂಥವರು ಸಾಮಾಜಿಕ ಸೌಹಾರ್ದತೆಗೆ ಇದು ಕೊಳ್ಳಿ ಇಡುತ್ತದೆಯೋ ಎಂಬ ಆತಂಕ ಇದೆ. ಇದುವರೆಗೂ ಎಲ್ಲಾ ಧರ್ಮೀಯ ಸಮಾಜವನ್ನು ಪ್ರೀತಿಸಿದ ವ್ಯಕ್ತಿಯಾದ ಡಾ. ವೀರೇಂದ್ರ ಹೆಗ್ಗಡೆಯವರಿಗೆ ಮಾನಸಿಕ ಮತ್ತು ನೈತಿಕ ಧೈರ್ಯ ಕೊಡಲು ಈ ಸಮಯ ಸೂಕ್ತ ಎಂದು ನಾನು ಭಾವಿಸಿದ್ದೇನೆ. ಅದಕ್ಕಾಗಿ ಧೈರ್ಯ ಮಾಡಿಕೊಂಡು ಈ ಅನಿಸಿಕೆ ಬರೆದಿದ್ದೇನೆ. ಇತ್ತೀಚೆಗೆ ಮುಸ್ಲಿಂ ಯುವ ನಾಯಕರೊಬ್ಬರ ಪತ್ರಿಕಾಗೋಷ್ಠಿ ನೋಡಿದೆ. ಅದರಲ್ಲಿ ಅವರು ಧರ್ಮಸ್ಥಳದ ಬಗ್ಗೆ ಎಲ್ಲಾ ಮುಸ್ಲಿಮರಿಗೆ ಗೌರವ ಇದೆ. ಮುಂದೆಯೂ ಇರುತ್ತದೆ. ಶ್ರೀ ವೀರೇಂದ್ರ ಹೆಗಡೆಯವರ ಬಗ್ಗೆ ಅಭಿಮಾನ ಮತ್ತು ಪ್ರೀತಿ ಇದೆ ಅದು ಹಾಗೇ ಇರುತ್ತದೆ. ಆದರೆ, ಈ ರಾಜಕೀಯ ಪಕ್ಷಗಳು ಮುಸ್ಲಿಮರನ್ನು ಅಪರಾಧಿ ಸ್ಥಾನದಲ್ಲಿ ನಿಲ್ಲಿಸುವುದನ್ನು ಸಹಿಸುವುದಿಲ್ಲಾ ಎಂದಿದ್ದರು.

ಧರ್ಮಸ್ಥಳ ಕ್ಷೇತ್ರದ ಸುತ್ತಲೂ ನಡೆಯುವ ಆರೋಪಗಳ ಹಿಂದೆ ಇರುವ ಸತ್ಯವನ್ನು ಎಸ್‌ಐಟಿ ಹೊರಗೆ ತರಬೇಕು. ಅದು ಯಾರ ಮೇಲೂ ಅನ್ಯಾಯ ಆಗದಂತೆ, ನ್ಯಾಯ ವ್ಯವಸ್ಥೆಯನ್ನು ಜನರು ವಿಶ್ವಾಸ ಮಾಡುವಂತೆ ಇರಬೇಕು. ಕಾರಣ ಇದು ರಾಷ್ಟ್ರದಲ್ಲಿ ಈಗ ದೊಡ್ಡ ಸುದ್ದಿಯಾದ ವಿಷಯ.

ನನ್ನ ಬದುಕಿನಲ್ಲಿ ನಾನು ಎಂತೆಂತಹ ಕೇಸನ್ನು ಹ್ಯಾಂಡಲ್ ಮಾಡಿದ್ದೇನೆ. ಈಗ ಸಾಯನ್ಸ್ ಮತ್ತು ತಂತ್ರಜ್ಞಾನದ ಸಹಾಯ ಇದೆ. ಮಿಗಿಲಾಗಿ ಒಂದು ಕೇಸಿನಲ್ಲಿ ಇಷ್ಟು ಐಪಿಎಸ್ ಅಧಿಕಾರಿಗಳನ್ನು ಸೇರಿಸಿ ತನಿಖೆ ಆಗುತ್ತಿರುವ ರಾಜ್ಯದ ಪ್ರಥಮ ಪ್ರಕರಣ ಇದು. ಎಸ್‌ಐಟಿಯಲ್ಲಿರುವ ಎಲ್ಲಾ ಅಧಿಕಾರಿಗಳು ನಿಷ್ಠುರ, ಪ್ರಾಮಾಣಿಕ ಮತ್ತು ಅನುಭವಿಗಳು. ಹಾಗಾಗಿ ಈ ತನಿಖೆ ಒಂದು ತಾರ್ಕಿಕ ಅಂತ್ಯ ಕಾಣಲಿದೆ. ಅಲ್ಲಿಯವರೆಗೆ ನಾವು ಮೌನವಾಗಿ ವೀಕ್ಷಕರಾಗುವುದು ಉತ್ತಮ.

-ಜಿ.ಎ. ಬಾವಾ
ನಿವೃತ್ತ ಡಿಸಿಪಿ
ಬೆಂಗಳೂರು

# ಕನ್ನೂರಲ್ಲಿ ಕಾಲಿಗೆ ಗುಂಡು ಹಾರಿಸಿ ಹಂತಕನ ಎಡೆಮುರಿ ಕಟ್ಟಿದರು!

ವಿಜಯಪುರ
ರಾಜೀವ್ ಬೈರಿ


ಕೊಲೆಯಾದ ಸಾಗರ್ ಬೆಳ್ಳುಂಡಗಿ ಹಾಗೂ ಇಸಾಕ್ ಕುರೇಷಿ


ಆರೋಪಿ ಅಕ್ಷಯ್

ವಿಜಯಪುರ ಜಿಲ್ಲೆ ಕನ್ನೂರು ಗ್ರಾಮದ ದರ್ಗಾ ರಸ್ತೆ ರಾತ್ರಿ ಸುಮಾರು 10.30 ಸಮಯಕ್ಕೆ ಯಸ್, ಇದೆ ಸಮಯಕ್ಕೆ ಗ್ರಾಮದ ಕುಚುಕು ಗೆಳೆಯರಾದ ಸಾಗರ್ ಬೆಳ್ಳುಂಡಗಿ ಹಾಗೂ ಇಸಾಕ್ ಕುರೇಷಿ ಬೈಕ್ ಮೇಲೆ ಕನ್ನೂರು ಊರಿಗೆ ಬಂದು ಮನೆ ಕಡೆಗೆ ಹೊರಟಿದ್ದರು. ವಿಜಯಪುರದಲ್ಲಿ ಗೆಳೆಯನೊಬ್ಬನ ಕುಪ್ಪಸದ ಕಾರ್ಯಕ್ರಮ ಅಂತ ಬೆಳ್ಳಿಗ್ಗೆ ಮನೆ ಬಿಟ್ಟದರು ಊಟ ಮುಗಿಸಿಕೊಂಡು ಬೈಕ್ ಮೇಲೆ ಹೊರಟಿದ್ದರು. ಇನ್ನೇನು ಮನೆ ತಲುಪಬೇಕು ಅನ್ನೋದ್ರಲ್ಲೆ ಕತ್ತಲೆಯಲ್ಲಿ ಬೈಕ್ ಎದುರು ನಾಲ್ಕು ಹುಡುಗರು ನಿಂತಿರೋದು ಕಂಡಿದೆ. ಅದ್ಯಾರೋ ಗೆಳೆಯರೆ ಇರಬೇಕು ಅನ್ನೋ ಅಂದಾಜಿನಲ್ಲಿ ಬೈಕ್ ಸ್ಲೋ ಮಾಡಿದ್ದಾರೆ. ಅಷ್ಟೇ, ಮೈಮೇಲೆ ಕಲ್ಲುಗಳು ಬೀಳೊದಕ್ಕೆ ಶುರುವಾಗಿವೆ. ನೋಡ ನೋಡುತ್ತಿದ್ದಂತೆ ಸಾಗರ್ ಹಾಗೂ ಇಸಾಕ್ ಇದ್ದ ಬೈಕ್ ಒಂದು ಕಡೆಗೆ ಬಿದ್ದರೆ, ಇಬ್ಬರು ಇನ್ನೊಂದು ಬದಿಗೆ ಬಿದ್ದಿದ್ದಾರೆ.


ಬರ್ಬರವಾಗಿ ಕೊಲೆಯಾಗಿ ಬಿದ್ದಿರುವ ಸಾಗರ್ ಹಾಗೂ ಇಸಾಕ್


ಆರೋಪಿ ಅಕ್ಷಯ್‌ನ ಬೈಕನ್ನು ಪರಿಶೀಲಿಸುತ್ತಿರುವ ಪೊಲೀಸ್ ಅಧಿಕಾರಿಗಳು

ಅಷ್ಟರಲ್ಲೇ ನೋಡಿ ದೊಡ್ಡ ದೊಡ್ಡ ಕಲ್ಲುಗಳನ್ನ ಎತ್ತಿದ ಹಂತಕರು ಸಾಗರ್ ಹಾಗೂ ಇಸಾಕ್ ತಲೆಯ ಮೇಲೆ ಹಾಕಿದ್ದಾರೆ. ಕ್ಷಣಮಾತ್ರದಲ್ಲೆ ಸಾಗರ್ ಹಾಗೂ ಇಸಾಕ್ ತಲೆಗಳು ನುಜ್ಜುಗುಜ್ಜಾಗಿವೆ. ತಲೆಯಲ್ಲಿನ ಮೆದುಳು ಹೊರಗೆ ಬಿದ್ದು ಚೆಲ್ಲಾಡಿದೆ!

ಈ ವಿಚಾರ ಗೊತ್ತಾಗುತ್ತಿದ್ದಂತೆ ಸಾಗರ್ ಹಾಗೂ ಇಸಾಕ್ ಕುಟುಂಬದ ಸದಸ್ಯರು ಓಡೋಡಿ ಸ್ಪಾಟಿಗೆ ಬಂದಿದ್ದಾರೆ. ನೋಡಿದರೆ ಇಬ್ಬರ ದೇಹಗಳು ಚೆಲ್ಲಾಪಿಲ್ಲಿಯಾಗಿ ಬಿದ್ದಿವೆ. ಅತ್ತ ಮುಖವೇ ಗುರ್ತು ಸಿಗದಂತೆ ತಲೆಗಳು ಜಜ್ಜಿ ಹೋಗಿವೆ. ದೊಡ್ಡ ಗಾತ್ರದ ಕಲ್ಲು ಬಿದ್ದ ಕಾರಣ ತಲೆ ಹೋಳು ಹೋಳಾಗಿವೆ. ಈ ವಿಷಯ ಎರಡು ಕುಟುಂಬಗಳ ಮನೆಯಲ್ಲಿ ತಿಳಿಯುತ್ತಿದ್ದಂತೆ ಆಕ್ರಂದನ ಮುಗಿಲು ಮುಟ್ಟಿದೆ.

ಕನ್ನೂರು ಗ್ರಾಮದಲ್ಲಿ ಸಾಗರ್ ಹಾಗೂ ಇಸಾಕ್ ಕುಚುಕು ಗೆಳೆಯರಾಗಿದ್ದರು. ಎಲ್ಲಿ ಅಡ್ಡಾಡಿದರೂ ಇಬ್ಬರು ಕೂಡಿಯೇ ಅಡ್ಡಾಡುತ್ತಿದ್ದರು. ಹಾಗೇ ಹತ್ಯೆಯಾಗೋ ದಿನವೂ ಕಾರ್ಯಕ್ರಮಕ್ಕೂ ಕೂಡಿಯೇ ಹೋಗಿ ವಾಪಸ್ ಊರಿಗೆ ಬಂದಿದ್ದರು. ಆದರೆ, ಹೀಗೆ ಬರ್ಬರವಾಗಿ ಹತ್ಯೆಯಾಗ್ತೀವಿ ಅನ್ನೋ ವಿಚಾರ ಸಾಗರ್ ಹಾಗೂ ಇಸಾಕ್ ತಲೆಯಲ್ಲೂ ಇರಲಿಕ್ಕಿಲ್ಲ. ಇಷ್ಟಾಗುತ್ತಿದ್ದಂತೆ ವಿಜಯಪುರ ಗ್ರಾಮೀಣ ಠಾಣೆ ಪೊಲೀಸರು ಫೀಲ್ಡಿಗಿಳಿದಿದ್ದರು. ಅಲ್ಲಿ ಬಿದ್ದ ಶವಗಳನ್ನ ಪರಿಶೀಲನೆ ಮಾಡಿ ತನಿಖೆ ಶುರು ಮಾಡುತ್ತಿದ್ದಂತೆ ಕೊಲೆಯಾದ ಸಾಗರ್ ಹಾಗೂ ಇಸಾಕ್ ಸಹ ಮರ್ಡರ್ ಆರೋಪಿಗಳು ಅನ್ನೋದು ಗೊತ್ತಾಗಿದೆ. ಇದನ್ನೇ ಆಧಾರವನ್ನಾಗಿಟ್ಟುಕೊಂಡು ತನಿಖೆ ಮುಂದುವರೆಸಿದಾಗ ಗೊತ್ತಾಗಿದ್ದು ಕೊಲೆ ಮಾಡಿದ್ದು ಬೇರೆ ಯಾರು ಅಲ್ಲ, ಅದೇ ಕನ್ನೂರು ಗ್ರಾಮದ ಹುಡುಗರು ಅನ್ನೋದು. 2023ರಲ್ಲಿ ಕೊಲೆಯಾದ ಕನ್ನೂರು ಗ್ರಾಮದ ಈರನಗೌಡ ಪಾಟೀಲ್ ಹುಡುಗರೆ ಈ ಕೃತ್ಯ ಮಾಡಿದ್ದಾರೆ ಎಂದು ನಿರ್ಧಾರಕ್ಕೆ ಬರೋದಕ್ಕು ಪೊಲೀಸರಿಗೆ ಬಹಳ ಟೈಂ ಏನು ಹಿಡಿಯಲಿಲ್ಲ. ಅಷ್ಟರಲ್ಲೇ ಸಾಗರ್ ಹಾಗೂ ಇಸಾಕ್ ಕುಟುಂಬಸ್ಥರು ಗೌಡರ ಹುಡುಗರೇ ಈ ಕೃತ್ಯ ಮಾಡಿದ್ದು ಅಂತಾ ಕಣ್ಣೀರಿಟಿದ್ರು. ಅದರಲ್ಲೂ ಇಸಾಕ್ ತಂದೆ ಮುರ್ತುಸಾಬ್ ಮಾತ್ರ ಗೋಳೋ ಅಂತ ಕಣ್ಣೀರು ಇಡುತ್ತಲೇ ಡೈರೆಕ್ಟ ಆಗಿಯೇ ಗೌಡರ ಹುಡುಗರೇ ಈ ಕೃತ್ಯ ಎಸಗಿದ್ದು ಅಂತಾ ಆರೋಪಿಸಿದ್ದರು.

## ಹತ್ಯೆ ನಡೆದ 24 ಗಂಟೆಗಳಲ್ಲಿ ಪ್ರಕರಣ ಬೇಧಿಸಿದ ಖಾಕಿ!

ಘಟನೆ ನಡೆದ 24 ಗಂಟೆಗಳಲ್ಲೆ ಗ್ರಾಮೀಣ ಠಾಣೆ ಪೊಲೀಸರು ಪ್ರಕರಣ ಬೇಧಿಸಿದ್ದಾರೆ. ಅಂದ್ರೆ ಇರೋ ಹಿಂಟ್‌ಗಳನ್ನೆ ಇಟ್ಟುಕೊಂಡು ಫೀಲ್ಡಿಗಿಳಿದ ಪೊಲೀಸರು ಈರನಗೌಡರ ಹುಡುಗರ ಲೋಕೇಶನ್ ಟ್ರೇಸ್ ಮಾಡಿದ್ದಾರೆ. ಕೆಲ ಪಕ್ಕಾ ಮಾಹಿತಿಗಳನ್ನು ಪಡೆದುಕೊಂಡು ಸಂತೋಷ ಮುತ್ತನಗೌಡ ಪಾಟೀಲ್, ಭರತ್ ದೀಲಿಪಗೌಡ ಪಾಟೀಲ್, ಸಂಜಯ್ ಪಾಟೀಲ್, ಮುಸ್ತಾಕ್ ಪಠಾಣರನ್ನ ಬಂಧಿಸಿದ್ದಾರೆ. ಇಡೀ ಹತ್ಯಾಕಾಂಡದ ಮುಂದಾಳತ್ವ ವಹಿಸಿದ್ದ ಅಕ್ಷಯ್ ಜುಳೆಜುಳೆ ಎಂಬಾತ ಮಾತ್ರ ನಾಪತ್ತೆಯಾಗಿದ್ದ. ಆತನ ಇರುವಿಕೆ ಬಗ್ಗೆ ಮಾಹಿತಿ ಪಡೆದು ಕನ್ನೂರು ಗ್ರಾಮದಲ್ಲಿ ಪೊಲೀಸರು ತಲಾಷ್ ನಡೆಸಿದ್ದಾರೆ. ಈ ವೇಳೆ ಅಕ್ಷಯ್ ಪತ್ತೆಯಾಗಿದ್ದು, ಪೊಲೀಸರ ಮೇಲೆ ಬೈಕ್ ಹರಿಸೋದಕ್ಕೆ ಯತ್ನಿಸಿದ್ದ! ಆಗ ಗ್ರಾಮೀಣ ಸಿಪಿಐ ರಾಯಗೊಂಡ ಜಾನರ್ ಗಾಳಿಯಲ್ಲಿ ಮೂರು ಸುತ್ತು ಗುಂಡು ಹಾರಿಸಿದ್ದಾರೆ. ಇದಕ್ಕೆ ಪ್ರತಿಯಾಗಿ ಅಕ್ಷಯ್ ಮತ್ತೆ ಹಲ್ಲೆಗೆ ಯತ್ನಿಸಿದಾಗ ಮೊಳಕಾಲಿಗೆ ಗುಂಡು ಹೊಡೆದು ವಶಕ್ಕೆ ಪಡೆದಿದ್ದಾರೆ.


ಈರನಗೌಡ


ಈರನಗೌಡನ ಹತ್ಯೆಯ ಪ್ರತಿಕಾರಕ್ಕೆ ಎರಡು ಹೆಣ ಬಿದ್ದು ಹೋದವಾ? ಗೊತ್ತಿಲ್ಲ. ಕಳೆದ 2023ರಲ್ಲಿ ಕನ್ನೂರು ಗ್ರಾಮದ ಊರ ಗೌಡ ಹಾಗೂ ಪಂಚಾಯ್ತಿ ಅಧ್ಯಕ್ಷನಾಗಿದ್ದ ಈರನಗೌಡ ಹತ್ಯೆ ನಡೆದಿತ್ತು. ವಿಜಯಪುರ ಬಾರ್ ಆಂಡ್ ರೆಸ್ಟೋರೆಂಟ್‌ನಲ್ಲಿ ಸಧ್ಯ ಕೊಲೆಯಾಗಿರೋ ಸಾಗರ್ ಹಾಗೂ ಈರನಗೌಡ ನಡುವೆ ಟೆಂಡರ್ ವಿಚಾರವಾಗಿ ವಾಗ್ವಾದ ಉಂಟಾಗಿತ್ತು. ಆಗ ಸಿಟ್ಟಿನಲ್ಲಿ ಸಾಗರ್ ಹಾಗೂ ಇಸಾಕ್ ಸೇರಿ ಬೀಯರ್ ಬಾಟಲಿಯಿಂದ ಈರನಗೌಡ ತಲೆಗೆ ಹೊಡೆದಿದ್ದರು. ಈರನಗೌಡ ಸ್ಪಾಟಲ್ಲೇ ಸತ್ತಿಲ್ಲವಾದರೂ, 23 ತಿಂಗಳ ಕಾಲ ಆಸ್ಪತ್ರೆಯಲ್ಲಿ ನರಳಾಡಿದ್ದ. ಮುಂದೆ 8 ತಿಂಗಳ ಬಳಿಕ ಮನೆಯಲ್ಲಿ ಬ್ರೇನ್ ಹ್ಯಾಮರೇಜ್ ಆಗಿ ಸಾವನ್ನಪ್ಪಿದ್ದ. ಆಗ ಹಲ್ಲೆ ಪ್ರಕರಣ ಮರ್ಡರ್ ಪ್ರಕರಣವಾಗಿ ಕನ್ವರ್ಟ್ ಆಗಿತ್ತು! ಈರನಗೌಡ ಮೇಲೆ ಹಲ್ಲೆ ನಡೆಸಿದ್ದ ಸಾಗರ್ ಹಾಗೂ ಇಸಾಕ್ ಮರ್ಡರ್ ಪ್ರಕರಣದಲ್ಲಿ ಅಂದರ್ ಆಗಿದ್ದರು. ಆರು ತಿಂಗಳ ಜೈಲುವಾಸದ ಬಳಿಕ ಪುನಃ ಊರಿಗೆ ವಾಪಸ್ ಆಗಿದ್ರು. ಸಾಗರ್ ಊರಲ್ಲಿ ಮೊಬೈಲ್ ಅಂಗಡಿ ಇಟ್ಟಿದ್ದರೆ, ಇಸಾಕ್ ಜಮೀನಿನಲ್ಲಿ ಕೃಷಿ ಕೆಲಸ ಮಾಡಿಕೊಂಡಿದ್ದ. ಆದರೆ ಇದೀಗ ರಾತ್ರೋರಾತ್ರಿ ಹೆಣವಾಗಿದ್ದಾರೆ.


ಕನ್ನೂರಿನ ಈರನಗೌಡ ಹತ್ಯೆಯ ಪ್ರತಿಕಾರಕ್ಕೆ ನಡೆದ ಡಬಲ್ ಮರ್ಡರ್ ಅಂತಲೇ ಜನ ಮಾತಾಡ್ತಿದ್ದಾರೆ. ಹಂತಕರನ್ನ ವಶಕ್ಕೆ ಪಡೆದು ಪೊಲೀಸರು ತನಿಖೆ ನಡೆಸಿದಾಗ ಭೀಕರೆ ಹತ್ಯೆಯ ಹಿಂದಿನ ಮತ್ತೊಂದು ಅಸಲಿ ಕಹಾನಿ ಹೊರಬಿದ್ದಿದೆ. ಆ ಇಂಟರೆಸ್ಟಿಂಗ್ ಕಹಾನಿಯನ್ನ ಓದಿಕೊಳ್ಳಿ.

ಡಬಲ್ ಮರ್ಡರ್ ಆರೋಪಿಗಳು ಖಾಕಿ ಕೈಗೆ ಸಿಕ್ಕಿ ಬಿಳ್ತಿದ್ದಂತೆ ಭಯಾನಕ ಕಹಾನಿಗಳು ಹೊರಬೀಳ್ತಿವೆ. ಅದರಲ್ಲೂ ದೊಡ್ಡಪ್ಪನ ಹತ್ಯೆಯ ಸೇಡಿಗೆ ಮಕ್ಕಳೇ ನಡೆಸಿದ್ದ ಕೊಲೆಯ ತಯಾರಿ ಎಂಥವರನ್ನು ಬೆಚ್ಚಿ ಬೀಳಿಸುತ್ತೆ. ಇನ್ನೂ ಎರಡು ಹೆಣಗಳನ್ನ ಇಟ್ಟ ಹಂತಕ ಪಡೆ ಹೆಣಗಳ ಪಕ್ಕ ಮಾಡಿದ ಅದೊಂದು ಕೆಲಸ ಇನ್ನೂ ಭಯಾನಕ!

ಹತ್ಯಾಕಾಂಡದ ಆರೋಪಿಗಳು ಪೊಲೀಸ್ ಬಲೆಗೆ ಬೀಳುತ್ತಿದ್ದಂತೆ ಡಬಲ್ ಮರ್ಡರ್ ಹಿಂದಿನ ಅಸಲಿಗೆ ಈ ಡಬಲ್ ಮರ್ಡರ್ ನಡೆದಿರೋದರ ಹಿಂದಿನ ಕಾರಣವೇ ಈರನಗೌಡನ ಹತ್ಯೆ. ಆದರೆ ಇನ್ನೊಂದು ಇಂಟರೆಸ್ಟಿಂಗ್ ವಿಚಾರ ಅಂದ್ರೆ ಈರನಗೌಡನ ಹೆಣವಿಟ್ಟಿದ್ದ ಸಾಗರ್ ಹಾಗೂ ಇಸಾಕ್‌ರ ಭೀಕರ ಹತ್ಯೆಯಲ್ಲಿ ಪಾಲ್ಗೊಂಡಿದ್ದೆ ಅವರ ತಮ್ಮನ ಮಕ್ಕಳು ಅನ್ನೋದು.

☞ 14


ಆರೋಪಿಗಳಾದ ಸಂತೋಷ್ ಪಾಟೀಲ್, ಮುಸ್ತಾಕ್ ಪಠಾಣ್, ಸಂಜುಗೌಡ ಪಾಟೀಲ್, ಭರತ್



# ನವೆಂಬರ್ ಕ್ರಾಂತಿ ಬ್ರಾಂತಿ ವಾಂತಿ... ಇತ್ಯಾದಿ!

✍ ಮಹದೇವ್ ಕೆಂಪಯ್ಯ

ಸಿದ್ದರಾಮಯ್ಯ ಡಿ.ಕೆ. ಶಿವಕುಮಾರ್ ಜಂಟಿ ಹೋರಾಟದಲ್ಲಿ ಚುನಾವಣೆ ಗೆದ್ದು ರಾಜ್ಯದಲ್ಲಿ ಆಡಳಿತದ ಚುಕ್ಕಾಣಿ ಹಿಡಿದ ಕಾಂಗ್ರೆಸ್ ಸರ್ಕಾರ, ಆಡಳಿತ ಆರಂಭಿಸಿದ ದಿನದಿಂದಲೂ ಮಧ್ಯಂತರದಲ್ಲಿ ಸಿಎಂ ಬದಲಾವಣೆ ವಿಚಾರ ಚರ್ಚೆಗೊಳಪಡುತ್ತಿರುವುದು ಬಹಿರಂಗ ಸತ್ಯ. ನವೆಂಬರ್ ಬಂತಲ್ಲಾ, ಈಗ ಜಾಸ್ತಿಯೇ ಚರ್ಚೆ ಆಗುತ್ತಿದೆ. ಡಿಸಿಎಂ ಡಿಕೆಶಿ ಅವರು ದೆಹಲಿಗೆ ಹೋಗಿ ಬಂದ ಮೇಲಂತು ಬೇರೆಯದ್ದೇ ಬ್ರೇಕಿಂಗ್ ನ್ಯೂಸ್ ಮೊಳಗುತ್ತಿದೆ. ಡಿಕೆಶಿ ಇದೇ ನವೆಂಬರ್‌ನಲ್ಲಿ ಸಿಎಂ ಆಗಿ ಪದಗ್ರಹಣ ಮಾಡಲಿದ್ದಾರೆ ಎಂದು ಮೈಸೂರು ಮೂಲದ ದಿನಪತ್ರಿಕೆಯೊಂದು ಮುಖಪುಟದಲ್ಲಿ ವರದಿ ಮಾಡಿತ್ತು. ಈ ಹಿನ್ನೆಲೆಯಲ್ಲಿ ಸಿಎಂ ಸಿದ್ದರಾಮಯ್ಯ ಅವರನ್ನು ಕೆಲ ಪತ್ರಕರ್ತರು ಪ್ರಶ್ನೆ ಮಾಡಿದ್ದು,ಸಿಎಂ ಕೆರಳಿ ಕೆಂಡವಾಗಿ ಅವರನ್ನು ತರಾಟೆಗೆ ತೆಗೆದುಕೊಂಡ ಘಟನೆ ನಡೆದಿತ್ತು.

'ಯಾವ ಪತ್ರಿಕೆ ರೀ ಅದು ನಾನು ನೋಡದ ಪತ್ರಿಕೆ? ನಾನು ದಿನಾಲು ಪತ್ರಿಕೆಗಳನ್ನು ನೋಡ್ತೇನೆ. ಆದರೆ, ನೀವು ಹೇಳ್ತಾ ಇರೋ ವಿಚಾರ ನಾನು ನೋಡಿಲ್ಲವಲ್ಲ' ಹೀಗೆಂದು ಸಿಎಂ ಸಿದ್ದರಾಮಯ್ಯ ತಮ್ಮನ್ನು ಪ್ರಶ್ನೆ ಮಾಡಿದ ಪತ್ರಕರ್ತನ ಮೇಲೆ ಸಿಡಿಮಿಡಿಗೊಂಡರು.



ಈ ಘಟನೆ ಕಳೆದ ಅಕ್ಟೋಬರ್ 31ರಂದು ವಿಧಾನಸೌಧದಲ್ಲಿ ನಡೆದಿದ್ದು ಬಹುಶಃ ಟಿವಿಗಳಲ್ಲಿ ನೇರ ಪ್ರಸಾರ ನೋಡಿರುತ್ತೀರಿ. ಅವತ್ತು ಎಂದಿನಂತೆ ಸಿಎಂ ಅವರು ವಿಧಾನಸೌಧದಲ್ಲಿ ಮಾಧ್ಯಮ ಮಂದಿಗೆ ಮುಖಾಮುಖಿ ಯಾದರು. ಆಗ ಪ್ರಶ್ನೆಗಳು ಎದುರಾದವು. ಗುಂಪಿನಲ್ಲಿದ್ದ ಪತ್ರಕರ್ತರೊಬ್ಬರು, 'ಸರ್, ಇದೇ ನವೆಂಬರ್‌ನಲ್ಲಿ ಡಿ.ಕೆ. ಶಿವಕುಮಾರ್ ಅವರು ಸಿಎಂ ಆಗಿ ಪದಗ್ರಹಣ ಮಾಡ್ತಾರೆಂದು ದಿನ ಪತ್ರಿಕೆಯೊಂದರಲ್ಲಿ ಬಂದಿದೆ ಸರ್...ಇದರ ಬಗ್ಗೆ ನಿಮ್ಮ ಅಭಿಪ್ರಾಯವೇನು?' ಎಂದು ಕೇಳಿದ್ದರು.

ಇದಕ್ಕೆ ಸ್ವಲ್ಪ ಗರಂ ಆದ ಸಿದ್ದರಾಮಯ್ಯನವರು 'ಯಾರಯ್ಯಾ ನಿನಗೆ ಹೇಳಿದ್ದು? ಅವರೇ ನಿನಗೆ ಹೇಳಿದ್ರಾ.... ನಿನಗೆ ಹೇಗಯ್ಯ ಗೊತ್ತಾಯ್ತು' ಎಂದು ಕೇಳಿದರು.

ಅದಕ್ಕೆ ಉತ್ತರಿಸಿದ ಆ ಪತ್ರಕರ್ತ 'ಇವತ್ತಿನ ಪೇಪರ್‌ನಲ್ಲೇ ಬಂದಿದೆ ಸರ್' ಎಂದರು. ಅದಕ್ಕೆ ಸಿದ್ದರಾಮಯ್ಯ, 'ಯಾವ ಪತ್ರಿಕೆ ರೀ ಅದು? ನಾನು ಕಾಣದ ಪತ್ರಿಕೆ? ನಾನೂ ದಿನಾಲು ಪೇಪರ್ ಓದ್ತೇನೆ ನಾನು ನೋಡಿಲ್ಲವಲ್ಲ' ಎಂದು ಮತ್ತೆ ರೇಗಿದರು.

ಆಗ ಆ ಪತ್ರಕರ್ತ ''ಮೈಸೂರು ಮಿತ್ರ'ದಲ್ಲಿ ಬಂದಿದೆ ಸರ್' ಎಂದರು.

ಅದಕ್ಕೆ ಪ್ರತಿಕ್ರಿಯಿಸಿದ ಸಿದ್ದು 'ಆ ಬಗ್ಗೆ ನನಗೆ ಗೊತ್ತಿಲ್ಲ, ಹೇಗೆ ಬರೆದೆ ಅಂತ ಅವರನ್ನೇ ಕೇಳಿ ಹೋಗಿ' ಎಂದು ಹೇಳಿ ಹೊರಟು ಹೋದರು.

ಆದರೆ, ಸಿಎಂ ಅವರು ಉತ್ತರಿಸದ ಧಾಟಿಯಲ್ಲಿ ಅವರ ಮನಸ್ಸಿಗೆ ಸ್ವಲ್ಪ ಕಿರಿಕಿರಿ ಇದ್ದಂತಿತ್ತು. ಅದು ಪತ್ರಕರ್ತರು ಪದೇ ಪದೇ ಕೇಳಿದ್ದನ್ನೇ ಕೇಳ್ತಾರೆ ಎಂಬ ಬೇಸರವೋ ಅಥವಾ ನಿಜವಾಗಿಯೂ ಹೈಕಮಾಂಡ್‌ನಿಂದ ಏನಾದರೂ ಬದಲಾವಣೆಯ ಮುನ್ಸೂಚನೆ ಸಿಕ್ಕಿದೆಯೋ ಗೊತ್ತಿಲ್ಲ! ಅಂತೂ ಇಂತೂ ಆ ಪ್ರಶ್ನೆಯಿಂದ ಸಿಎಂ ಡಿಸ್ಟರ್ಬ್ ಆಗಿದ್ದಂತೂ ನಿಜ!

**ಯಾವ ಕ್ರಾಂತಿಯು ಇಲ್ಲಾ...**
**ಎಲ್ಲಾ ನಿಮ್ಮ ಬ್ರಾಂತಿ....**



ಸರಿಯಾಗಿ ಗಮನಿಸಿ ನೋಡಿ. ಸಿದ್ದರಾಮಯ್ಯ ಆಗಲಿ ಡಿ.ಕೆ. ಶಿವಕುಮಾರ್ ಆಗಲಿ ನವೆಂಬರ್‌ನಲ್ಲಿ ಅಧಿಕಾರ ಹಂಚಿಕೆ ಆಗುತ್ತೆ ಅಂತ ಯಾವತ್ತೂ ಹೇಳಿಲ್ಲ. ಈ ಮೀಡಿಯಾ ಮಂದಿ ಮಾತ್ರ ನವೆಂಬರ್‌ನಲ್ಲಿ ಕ್ರಾಂತಿ ಆಗುತ್ತೆ... ಕಾಂಗ್ರೆಸ್ ಸರ್ಕಾರದಲ್ಲಿ ಬಿರುಕು ಮೂಡುತ್ತೆ... ಹಾಗೆ ಹೀಗೆ ಅಂತೆಲ್ಲ ಮಸಾಲೆ ರುಬ್ಬುತ್ತಿವೆ. ವಿರೋಧ ಪಕ್ಷಗಳು ಕೂಡ ಇಬ್ಬರ ಮಧ್ಯೆ ತಂದಿಟ್ಟು ವಾಂತಿ ಮಾಡುತ್ತಿವೆ. ರಾಜಕೀಯದಲ್ಲಿ ಇದು ಮಾಮೂಲಿ ಬಿಡ್ರಿ. ಆದರೆ ಒಂದಂತೂ ಸತ್ಯ. ಹೈಕಮಾಂಡ್ ಅಸ್ತು ಅನ್ನದೆ ಕಾಂಗ್ರೆಸ್ ಪಕ್ಷದಲ್ಲಿ ಯಾರ ಮಾತು ನಡೆಯಲ್ಲ. ಇದು ಇಂದಿರಾ ಗಾಂಧಿ ಕಾಲದಿಂದಲೂ ನಡೆದು ಕೊಂಡು ಬಂದಿರುವ ಪದ್ಧತಿ.

ಈಗ ರಾಜ್ಯ ರಾಜಕಾರಣದಲ್ಲಿ ಅಧಿಕಾರ ಹಂಚಿಕೆ ವಿಷಯ ಎದ್ದಿರುವುದು ನಿಜವೇ ಆದರೂ ಸೋನಿಯಾ ಗಾಂಧಿ ಆಗಲಿ, ಎಐಸಿಸಿ ಪ್ರೆಸಿಡೆಂಟ್ ಮಲ್ಲಿಕಾರ್ಜುನ ಖರ್ಗೆ ಅವರಾಗಲಿ ಈ ಬಗ್ಗೆ ಈವರೆವಿಗೂ ತುಟಿ ಬಿಚ್ಚಿಲ್ಲ. ಕೆಲವೇ ದಿನಗಳ ಹಿಂದೆ ಡಿ.ಕೆ. ಶಿವಕುಮಾರ್ ಅವರು ಖರ್ಗೆ ಅವರ ಸದಾಶಿವನಗರದ ಮನೆಗೆ ಹೋಗಿ ಬಂದದ್ದು ಅವರ ಆರೋಗ್ಯ ವಿಚಾರಿಸುವುದಕ್ಕೆ ಹೊರತು ಬೇರೇನೂ ಅಲ್ಲ. ಇನ್ನು ಸಿದ್ದರಾಮಯ್ಯ ಅವರ ಪುತ್ರ ಯತೀಂದ್ರ ಸಿದ್ದರಾಮಯ್ಯ ನೀಡಿರುವ ಹೇಳಿಕೆ ಸಾಕಷ್ಟು ಚರ್ಚೆಗೆ ಗ್ರಾಸವಾಗಿದ್ದು ಸುಳ್ಳಲ್ಲ. ಇನ್ನೊಮ್ಮೆ ನೆನಪಿಸುತ್ತಿದ್ದೇನೆ, ಯತೀಂದ್ರ ಬೆಳಗಾವಿಯಲ್ಲಿ ನಿರ್ಮಾಣಗೊಂಡಿದ್ದ ಕನಕದಾಸರ ಪುಥ್ಥಳಿ ಓಪನಿಂಗ್ ಸೆರಮನಿಗೆ ಗೆಸ್ಟ್ ಆಗಿ ಹೋಗಿದ್ದಾಗ ಕೆಲ ಮಾಧ್ಯಮಗಳು ಅವರಿಗೆ ಮುತ್ತಿಗೆ ಹಾಕಿ, ಮುಖ್ಯಮಂತ್ರಿ ಕುರ್ಚಿ ಬದಲಾವಣೆಯ ಬಗ್ಗೆ ಪ್ರಶ್ನಿಸಿದ್ದವು.

ಅದಕ್ಕೆ ಪ್ರತಿಕ್ರಿಯೆ ನೀಡುತ್ತಾ, ನಮ್ಮ ತಂದೆ ಸಿದ್ದರಾಮಯ್ಯನವರು ತಮ್ಮ ರಾಜಕೀಯ ಜೀವನದ ಅಂತಿಮ ಹಂತದಲ್ಲಿದ್ದಾರೆ. ಈ ಹಂತದಲ್ಲಿ ಅವರಿಗೆ ಬಲವಾದ ಸಿದ್ಧಾಂತ ಮತ್ತು ಪ್ರಗತಿಪರ ಮನಸ್ಥಿತಿಯನ್ನು ಹೊಂದಿರುವ ನಾಯಕನ ಅಗತ್ಯವಿದೆ ಎಂದು ಹೇಳಿದ್ದರು. ಅಲ್ಲದೆ, ನಮ್ಮ ತಂದೆಯವರ ಸಿದ್ಧಾಂತಗಳನ್ನು ಹೋಲುವ ಒಬ್ಬೇ ಒಬ್ಬರು ಅಂದ್ರೆ ಸತೀಶ್ ಜಾರಕಿಹೊಳಿ ಅವರು. ಇವರೇ ಮುಂದಿನ ಉತ್ತರಧಿಕಾರಿ... ಎಂದು ಬಿಟ್ಟಿದ್ದರು. ಹೀಗಾಗಿ, ಸಿದ್ದರಾಮಯ್ಯ ತಮ್ಮ ರಾಜಕೀಯ ಜೀವನದ ಕೊನೆಗಾಲದಲ್ಲೂ ಡಿಕೆಶಿಗೆ ಚೆಕ್‌ಮೇಟ್ ನೀಡಲು ಮುಂದಾಗಿದ್ದಾರೆ ಎಂದು ಬಿಜೆಪಿ ವ್ಯಂಗ್ಯ ಮಾಡಿತ್ತು.

ಒಂದಂತೂ ನಿಜ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಪುತ್ರ ಯತೀಂದ್ರ ಅವರ ಹೇಳಿಕೆಯು ಕರ್ನಾಟಕದಲ್ಲಿ ಮುಖ್ಯಮಂತ್ರಿ ಹುದ್ದೆಗೆ ನಾಯಕತ್ವ ಬದಲಾವಣೆಯ ಬಗ್ಗೆ ಊಹಾಪೋಹಗಳಿಗೆ ಮತ್ತಷ್ಟು ಪುಷ್ಠಿ ನೀಡಿದೆ. ಹಾಗಂತ ಯತೀಂದ್ರ ಅವರ ಅಭಿಪ್ರಾಯವನ್ನ ತಪ್ಪು ಅಂತಲೂ ಹೇಳೋಕೆ ಆಗಲ್ಲ.

ಒಳ್ಳೊಳ್ಳೆ ಸಿದ್ಧಾಂತಗಳನ್ನು ಹೊಂದಿರುವ ಸತೀಶ್ ಜಾರಕಿಹೊಳಿ ಅವರನ್ನು ತಮ್ಮ ತಂದೆಯ ಸಂಭಾವ್ಯ ಉತ್ತರಾಧಿಕಾರಿ ಎಂದು ಹೇಳಿದ್ದು ಕಾಂಗ್ರೆಸ್‌ನಲ್ಲಿ ಭಾರಿ ಚರ್ಚೆ ಹುಟ್ಟುಹಾಕಿದರೂ ಹಾಲಿ ಕಾಂಗ್ರೆಸ್ ಪಕ್ಷದಲ್ಲಿ ಇವತ್ತಿಗೆ ಸಿದ್ದರಾಮಯ್ಯನವರ ಸ್ಥಾನ ತುಂಬಬಲ್ಲ ತಾಕತ್ತು ಸತೀಶ್ ಜಾರಕಿಹೊಳಿ ಅವರಿಗಲ್ಲದೆ ಬೇರಾರಿಗೂ ಇಲ್ಲ ಎಂಬುದು ಓಪನ್ ಸೀಕ್ರೆಟ್!

ರಾಜ್ಯದಲ್ಲಿ ನಾಯಕತ್ವ ಬದಲಾವಣೆಯ ಬಗ್ಗೆ ಬಿರುಸಿನ ಚರ್ಚೆಗಳು ನಡೆಯುತ್ತಿರುವಾಗಲೇ ಸಿದ್ದರಾಮಯ್ಯ ಅವರ ಪುತ್ರ ಯತೀಂದ್ರ ಜಾರಕಿಹೊಳಿ ಹೆಸರು ಘೋಷಣೆ ಮಾಡಿದ್ದು, ಸಿಎಂ ಕುರ್ಚಿಗಾಗಿ ಹಪಾಹಪಿಸುತ್ತ ಕುಂತಿರುವ ಡಿಕೆಶಿ ಮತ್ತವರ ಸಹಚರರಿಗೆ ಬೇಸರ ತರಿಸಿರಬಹುದು. ಆದರೆ ಅದನ್ನು ಬಹಿರಂಗವಾಗಿ ತೋರ್ಪಡಿಸಿಕೊಳ್ಳುವ ಪರಿಸ್ಥಿತಿಯಲ್ಲಿ ಅವರ್‍ಯಾರು ಇಲ್ಲಾ. ಹಾಗಾಗಿಯೇ ಎಲ್ಲರೂ ಕಾಂಗ್ರೆಸ್ ಹೈಕಮ್ಯಾಂಡ್ ನತ್ತ ಬೊಟ್ಟು ಮಾಡಿ ಸೈಲೆಂಟ್ ಆಗಿದ್ದಾರೆ.



ಆದರೆ ಈ ಮೀಡಿಯಾಗಳು ಸುಮ್ನೆ ಬಿಡಬೇಕಲ್ಲ. ಡಿಸಿಎಂ ಡಿ.ಕೆ. ಶಿವಕುಮಾರ್ ಮುಂದೆ ಮುಗಿಬಿದ್ದು ಯತೀಂದ್ರ ಹೀಗಂದ್ರಲ್ಲ... ಹಾಗಂದ್ರಲ್ಲ ಇದಕ್ಕೆ ನೀವೇನು ಹೇಳುತ್ತೀರಿ... ಎಂದು ಪ್ರಶ್ನಿಸಿ ಕುಟುಕುತ್ತಿದ್ದಾರೆ.

ಡಿ.ಕೆ. ಸ್ಟ್ರೈಟ್ ಫಾರ್ವರ್ಡ್ ಗೊತ್ತಲ್ಲ... 'ನವೆಂಬರ್ ಕ್ರಾಂತಿನೂ ಇಲ್ಲಾ ಡಿಸೆಂಬರ್ ಕ್ರಾಂತಿನೂ ಇಲ್ಲಾ ಎಲ್ಲಾ ನಿಮ್ಮ ಬ್ರಾಂತಿ... ಬಿಜೆಪಿಯವರು ಮಾಡುವುದೆಲ್ಲ ವಾಂತಿ...' ಎಂದು ಸರಿಯಾಗಿ ಜಾಡಿಸಿದ್ದಾರೆ. ಡಿ.ಕೆ. ಸೋದರ ಸುರೇಶ್ ಅವರಂತೂ, ಸದ್ಯ ಕುರ್ಚಿ ಬದಲಾವಣೆ ವಿಚಾರ ಇಲ್ಲಾ... ಸಿದ್ದರಾಮಯ್ಯ ಅವರೇ ಪೂರ್ಣ ಅವಧಿ ಇರ್ತಾರೆ, 2028ರ ಚುನಾವಣೆ ಕೂಡ ಅವರ ನೇತೃತ್ವದಲ್ಲೇ ನಡೆಯುತ್ತದೆ.... ಎಂದಿದ್ದಾರೆ. ಅದೇ ದಿವಸ, ಹಣೆಯಲ್ಲಿ ಬರೆದಿದ್ದರೆ ಡಿ.ಕೆ.ಶಿವಕುಮಾರ್ ಮುಖ್ಯಮಂತ್ರಿ ಆಗುತ್ತಾರೆ, ಇಲ್ಲದಿದ್ರೆ ಇಲ್ಲಾ... ಅಂತಲೂ ಹೇಳಿದ್ದಾರೆ. ಅವರ ಧ್ವನಿಯ ಹಿಂದಿನ ನೋವು ಸಂಕಟ ಗುರ್ತಿಸದಿರುವಂಥದ್ದೇನಲ್ಲ.



ಇದರ ಮಧ್ಯೆ ಕಾಂಗ್ರೆಸ್ ಹೈ ಕಮ್ಯಾಂಡ್ ಪಕ್ಷದೊಳಗೆ ಮಹತ್ತರ ಬದಲಾವಣೆ ತರಲು ಸಜ್ಜಾಗಿ, ಸಂಪುಟ ಪುನರ್ರಚನೆಗೆ ಸಿದ್ಧವಾಗಿದೆ. ಮೊನ್ನೆ ಸಿದ್ದರಾಮಯ್ಯ ದೆಹಲಿಗೆ ತೆರಳಿ ಈ ಬಗ್ಗೆ ಚರ್ಚಿಸಿ ಬಂದಿದ್ದಾರೆ. ಮೊದಲೇ ತಿಳಿಸಿದಂತೆ, ಕಾಮರಾಜ್ ಯೋಜನೆಯನ್ನು ಜಾರಿಗೆ ತರಲು ಮುಂದಾಗಿದೆ. ಕಾಮರಾಜ್ ಯೋಜನೆಯು 1963ರಲ್ಲಿ ಆಗಿನ ಮದ್ರಾಸ್ ಮುಖ್ಯಮಂತ್ರಿಯಾಗಿದ್ದ ಕೆ. ಕಾಮರಾಜ್ ಅವರು ಪ್ರಾರಂಭಿಸಿದ ಉಪಕ್ರಮವಾಗಿತ್ತು. ಪಕ್ಷದ ಸಂಘಟನೆಯನ್ನು ತಳಮಟ್ಟದಲ್ಲಿ ಬಲಪಡಿಸುವುದು ಇದರ ಗುರಿಯಾಗಿತ್ತು. ಈಗ ಕಾಂಗ್ರೆಸ್‌ನೇತರು ಅದೇ ಮಾರ್ಗ ಅನುಸರಿಸಲು ಸಿದ್ಧತೆ ನಡೆಸಿದ್ದಾರೆ.

ಆಯಾ ಕ್ಷೇತ್ರದ ರಾಜಕೀಯ ನಾಯಕರ ಕಾರ್ಯಕ್ಷಮತೆ ಮತ್ತು ಭ್ರಷ್ಟಾಚಾರ ಆರೋಪಗಳ ಆಧಾರದ ಮೇಲೆ ಕೆಲವರನ್ನು ಸಚಿವ ಸಂಪುಟದಿಂದ ತೆಗೆದು ಹಾಕಲಾಗುತ್ತದೆ. ಸುಮಾರು 12 ಮಂದಿ ಮುದಿ ಸಚಿವರನ್ನು ತೆಗೆದು ಸಂಪುಟದಿಂದ ಹಾಕಿ, ಅವರನ್ನು ಪಕ್ಷದ ಸಂಘಟನೆಗೆ ಹಚ್ಚಲಾಗುತ್ತದೆ. ಮೊದಲಿಗೆ ಅವಕಾಶ ವಂಚಿತ ಶಾಸಕರನ್ನು ಜೊತೆಗೆ ಆದಷ್ಟು ಹೊಸ ಮುಖಗಳನ್ನು ಸಂಪುಟಕ್ಕೆ ಸೇರಿಸಿಕೊಳ್ಳುವ ನಿರೀಕ್ಷೆಯಿದೆ.

ರಾಜ್ಯ ಸರ್ಕಾರವು ಇದೀಗ ಎರಡೂವರೆ ವರ್ಷಗಳನ್ನು ಪೂರೈಸುತ್ತಿರುವುದರಿಂದ ಸಹಜವಾಗಿಯೇ ಅವಕಾಶ ವಂಚಿತರು ಸಂಪುಟ ಸೇರಲು ಒತ್ತಾಯಿಸುತ್ತಾರೆ. ಹದಿನೈದು ದಿನದ ಹಿಂದಷ್ಟೇ ಡಿಕೆಶಿ ಕೂಡ ಪರ್ಯಾಯ ಮುಖ್ಯಮಂತ್ರಿ ನೇಮಕಕ್ಕೆ ಹೈಕಮಾಂಡ್ ಅನ್ನು ಒತ್ತಾಯಿಸಿದ್ದರು ಎನ್ನಲಾಗಿತ್ತು. ಆದರೀಗ ಅವರ ಬಾಯಿ ಬಂದ್ ಆಗಿದೆ!

ಆದಾಗ್ಯೂ, ರಾಜ್ಯದಲ್ಲಿ ಕಾಮರಾಜ್ ಯೋಜನೆಯನ್ನು ಜಾರಿಗೆ ತಂದರೆ, ಅವರು ರಾಜ್ಯ ಕಾಂಗ್ರೆಸ್ ಪಕ್ಷದ ಅಧ್ಯಕ್ಷ ಪಟ್ಟ ಅಥವಾ ಉಪ ಮುಖ್ಯಮಂತ್ರಿ ಪಟ್ಟ ಎರಡರಲ್ಲಿ ಒಂದನ್ನು ತ್ಯಜಿಸಬೇಕಾಗುತ್ತದೆ! ಹಾಗಾದಲ್ಲಿ ಅವರು ಯಾವ ಹುದ್ದೆ ತ್ಯಜಿಸುತ್ತಾರೆ ಎಂಬ ಕುತೂಹಲವೂ ಪಕ್ಷದಲ್ಲಿದೆ. ಯಾಕೆಂದರೆ, ಅವರು ಅಧ್ಯಕ್ಷ ಕುರ್ಚಿ ಬಿಟ್ಟು ಎದ್ದರೆ, ಅದರ ಮೇಲೆ ಆಸೀನರಾಗಲು ಸತೀಶ್ ಜಾರಕಿಹೊಳಿ ಸಜ್ಜಾಗಿ ನಿಂತಿದ್ದಾರೆ ಎಂಬ ಸುದ್ದಿಯಿದೆ.

ಸಂಪ್ರದಾಯದ ಪ್ರಕಾರ, ಅಧ್ಯಕ್ಷ ಪಟ್ಟದಲ್ಲಿ ಕುಳಿತವರಿಗೆ ಮಾತ್ರ 'ಸಿಎಂ' ಪಟ್ಟ ಕಟ್ಟಬೇಕು. ಆದರೆ, ಕಳೆದ ಚುನಾವಣೆ ಸಂದರ್ಭದಲ್ಲಿ ಸಿದ್ದರಾಮಯ್ಯ ವಿಚಾರದಲ್ಲಿ ಈ ಸಂಪ್ರದಾಯಕ್ಕೆ ಎಳ್ಳು ನೀರು ಬಿಡಲಾಗಿತ್ತು! ಅದೇ ಟಗರು ತಾಖತ್ತು ಅಂತೀರಾ... ಇರಬಹುದೇನೋ!

ಕೋಡಿ ಮಠದ ಶ್ರೀಗಳು ಬೇರೆ ಭವಿಷ್ಯ ನುಡಿದುಬಿಟ್ಟಿದ್ದಾರಲ್ಲ, 'ಹಾಲು ಕೆಟ್ಟರೂ ಹಾಲುಮತ ಕೆಡುವುದಿಲ್ಲ.... ಸಿದ್ದರಾಮಯ್ಯ ತಾನಾಗಿ ಕುರ್ಚಿ ಬಿಡಬೇಕೇ ಒರತು ಅವರನ್ನು ಯಾರೂ ಬಲವಂತವಾಗಿ ಎಬ್ಬಿಸಲಾಗದು...ಎಂದು! ಸೋ, ಸಿದ್ದರಾಮಯ್ಯ ಮತ್ತವರ ಅಭಿಮಾನಿಗಳು ನಿರಾತಂಕ....

ಇನ್ನೊಂದು ಗಮನೀಯ ವಿಚಾರವೇನೆಂದರೆ, ಮೊನ್ನೆ ಮೊನ್ನೆ ಮಾಜಿ ಸಚಿವ ರಾಜಣ್ಣನ ಮನೆಯಲ್ಲಿ ಔತಣಕೂಟ ಏರ್ಪಡಿಸಲಾಗಿತ್ತು. ಅದು ಕಡೆಗಳಿಗೆಯಲ್ಲಿ ರದ್ದಾಗಿದೆ, ದೆಹಲಿಯಲ್ಲಿರುವ ಸಿದ್ದರಾಮಯ್ಯನ ಆಪ್ತರೊಬ್ಬರ ಮನೆಯಲ್ಲಿ ಮುಂದೆ ನಡೆಯಲಿದೆ ಅಂತ ಸುದ್ದಿ ಹಬ್ಬಿತ್ತಾದರೂ ತುರಾತುರಿಯಲ್ಲಿ ಇಲ್ಲೇ ಭೋಜನ ಕೂಟ ನಡೆದಿದೆ. ಅವತ್ತು ರಾಜಣ್ಣನ ಮನೆಗೆ ಗೃಹ ಮಂತ್ರಿ ಜಿ. ಪರಮೇಶ್ವರ ಸೇರಿದಂತೆ ಸಿದ್ದರಾಮಯ್ಯನವರ ಹಿಂಬಾಲಕರೆಲ್ಲಾ ಆಗಮಿಸಿದ್ದರು. ಊಟದ ಬಳಿಕ ಅಲ್ಲಿ ಅದೇನು ಮಾತುಕತೆ ನಡೆಯಿತೋ ಎಂಬುದಿನ್ನು ಬಹಿರಂಗವಾಗಿಲ್ಲ. ಕೆಲವರನ್ನು ಈ ಬಗ್ಗೆ ವಿಚಾರಿಸಿದರೆ, ವಿಶೇಷವೇನಿಲ್ಲ... ಮಾಮೂಲಿ ಊಟದ ಕಾರ್ಯಕ್ರಮ ಎಂದು ಕಾಗೆ ಹಾರಿಸುತ್ತಾರೆ. ಹೇಳಿ ಕೇಳಿ ರಾಜಣ್ಣ ಸಿದ್ದರಾಮಯ್ಯನ ಭಂಟ. ಡಿಕೆಶಿ ಏನಾದರೂ ಖುರ್ಚಿ ಬದಲಿಸುವ ವಿಚಾರದಲ್ಲಿ ಒಳಸಂಚು ನಡೆಸುತ್ತಿದ್ದರೆ ಆ ಬಗ್ಗೆ ಚರ್ಚೆ ನಡೆಸಿರಬಹುದು, ಸಿದ್ದರಾಮಯ್ಯನ ಕೈ ಬಲಪಡಿಸಲು ಮುಂದೆ ಏನೇನು ಮಾಡಬೇಕೋ ಆ ಬಗ್ಗೆ ಚರ್ಚಿಸಿರಬೇಕು ಅಷ್ಟೇ. ಈ ಬಗ್ಗೆ ಸದ್ಯ ಡಿಕೆಶಿ ಅವರಿನ್ನು ಪ್ರತಿಕ್ರಿಯಿಸಲ್ಲವಷ್ಟೇ. ಒಟ್ಟಾರೆ, ಎಲ್ಲವೂ ಬೂದಿ ಮುಚ್ಚಿದ ಕೆಂಡದಂತಿದೆ! ನವೆಂಬರ್ ಕಳೆದು ಕೆಂಡದ ಮೇಲಣ ಬೂದಿ ಹಾರಿದಾಗ ಮಾತ್ರ ಕಾಂಗ್ರೆಸ್ ಒಳಪು ಗೋಚರಿಸಬಹುದು! ☯

# ವಿಕೃತ ಕಾಮಿಗೆ, ಉಗ್ರನಿಗೆ ರಾಜಾತಿಥ್ಯ! ಸೆಂಟ್ರಲ್ ಜೈಲ್‌ಗೆ ಮೇಜರ್ ಸರ್ಜರಿ!!

**ಬೆಂಗಳೂರು ಪರಪ್ಪನ ಅಗ್ರಹಾರ ಜೈಲಿನಲ್ಲಿ ಏನೆಲ್ಲಾ ಅಕ್ರಮ ನಡೆದರೂ ಮೊದಲಿಗೆ ಸುದ್ದಿ ಆಗೋದು 'ಪೊಲೀಸ್ ನ್ಯೂಸ್'ನಲ್ಲೇ. ಇದಕ್ಕೆ ಕಾರಣ ಪತ್ರಿಕೆಗೂ 'ಅಭಿಮಾನಿ'ಗಳಿಗೂ ನಡುವೆ ಇರುವ 'ಬಾಂಧವ್ಯ'ವೇ ಹೊರತು ಬೇರೇನಲ್ಲ. ದರ್ಶನ್ ರಗ್ಗು ದಿಂಬು ಪ್ರಕರಣ ಹೊತ್ತಿಕೊಂಡು ಉರಿಯುವಾಗಲೇ ಪತ್ರಿಕೆ ಬರೆದಿತ್ತು, ಜೈಲ್ ಒಳಗಡೆ ಇನ್ನೂ ಹಲವಾರು ವಿಡಿಯೋಸ್ ಇವೆಯಂತೆ, ಯಾವಾಗ ಬೇಕಾದ್ರೂ ರಿಲೀಸ್ ಆಗಬಹುದು...ಅಂತ! ವಿಕೃತಕಾಮಿ ಉಮೇಶ್ ರೆಡ್ಡಿ ಫೋಟೋ ಹಾಕಿಯೇ ವರದಿ ಪ್ರಕಟಿಸಿದ್ದೆವು. ಅದೀಗ ನಿಜವಾಗಿದೆ... ಈ ವಿಚಾರ ಒತ್ತಟ್ಟಿಗಿರಲಿ, ಇದೀಗ ಉಗ್ರನಿಗೆ ಹಾಗೂ ವಿಕೃತಕಾಮಿಗೆ ಟಿವಿ, ಮೊಬೈಲು ಕೊಟ್ಟು ಸಿಕ್ಕಿಬಿದ್ದಿರೋ ಕಾರಣಕ್ಕೆ ಸೆಂಟ್ರಲ್ ಜೈಲಿಗೆ ಮೇಜರ್ ಸರ್ಜರಿ ಮಾಡಲಾಗಿದೆ. ಚೀಫ್ ಸೂಪರಿಂಟೆಂಡೆಂಟ್ ಸುರೇಶ್ ಅವರನ್ನು ಎತ್ತಂಗಡಿ ಮಾಡಿ, ಅವರ ಜಾಗಕ್ಕೆ ಅಂಶುಕುಮಾರ್ ಅವರನ್ನು ನೇಮಿಸಲಾಗಿದೆ. ಅಲ್ಲದೆ ಮುಖ್ಯ ಅಧೀಕ್ಷಕ ಮ್ಯಾಗೇರಿ ಹಾಗೂ ಸಹಾಯಕ ಅಧೀಕ್ಷಕ ಅಶೋಕ್ ಭಜಂತ್ರಿಯನ್ನು ಸಸ್ಪೆಂಡ್ ಮಾಡಲಾಗಿದೆ.**





**ಬೆಂಗಳೂರು**
✍ ಹೆಚ್.ಕೆ. ಮಹದೇವ್

ಕರ್ನಾಟಕ ರಾಜ್ಯದ ಅತಿದೊಡ್ಡ ಜೈಲ್ ಆಗಿರುವ ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದಲ್ಲಿ ವಿಕೃತಕಾಮಿ ಉಮೇಶ್ ರೆಡ್ಡಿಗೆ, ಐಸಿಸ್ ಉಗ್ರ ಶಕೀಲ್ ಗೆ ಹಾಗೂ ಇತರೆ ಕೆಲ ಪಾತಕಿಗಳಿಗೆ ಮೊಬೈಲು, ಟಿವಿ, ಹಾಸಿಗೆ ಮಂಚ ಕೊಟ್ಟು 'ರಾಜಾತಿಥ್ಯ' ಕಲ್ಪಿಸಿರುವ ಬಗ್ಗೆ ವಿಡಿಯೋ ತುಣುಕುಗಳು ಬಿಡುಗಡೆಯಾಗಿ ಬಿರುಗಾಳಿಯನ್ನೇ ಎಬ್ಬಿಸಿಬಿಟ್ಟಿವೆ!



ಸ್ವತಃ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರೇ ಮುಂದೆ ನಿಂತು ತನಿಖೆ ಮಾಡಿಸುತ್ತಿದ್ದಾರೆ. ದಕ್ಷ ಹಾಗೂ ಪ್ರಾಮಾಣಿಕ ಎಡಿಜಿಪಿ ದಯಾನಂದ ಅವರು ರಾಜ್ಯ ಕಾರಾಗೃಹ ಇಲಾಖೆಗೆ ಮುಖ್ಯಸ್ಥರಾಗಿ ಬಂದ ಬಳಿಕವೂ ಜೈಲ್ ಒಳಗೆ ಇಂಥ ಅಪಸವ್ಯ ಘಟನೆ ನಡೆಯುತ್ತಿರುವುದು ಮಹದಾಶ್ಚರ್ಯವಾಗಿದೆ!

ಈಗ ಸೆಂಟ್ರಲ್ ಜೈಲ್‌ನಲ್ಲಿ ನಡೆದಿರುವುದೇನೆಂದರೆ, ಶಂಕಿತ ಐಸಿಸ್ ಉಗ್ರ ಶಕೀಲ್, ವಿಕೃತಕಾಮಿ ಉಮೇಶ್ ರೆಡ್ಡಿ ಹಾಗೂ ಚಿನ್ನ ಕಳ್ಳಸಾಗಾಣಿಕೆ ಪ್ರಕರಣದ ಆರೋಪಿ ನಟಿ ರನ್ಯಾ ರಾವ್ ಗೆಳೆಯ ತರುಣ್ ಕೊಂಡರಾಜು... ಇವರಿಗೆ ಕಾನೂನುಬಾಹಿರವಾಗಿ ಆಂಡ್ರಾಯ್ಡ್ ಮೊಬೈಲ್, ಟಿವಿ ಸೇರಿದಂತೆ ಎಲ್ಲಾ ಸೌಲಭ್ಯವನ್ನು ನೀಡಲಾಗಿದ್ದು, ಅದನ್ನು ಯಾರೋ(?) ತಮ್ಮ ಮೊಬೈಲ್‌ನಲ್ಲಿ ಸೆರೆ ಹಿಡಿದು ವೈರಲ್ ಮಾಡಿಬಿಟ್ಟಿದ್ದಾರೆ. ಇದರಿಂದ ಸಾರ್ವಜನಿಕ ವಲಯದಲ್ಲಿ ಕಾರಾಗೃಹ ಇಲಾಖೆಯ ವಿರುದ್ಧ ತೀವ್ರ ಟೀಕೆಗಳು ವ್ಯಕ್ತವಾಗಿವೆ.

ಒಂದು ವಿಡಿಯೋದಲ್ಲಿ 13 ಮೊಬೈಲ್‌ಗಳು, ಇಯರ್ ಫೋನ್ ಹಾಗೂ ಚಾರ್ಜರ್‌ಗಳಿವೆ. ಇನ್ನೊಂದರಲ್ಲಿ ವಿಕೃತಕಾಮಿ ಉಮೇಶ್ ರೆಡ್ಡಿ ಸೆಲ್‌ನಲ್ಲಿ ಟಿವಿ ನೋಡುತ್ತಾ ಮೊಬೈಲ್‌ನಲ್ಲಿ ಮಾತಾಡುತ್ತ ಆರಾಮವಾಗಿ ಕುಳಿತಿದ್ದಾನೆ. ಇನ್ನು ಶಂಕಿತ ಉಗ್ರ ಶಕೀಲ್ ಸ್ಟೀಲ್ ಗ್ಲಾಸ್‌ನಲ್ಲಿ ಚಹಾ ತುಂಬಿಟ್ಟುಕೊಂಡು ಮೊಬೈಲ್‌ನಲ್ಲಿ ಹರಟುತ್ತಾ ಕುಳಿತಿರುವುದು ಕಂಡು ಬರುತ್ತದೆ.

ಒಬ್ಬ ಹಸುಳೆಗಳನ್ನೂ ಬಿಡದೆ ಕೆಡಿಸಿಕೊಂಡು ಹೆಣ್ಮಕ್ಕಳ ಕಾಚಾ, ಬ್ರಾ ಮೂಸುತ್ತಿದ್ದ ವಿಕೃತಕಾಮಿ! ಇನ್ನೊಬ್ಬ ಬೆಂಗಳೂರು ಮಹಾ ನಗರದಲ್ಲಿ ಉಗ್ರ ಚಟುವಟಿಕೆ ನಡೆಸಿ ಹತ್ತಾರು ಹೆಣ ಬೀಳಿಸಿರೋ ಆರೋಪ ಹೊತ್ತಿರೋ ಕಿರಾತಕ! ಮತ್ತಿಬ್ಬರು ಪೊಲೀಸ್ ಅಧಿಕಾರಿಯ ಮಗಳು, ಪ್ರೇಮಿಯಾಗಿಯೂ ಚಿನ್ನ ಕಳ್ಳ ಸಾಗಣೆ ನಡೆಸಿ ಇ.ಡಿ. ಇಕ್ಕಳಕ್ಕೆ ಸಿಕ್ಕಿಬಿದ್ದಿರೋ ಸ್ಮಗ್ಲರ್ಸ್! ಇಂಥವರಿಗೆ ಇಷ್ಟೆಲ್ಲ ಸೌಲಭ್ಯ ಕೊಟ್ಟರೋ ಜೈಲು ಅಧಿಕಾರಿ ಭ್ರಷ್ಟರನ್ನು ಸಸ್ಪೆಂಡ್ ಟ್ರಾನ್ಸಫರ್ ಮಾಡಿದರಷ್ಟೇ ಸಾಲದು. ಅದೇ ಜೈಲಿನಲ್ಲಿ ಅವರನ್ನು ಕೂಡಿ ಹಾಕಿ ಶಿಕ್ಷಿಸಬೇಕು ಅಲ್ಲವೇ. ಆದರೆ ಈ ಕೆಲಸ ಗೃಹ ಇಲಾಖೆಯಿಂದ ಆಗಲ್ಲ. ಯಾಕೆಂದರೆ, ಚಿನ್ನದ ಕಳ್ಳಿ ರನ್ಯಾ ಅದಕ್ಕೆ ಚಾನ್ಸ್ ಕೊಡಲ್ಲ ಅನ್ನೋದು ಗುಟ್ಟಾಗಿ ಉಳಿದಿಲ್ಲ!

ಒಂದು ಕಾಲದಲ್ಲಿ ಜಯಸಿಂಹ ಎಂಬ ಜೈಲ್ ಮುಖ್ಯಸ್ಥ ನಕಲಿ ಛಾಪಾ ಕಾಗದ ಡಾನ್ ಕರೀಂ ಲಾಲನಿಗೆ ಸಹಾಯ ಮಾಡಿದ ತಪ್ಪಿಗೆ ಅದೇ ಜೈಲಿನಲ್ಲಿ ಕೊಳೆತಿದ್ದನ್ನು ಯಾರೂ ಮರೆತಿಲ್ಲ. ರೇಣುಕಾಸ್ವಾಮಿ ಕೊಲೆ ಆರೋಪಿ, ನಟ ದರ್ಶನ್ ಪ್ರಕರಣದಲ್ಲಿ ಅಪರಾಧಿಗಳಿಗೆ ಹೀಗೆ ಕಾನೂನುಬಾಹಿರವಾಗಿ ಸೌಲಭ್ಯ ಕಲ್ಪಿಸುವುದಕ್ಕೆ ಸುಪ್ರೀಂ ಕೋರ್ಟ್ ಛೀಮಾರಿ ಹಾಕಿದ್ದನ್ನು ಕೂಡ ಯಾರೂ ಮರೆತಿಲ್ಲ. ಇದಾದ ನಂತರವೂ ಇಂತಹ ಪ್ರಕರಣಗಳು ಬೆಳಕಿಗೆ ಬಂದಿರುವುದು ಕಾರಾಗೃಹ ಆಡಳಿತ ವ್ಯವಸ್ಥೆ ಬಗ್ಗೆ ಹಲವು ಪ್ರಶ್ನೆಗಳನ್ನು ಹುಟ್ಟುಹಾಕಿದೆ.

ಈ ಮೊದಲು ಇದೇ ಜೈಲಿನಲ್ಲಿ ನಟ ದರ್ಶನ್ ತೂಗುದೀಪ, ಅವರ ಸಹಚರರು, ರೌಡಿಗಳಾದ ವಿಲ್ಸನ್ ಗಾರ್ಡನ್ ನಾಗ, ಕುಳ್ಳ ಸೀನ ಹಾಗೂ ಸರ್ಜಾಪುರದ ರೌಡಿ ಶ್ರೀನಿವಾಸ ಅಲಿಯಾಸ್ ಗುಬ್ಬಚ್ಚಿ ಸೀನನಿಗೆ ವಿಶೇಷ ಸವಲತ್ತು ಕಲ್ಪಿಸಿದ ಆರೋಪ ಕೇಳಿ ಬಂದಿದ್ದು, ಅಧಿಕಾರಿಗಳ ಸಸ್ಪೆಂಡ್, ವರ್ಗಾವಣೆ ನಡೆದಿತ್ತು. ಅಲ್ಲದೆ ದರ್ಶನ್ ಮತ್ತು ಸಹಚರರನ್ನು ಬೇರೆ ಬೇರೆ ಜೈಲುಗಳಿಗೆ ಕಮಾನ್ ಎತ್ತಲಾಗಿತ್ತು.

ನಂತರ ಮಾನ್ಯ ಸುಪ್ರೀಂ ಕೋರ್ಟ್ ದರ್ಶನ್ - ಗ್ಯಾಂಗ್‌ನ ಜಾಮೀನು ಅರ್ಜಿ ರದ್ದುಪಡಿಸಿದ ಆದೇಶದಲ್ಲಿ ಬೆಂಗಳೂರು ಸೆಂಟ್ರಲ್ ಜೈಲಿನ 'ವಿಐಪಿ' ವ್ಯವಸ್ಥೆ ಬಗ್ಗೆ ಕಿಡಿಕಾರಿತ್ತು. ಜೈಲು ಅಧಿಕಾರಿಗಳು ಆವಾಗಲೇ ಬುದ್ಧಿ



ಕಲಿಯಬೇಕಿತ್ತು. ಮುಖ್ಯವಾಗಿ, ಮೇಟಿ ಸರಿ ಇದ್ದರೆ ತಾನೇ? ಮಾನ್ಯ ಗೃಹ ಸಚಿವರಿಗೆ ಜೈಲಿನಲ್ಲಿ ಏನು ನಡೆಯುತ್ತದೆ ಅಂತಲೇ ಗೊತ್ತಿಲ್ಲ! ಕೇಳಿದರೆ ನನಗೇನೂ ಗೊತ್ತಿಲ್ಲ... ವರದಿ ಬಂದಿಲ್ಲ... ಅನ್ನುತ್ತಾರೆ!!

ಈಗ ದರ್ಶನ್ ತನಗೆ ಬೆಡ್‌ಶೀಟ್, ದಿಂಬು ಕೊಡಲ್ಲ ಅಂತ ಕೋರ್ಟ್‌ಗೆ ಹೋಗ್ತಾರೆ, ಇಲ್ಲಿ ಉಗ್ರರಿಗೆಲ್ಲ ಮೊಬೈಲ್, ಟಿವಿ ಸಿಗುತ್ತದೆ ಅಂದ್ರೆ ಹೇಗೆ... ಎಂದು ಪತ್ರಕರ್ತರನ್ನೇ ಪ್ರಶ್ನಿಸುತ್ತಾರೆ! ನ್ಯಾಯವಾಗಿ ಈ ಪ್ರಶ್ನೆಯನ್ನು ನಾವು ಕೇಳಬೇಕು, ಅವರು ಉತ್ತರಿಸಬೇಕು! ದರ್ಶನ್ ವಿಚಾರ ಅತ್ಲಾಗಿರಲಿ, ಇನ್ನಿಬ್ಬರ ಹಿಸ್ಟರಿಯನ್ನೇ ನೋಡಿ...

ವಿದೇಶದಲ್ಲಿ ಅಡಗಿ ಕುಳಿತು ಅತ್ಯುಗ್ರ ಇಸ್ಲಾಮಿಕ್ ಸ್ಟೇಟ್ಸ್ ಭಯೋತ್ಪಾದಕ ಸಂಘಟನೆಯಲ್ಲಿ ಬೆಂಗಳೂರಿನ ಜುಹಾದ್ ಹಮೀದ್ ಶಕೀಲ್ ಮನ್ನಾ ತೊಡಗಿಕೊಂಡಿದ್ದ. 2020ರಲ್ಲಿ ಸೌದಿ ಅರೇಬಿಯಾದಿಂದ ಗಡಿಪಾರಾಗಿದ್ದ ಆತನನ್ನು ರಾಷ್ಟ್ರೀಯ ತನಿಖಾದಳ (ಎನ್ಐಎ) ಬಂಧಿಸಿತ್ತು. ಅಂದಿನಿಂದ ಪರಪ್ಪನ ಅಗ್ರಹಾರ

☞ 14






# ಈ ಉಸಿರಿರುವವರೆಗೂ ಕಾಯುವೆ ನಿನ್ನ ಪ್ರೀತಿಗಾಗಿ

(ಕಳೆದ ಸಂಚಿಕೆಯಿಂದ)

ಇವತ್ತು ನಮ್ ಹೀರೋ ಹೀರೋಯಿನ್ ಪರಿಚಯ ಮಾಡಿಕೊಂಡು ಆಮೇಲೆ ಕಥೆಗೆ ವಾಪಾಸ್ ಹೋಗೋಣ.....

'ವರ್ಮಾ ಗ್ರೂಪ್ ಆಫ್ ಕಂಪನಿಸ್' ಭಾರತದ ಟಾಪ್ ಟೆನ್ ಉದ್ಯಮಗಳಲ್ಲಿ ಒಂದು ಇದನ್ನು ಸ್ಥಾಪಿಸಿದವರು ಶೋಭಾ ಶರ್ಮಾ ಅವರು ಇವರ ತಂದೆ ಶಂಕರ್ ಶರ್ಮಾ ತಾಯಿ ರಾಜೇಶ್ವರಿ ಶರ್ಮಾ ಇವರಿಬ್ಬರ ಮುದ್ದಿನ ಮಗಳೇ ಶೋಭಾ ಶರ್ಮಾ ಸಾಮಾನ್ಯ ಕುಟುಂಬದಿಂದ ಬಂದ ಶೋಭಾರವರು ತಮ್ಮ ಓದು ಮುಗಿದ ನಂತರ ಚಿಕ್ಕದಾಗಿ ಬಿಸಿನೆಸ್ ಸ್ಟಾರ್ಟ್ ಮಾಡಿ ಅದನ್ನು ಬಹಳ ಶ್ರಮ ಪಟ್ಟು ದೊಡ್ಡ ಮಟ್ಟದಲ್ಲಿ ಬೆಳೆಸಿ ಇಂದು ದೇಶದಲ್ಲೇ ಪ್ರಮುಖ ಉದ್ಯಮಗಳಲ್ಲಿ ಒಂದಾಗುವಂತೆ ಮಾಡಿ ಅಪಾರ ಗೌರವ ಪ್ರತಿಷ್ಠೆ ಗಳಿಸಿದ್ದರು... ಅದನ್ನ ಈಗ ಆರವ್ ಇನ್ನಷ್ಟು ಹೆಚ್ಚಿಸಲು ಕೆಲಸ ಮಾಡುತ್ತಿದ್ದಾನೆ...

ಶೋಭಾರವರು ತಮ್ಮದೇ ಆಫೀಸ್‌ನಲ್ಲಿ ಕೆಲಸ ಮಾಡುತ್ತಿದ್ದ ಶ್ರೀಕಾಂತ್ ಎಂಬುವವರನ್ನು ಪ್ರೀತಿಸಿ ಮದುವೆ ಆಗುತ್ತಾರೆ... ಶ್ರೀಕಾಂತ್‌ರವರು ಯಾರು ಇಲ್ಲದೆ ಅನಾಥರಾಗಿದ್ದ ಕಾರಣ ಅವರು ಶೋಭಾರವರ ಕುಟುಂಬವನ್ನೇ ತನ್ನ ಕುಟುಂಬವೆಂದು ಕೊಂಡು ಸಂತೋಷದಿಂದ ಇರುತ್ತಾರೆ. ಅವರಿಬ್ಬರ ಪ್ರೀತಿಯ ಸಂಕೇತವಾಗಿ ಜನಿಸಿವನೇ ಆರವ್ 'ಆರವ್ ಶರ್ಮಾ'. ಆರವ್ ಹುಟ್ಟಿದ ಮೇಲಂತು ಆ ಮನೆಯ ಸುಖ ಸಂತೋಷ ದುಪ್ಪಟಾಗಿರುತ್ತದೆ..

ಎಲ್ಲಾ ಚೆನ್ನಾಗಿ ನಡೆಯುತ್ತಿದ್ದ ಸಮಯದಲ್ಲಿ ಆ ಕುಟುಂಬಕ್ಕೆ ಬಿರುಗಾಳಿಯೊಂದು ಅಪ್ಪಳಿಸಿದ್ದು ಶೋಭಾರವರ ಸಾವು... ಆರವ್‌ಗೆ ನಾಲ್ಕು ವರ್ಷ ಇರುವಾಗ ಒಂದು ದಿನ ಇದ್ದಕಿದ್ದ ಹಾಗೇ ಶೋಭಾರವರು ಆತ್ಮಹತ್ಯೆ ಮಾಡಿಕೊಂಡು ಸಾವನ್ನಪ್ಪುತ್ತಾರೆ. ಅದರ ನಂತರ ಒಂಟಿಯಾಗಿದ್ದ ಶ್ರೀಕಾಂತ್‌ರವರು ಶೋಭಾರವರ ಸ್ನೇಹಿತೆ ಪೂರ್ಣಿಮಾ ಎಂಬುವವರನ್ನು ಮತ್ತೊಂದು ಮದುವೆ ಆಗಿ ಬೇರೆ ವಾಸಿಸಲು ಪ್ರಾರಂಭಿಸುತ್ತಾರೆ. ಆದರೆ ಕಂಪನಿಯ ವ್ಯವಹಾರಗಳನ್ನೆಲ್ಲ ಅವರೇ ನೋಡಿಕೊಳ್ಳುತ್ತಿರುತ್ತಾರೆ

ಶ್ರೀಕಾಂತ್ ಮತ್ತು ಪೂರ್ಣಿಮಾರವರಿಗೆ ಆರ್ಯನ್ ಎಂಬ ಮಗ ಜನಿಸುತ್ತಾನೆ. ಆರವ್ ತನ್ನ ಅಜ್ಜಿ-ತಾತನ ಜೊತೆ ಇರುತ್ತಾನೆ. ಶ್ರೀಕಾಂತ್‌ರವರು ಬಂದು ಆಗಾಗ ನೋಡಿಕೊಂಡು ಅವನಿಗೆ ನೀಡಬೇಕಾದ ಪ್ರೀತಿಯನ್ನು ಕೊಡುತ್ತಿರುತ್ತಾರೆ. ಆರವ್‌ಗೆ ಹನ್ನೆರಡು ವರ್ಷವಿದ್ದಾಗ ಓದುವ ಸಲುವಾಗಿ ಲಂಡನ್‌ಗೆ ಹೋದವನು ಮತ್ತೆ ವಾಪಸ್ ಬಂದದ್ದು ಹತ್ತು ವರ್ಷದ ನಂತರ...

ಅವನು ಮರಳಿ ವಾಪಾಸ್ ಬಂದಿದ್ದೆ ಕಂಪನಿಯ ಜವಾಬ್ದಾರಿ ವಹಿಸಿಕೊಳ್ಳಲು ಶೋಭಾರವರು ತಾವು ಸಾಯುವ ಮುಂಚೆ ತನ್ನ ನಂತರ ನನ್ನ ಕಂಪನಿಗೆ ನನ್ನ ಮಗ ಆರವ್ ಶರ್ಮಾನೆ ವಾರಸುದಾರ ನನ್ನ ಎಲ್ಲಾ ಆಸ್ತಿ ಅವನಿಗೆ ಸೇರತಕ್ಕದ್ದು ಎಂದು ವಿಲ್ ಮಾಡಿಸಿರುತ್ತಾರೆ. ಅದರಂತೆ ಆರವ್ ಓದು ಮುಗಿದ ಬಳಿಕ ತನ್ನ ತಾತ ಅಜ್ಜಿಯ ಮಾತಿನಂತೆ ಕಂಪನಿ ಜವಾಬ್ದಾರಿ ವಹಿಸಿಕೊಳ್ಳುತ್ತಾನೆ.

ಆರವ್ ಕಂಪನಿಯನ್ನು ತನ್ನ ಸುಪರ್ದಿಗೆ ತೆಗೆದುಕೊಳ್ಳುವರೆಗೂ ಅದನ್ನು ನಿಭಾಯಿಸುತ್ತಿದ್ದದ್ದು ಶ್ರೀಕಾಂತ್‌ರವರೇ. ಈಗಲೂ ಸಹ ಮಗನಿಗೆ ಸಲಹೆ ನೀಡುತ್ತಾ ಕಂಪನಿಯಲ್ಲೇ ಇದ್ದು ತಮ್ಮ ಮತ್ತೊಬ್ಬ ಮಗನನ್ನು ಸಹ ತಮ್ಮ ಜೊತೆಯಲ್ಲಿಯೇ ಇರಿಸಿಕೊಂಡಿದ್ದಾರೆ.

ಆರವ್‌ಗೆ ತನ್ನ ತಮ್ಮ ಆರ್ಯನ್‌ನನ್ನು ಕಂಡರೆ ಅಷ್ಟಕಷ್ಟೆ ಅದಕ್ಕೆ ಕಾರಣ ಮಾತ್ರ ತಿಳಿದಿಲ್ಲ. ಇಬ್ಬರು ಚಿಕ್ಕಂದಿನಿಂದಲೂ ಒಡನಾಡಿದ್ದು ಕಡಿಮೆಯೇ. ಇನ್ನೂ ಪೂರ್ಣಿಮಾರವರು ಮದುವೆಯಾದ ಆರಂಭದಲ್ಲಿ ಆರವ್‌ನನ್ನು ತಮ್ಮ ಮಗನ ಹಾಗೇ ಚೆನ್ನಾಗಿ ನೋಡಿಕೊಳ್ಳುವಂತೆ ನಟಿಸುತ್ತಿದ್ದರು ಆದರೆ ಯಾವಾಗ ತಮಗೆ ಒಂದು ಮಗು ಆಯಿತೋ ಅಂದಿನಿಂದ ಆರವ್‌ನನ್ನು ದೂರ ಇಡಲು ಪ್ರಾರಂಭಿಸಿದರು ಮತ್ತು ಶ್ರೀಕಾಂತ್ ರವರ ಬಳಿ ಸಹ ಆರವ್ ಹೋಗದಂತೆ ತಡೆಯುತ್ತಿದ್ದರು. ಇದನೆಲ್ಲ ನೋಡಿದ ಶರ್ಮಾ ದಂಪತಿಗಳು ಆರವ್‌ನನ್ನು ವಿದೇಶಕ್ಕೆ ಓದುವ ಸಲುವಾಗಿ ಕಳುಹಿಸಿಬಿಟ್ಟರು.

ಇನ್ನೂ ಆರವ್ ಬಗ್ಗೆ ಹೇಳೋದಾದರೆ ಹಾಳ್ಬಿಲುಪಿನ ಮೈ ಬಣ್ಣ ನಕ್ಕರೆ ಆ ಕೆನ್ನೆ ಮೇಲೆ ಬೀಳುವ ಗುಳಿ ಜಿಮ್ನಲ್ಲಿ ದಂಡಿಸಿ ಹುರಿಗೋಳಿಸಿದ್ದ ಕಟ್ಟುಮಸ್ತಾದ ದೇಹ ಮುಖದಲ್ಲಿನ ಗಾಂಭೀರ್ಯತೆ ಎಂಥವರನ್ನೇ ಆಗಲಿ ಆಕರ್ಷಿಸುತ್ತೆ. ವಿದೇಶದಲ್ಲಿ ಹತ್ತು ವರ್ಷಗಳು ಇದ್ದು ಬಂದರೂ ಸಹ ಅಲ್ಲಿನ ಆಚರಣೆಗಳಿಗೆ ಮಾರುಹೋಗದೆ ನಮ್ಮ ನೆಲ ಸಂಸ್ಕೃತಿ... ಆಚಾರ ವಿಚಾರವನ್ನು ಗೌರವಿಸುವವನು. ಅಮ್ಮ ಅಜ್ಜಿ ತಾತ ಎಂದರೆ ಪಂಚಪ್ರಾಣ ಅವರಿಗಾಗಿ ಏನು ಬೇಕಾದರೂ ಮಾಡಬಲ್ಲವನು. ಆದರೆ ಮುಂಗೋಪಿ ಮೂಗಿನ ತುದಿಯಲ್ಲೇ ಯಾವಾಗಲು ಕೋಪ... ಕೋಪದಲ್ಲಿ ಹಿಂದೂ ಮುಂದೆ ಯೋಚಿಸದೆ ನಿರ್ಧಾರ ತೆಗೆದುಕೊಂಡು ಬಿಡುತ್ತಾನೆ. ತನ್ನವರಿಗೇನಾದರೂ ತೊಂದರೆ ಆದರೆ ಎದುರಿರುವವರು ಯಾರೇ ಆದರೂ ಅವರನ್ನು ಸುಮ್ಮನೆ ಬಿಡುವುದಿಲ್ಲ.

ಕೆಲಸದ ವಿಷಯದಲ್ಲಿ ಹೆಚ್ಚು ಬದ್ಧತೆ ಹೊಂದಿದ್ದು ತನ್ನ ತಾಯಿಯ ಆಸೆಯಂತೆ ಕಂಪನಿಯನ್ನು ಇನ್ನಷ್ಟು ಎತ್ತರಕ್ಕೆ ಬೆಳಸುವ ಕನಸನ್ನು ಹೊಂದಿದ್ದು ತನ್ನ ಪ್ರೀತಿಯ ಅಮ್ಮನ ಕನಸುಗಳನ್ನು ಈಡೇರಿಸಬೇಕು ಎಂದುಕೊಂಡು ಹಗಲಿರುಳು ಕೆಲಸ ಮಾಡುತ್ತಿದ್ದಾನೆ.

ಇನ್ನೂ ಹೆಣ್ಣು ಮಕ್ಕಳ ವಿಷಯದಲ್ಲಿ ಅಪ್ಪಟ ಚಿನ್ನವಿದ್ದಂತೆ ಎಂದು ಯಾರ ಹಿಂದೆಯೂ ಪ್ರೀತಿ ಪ್ರೇಮ ಎಂದು ಹೋಗಿಲ್ಲ. ತನ್ನ ಹಿಂದೆ ಬಂದವರನ್ನು ನಿರಾಕರಿಸುತ್ತಿದ್ದವನು... ಇಂತ ಗುಣದವನು ಆಯುಷಿಯನ್ನು ಮದುವೆಯಾಗಿ ಆ ವಿಷಯವನ್ನು ಎಲ್ಲರಿಂದ ಮುಚ್ಚಿಟ್ಟಿರುವುದು ನಿಗೂಢವಾಗಿದೆ...

★★★

ನಮ್ಮ ಕಥಾ ನಾಯಕಿ ಆಯುಷಿ ಮಧ್ಯಮ ವರ್ಗ ಸಂಪ್ರದಾಯಸ್ಥ ಕುಟುಂಬದಿಂದ ಬಂದವಳು. ಗೋಧಿ ಬಣ್ಣ ದುಂಡು ಮುಖದ ಚೆಲುವೆ ನಮ್ ಆಯುಷಿ. ಒಂದು ಇರುವೆಗೂ ನೋವು ಕೊಡಬಾರದು ಎಂಬ ಭಾವನೆಯುಳ್ಳವಳು ಆದಷ್ಟು ಯಾರಿಗೂ ತೊಂದರೆ ಕೊಡದೆ ತನಗೆ ತೊಂದರೆ ನೀಡಿದವರಿಗೂ ಒಳ್ಳೆಯದನ್ನೇ ಬಯಸುವಳು.

ತಂದೆ ತಾಯಿ ಅಣ್ಣ ಇಷ್ಟೇ ಅವಳ ಪ್ರಪಂಚ.ತಂದೆ ಶೇಖರ್ ತಾಯಿ ಸುನಂದಾ ಅಣ್ಣ ನಂದನ್ ಇದಿಷ್ಟೇ ನಮ್ಮ ನಾಯಕಿ ಕುಟುಂಬ. ನಂದನ್ ಹಾಗೂ ಆಯುಷಿಗೆ ಹತ್ತು ವರ್ಷಗಳ ಅಂತರವಿದ್ದು ಆಯುಷಿ ಎಂದರೆ ಎಲ್ಲರಿಗೂ ಅಚ್ಚುಮೆಚ್ಚು. ತಕ್ಕ ಮಟ್ಟಿಗೆ ಆಸ್ತಿ ಹೊಂದಿದ್ದ ಶೇಖರ್‌ರವರು ಕುಟುಂಬವನ್ನು ತುಂಬಾ ಪ್ರೀತಿಸುತ್ತಿದ್ದರು ಮತ್ತು ಅವರಿಗೆ ಯಾವುದೇ ತೊಂದರೆ ಬಾರದಂತೆ ನೋಡಿಕೊಳ್ಳುತ್ತಿದ್ದರು ಹಾಗೆ ಮಕ್ಕಳನ್ನು ಸುಸಂಸ್ಕೃತರನ್ನಾಗಿ ಬೆಳೆಸಿರುತ್ತಾರೆ. ಆದರೆ ನಾಲ್ಕು ವರ್ಷದ ಹಿಂದೆ ತಂದೆ ಶೇಖರ್ ರವರು ಆಕಸ್ಮಿಕವಾಗಿ ಸಾವನ್ನಪ್ಪುತ್ತಾರೆ. ಅಲ್ಲಿಯವರೆಗೆ ನೆಮ್ಮದಿಯಿಂದ ಇದ್ದ ಕುಟುಂಬಕ್ಕೆ ಶೇಖರ್‌ರವರ ಸಾವಿನ ನಂತರ ಕಷ್ಟಗಳು ಎದುರಾಗಲು ಶುರು ಆಯಿತು. ತಂದೆಯ ಸಾವಿನ ನಂತರ ಅಣ್ಣ ಕೆಟ್ಟ ಗುಂಪಿನ ಸಹವಾಸದಿಂದ ದುಶ್ಚಟಗಳನ್ನು ಮೈಗೂಡಿಸಿಕೊಂಡು ನೋಡನೊಡುತ್ತಿದ್ದಂತೆ ಶೇಖರ್ ರವರು ಸಂಪಾದಿಸಿದ್ದ ಎಲ್ಲಾ ಆಸ್ತಿಯನ್ನು ಮಾರಿ ಇರಲು ಮನೆ ಕೂಡ ಇರದಂತ ಪರಿಸ್ಥಿತಿಗೆ ತಂದು ಒಡ್ಡಿ ಮೈತುಂಬ ಸಾಲ ಮಾಡಿಕೊಂಡಿರುತ್ತಾನೆ. ಸಾಲಗಾರರೆಲ್ಲ ಮನೆಯ ಬಳಿ ಬಂದು ಸಾಲ ಕೊಟ್ಟಿದ್ದ ಹಣಕ್ಕಾಗಿ ಪೀಡಿಸಲು ಶುರು ಮಾಡುತ್ತಾರೆ. ಕೊನೆಗೆ ಊಟಕ್ಕೂ ಪರದಾಡುವಂತ ಪರಿಸ್ಥಿತಿ ಬಂದೋದಗುತ್ತದೆ.

ಆ ಸಂದರ್ಭದಲ್ಲಿ ಮನೆ ನಡೆಸುವ ಸಲುವಾಗಿ ಆಗ ತಾನೇ ಓದು ಮುಗಿಸಿದ್ದ ಆಯುಷಿ ಶರ್ಮಾ ಗ್ರೂಪ್ ಆಫ್ ಕಂಪನಿಗೆ ಮ್ಯಾನೇಜರ್ ಪೋಸ್ಟ್ ಗೆ ಇಂಟರ್ವ್ಯೂಗೆ ಹೋಗುತ್ತಾಳೆ. ಅವಳನ್ನು ಇಂಟರ್ವ್ಯೂ ಮಾಡಿದ ಆರವ್ ಆಯುಷಿಯನ್ನು ತನ್ನ ಸೆಕ್ರೆಟರಿ ಆಗಿ ನೇಮಿಸಿಕೊಳ್ಳುತ್ತಾನೆ.

ಇದರಿಂದ ಖುಷಿಯಾದ ಆಯುಷಿ ಅಂದುಕೊಂಡಿದ್ದಕ್ಕಿಂತ ಹೆಚ್ಚಿನ ಸಂಬಳ ಸಿಗುವುದು ಹೇಗೋ ಸಧ್ಯಕ್ಕೆ ಸ್ವಲ್ಪ ಕಷ್ಟ ಕಳೆಯಿತು ಎಂದುಕೊಳ್ಳುವಷ್ಟರಲ್ಲಿ ತಾಯಿ ಸುನಂದಾರವರು ರಸ್ತೆಯಲ್ಲಿ ಬರುವಾಗ ಅಪಘಾತವಾಗಿ ತಲೆಗೆ ಬಲವಾದ ಪೆಟ್ಟು ಬಿದ್ದು ಕೂಡಲೇ ಆಪರೇಷನ್ ಮಾಡಬೇಕು ಅದಕ್ಕೆ ಹದಿನೈದು ಲಕ್ಷ ಬೇಕು ಎಂದು ಹೇಳುತ್ತಾರೆ. ಮತ್ತೆ ಅದೇ ಸಂದರ್ಭದಲ್ಲಿ ನಂದನ್‌ಗೆ ಸಾಲ ನೀಡಿದ್ದವರು ಅವನಿಂದ ಹಣ ವಸೂಲಿ ಮಾಡುವ ಸಲುವಾಗಿ ಅವನನ್ನು ಕಿಡ್ನಾಪ್ ಮಾಡಿ ಆಯುಷಿಗೆ ಕಾಲ್ ಮಾಡಿ ಇನ್ನೂ ಒಂದು ದಿನದಲ್ಲಿ ನಮಗೆ ಕೊಡಬೇಕಾದ ಮೂವತ್ತೈದು ಲಕ್ಷ ಕೊಡದಿದ್ದರೆ ಅವನನ್ನು ಕೊಂದು ಬಿಡುವುದಾಗಿ ಬೆದರಿಕೆ ಹಾಕುತ್ತಾರೆ.

ಆಯುಷಿಗಂತೂ ದಿಕ್ಕೆ ತೋಚದಂತೆ ಆಗುತ್ತದೆ. ತನಗೆ ತಿಳಿದಿರುವ ಕಡೆಯೆಲ್ಲಾ ಹಣಕ್ಕಾಗಿ ಬೇಡಿಕೆ ಇಡುತ್ತಾಳೆ. ಆದರೆ ಯಾರೊಬ್ಬರೂ ಅವಳಿಗೆ ಸಹಾಯ ಮಾಡುವುದಿಲ್ಲ. ಇಂತ ಸಂದಿಗ್ಧ ಪರಿಸ್ಥಿತಿಯಲ್ಲಿ ಸಿಕ್ಕಿ ನೋವಿನಲ್ಲಿದ್ದ ಆಯುಷಿ ಬೇರೆ ದಾರಿ ಇಲ್ಲದೆ ಆಗ ತಾನೇ ಕೆಲಸಕ್ಕೆ ಸೇರಿದ ಆರವ್ ಬಳಿ ಹಣವನ್ನು ಕೊಡುವಂತೆ ಕೇಳಿಕೊಂಡಾಗ... ಆರವ್ ಹಣವನ್ನು ಕೊಡಲು ಕಾಂಟ್ರಾಕ್ಟ್ ಮಾಡಿಕೊಂಡು ಅವಳನ್ನು ಮದುವೆ ಮಾಡಿಕೊಳ್ಳುತ್ತಾನೆ.

ಇದಿಷ್ಟು ನಮ್ಮ ನಾಯಕ ನಾಯಕಿಯ ಪರಿಚಯ ಯಾವ ಹೆಣ್ಣನ್ನು ಕಣ್ಣೆತ್ತಿ ನೋಡದ ಆರವ್ ಆಯುಷಿಯನ್ನು ಕದ್ದು ಮುಚ್ಚಿ ಮದುವೆ ಆಗಿರುವುದರ ಹಿಂದಿನ ಕಾರಣ ಏನು ಏಕೆ ಆಯುಷಿ ಸದಾ ತನ್ನ ಜೊತೆಯಲ್ಲಿಯೇ ಇರಬೇಕು ಎಂದು ಹೇಳುತ್ತಾನೆ...

★★★

ದಿ ಗ್ರೇಟ್ ಬಿಸಿನೆಸ್ ಮ್ಯಾನ್ ಶರ್ಮಾ ಗ್ರೂಪ್ ಆಫ್ ಕಂಪನೀಸ್ ಸಿಇಓ ಆರವ್ ಶರ್ಮಾ ಅವರ ತಂದೆಯ ಆತ್ಮೀಯ ಸ್ನೇಹಿತ ವಿಷ್ಣು ಗುಪ್ತರವರ ಮಗಳು ಅರ್ಚನಳನ್ನು ಮದುವೆಯಾಗಲು ಮುಂದಾಗಿದ್ದು ಶೀಘ್ರದಲ್ಲಿ ಇವರಿಬ್ಬರ ನಿಶ್ಚಿತಾರ್ಥ ನಡೆಯಲಿದೆ ಎಂದು ಬಲ್ಲ ಮೂಲಗಳಿಂದ ಮಾಹಿತಿ ಬಂದಿದೆ... ಎಂದು ಬರುತ್ತಿದ್ದ ನ್ಯೂಸ್ ಅನ್ನು ನೋಡಿದ ಆಯುಷಿ ಮನಸ್ಸು ಮುದುಡುತ್ತದೆ....

ತಾನು ಪ್ರೀತಿಸುತ್ತಿರುವ ಜೀವ ಮತ್ತೊಬ್ಬರಿಗೆ ಜೊತೆಯಾಗಲು ಹೊರಟಿದೆ. ಇದನ್ನು ಹೇಗೆ ಜೀರ್ಣಿಸಿಕೊಳ್ಳಲು ನಾನು. ಕೇವಲ ಪ್ರೀತಿಸಿದ್ದಿದ್ದರೆ ಏನೋ ಅವನ ಹೆಸರು ನನ್ನ ಹಣೆಯಲ್ಲಿ ಅವನ ಹೆಸರು ಬರೆದಿಲ್ಲ ಅನ್ಕೊಂಡು ಸಮಾಧಾನ ಮಾಡ್ಕೊಬೋದಿತ್ತು ಆದರೆ ಎಂದುಕೊಂಡವಳು ಬಟ್ಟೆಯೊಳಗೆ ಬಚ್ಚಿಕೊಂಡಿದ್ದ ತಾಳಿಯನ್ನು ಮುಟ್ಟುತ್ತಾ ಇದನ್ನ ಹೇಗೆ ಸಹಿಸಿಕೊಳ್ಳಲಿ. ನನ್ನ ಗಂಡನನ್ನ ಇನ್ನೊಬ್ಬರ ಜೊತೆ ಹೇಗೆ ನೋಡಲಿ ಇದನ್ನ ಹೇಗೆ ತೆಗೆದುಕೊಳ್ಳಲಿ ತನ್ನ ಗಂಡ ಇನ್ನೊಬ್ಬರ ಜೊತೆಯಲ್ಲಿ ಇರುವುದನ್ನು ಕಲ್ಪಿಸಿಕೊಳ್ಳೋಕೆ ಆಗೋಲ್ಲ ಇನ್ನೂ ಇದು. ಎಂದುಕೊಂಡವಳ ಕಣ್ಣಲ್ಲಿ ದುಃಖಕ್ಕೆ ಕಣ್ಣೀರು ಹರಿಯಲು ಶುರುವಾಗುತ್ತದೆ.

ಯಾಕ್ ನನಗೆ ಯಾವಾಗಲು ಹೀಗೆ ಆಗುತ್ತೆ ನಾನೇನು ತಪ್ಪು ಮಾಡಿದ್ದೀನಿ ನಾನು ಪ್ರೀತಿಸೋ ಜೀವಗಳು ಒಂದಲ್ಲಾ ಒಂದು ರೀತಿ ನನಗೆ ನೋವು ಕೊಡ್ತಾವೆ. ಅಪ್ಪನ್ನ ಕಳ್ಕೊಂಡೆ ಅಪ್ಪ ನನ್ನಿಂದ ದೂರ ಆಗಿ ಶಾಶ್ವತವಾಗಿ ದುಃಖ ಕೊಟ್ಟು ಹೋದರು ಇನ್ನು ಅಣ್ಣ ಮನೆ ಜವಾಬ್ದಾರಿ ತಗೊಳ್ದೆ ಎಲ್ಲಾನೂ ಮಾರಿ ಬೀದಿಗೆ ತಂದು ನಿಲ್ಲಿಸಿ ಆಗ ತಾನೇ ಪ್ರಪಂಚನ ನೋಡೋಕೆ ಸ್ಟಾರ್ಟ್ ಮಾಡಿದ್ದ ನನಗೆ ಜವಾಬ್ದಾರಿ ಹೊರೆಸಿ ನೋವು ಹತಾಶೆಯ ಕೂಪಕ್ಕೆ ತಳ್ಳಿಬಿಟ್ಟ. ಇನ್ನೂ ನನಗೆ ಅಂತ ಇರೋ ಒಂದೇ ಒಂದು ಜೀವ ನನ್ನಮ್ಮ ಅವರು ನನ್ನ ಜೊತೆಗೆ ಮಾತಾಡಿನೇ ಮೂರು ವರ್ಷ ಆಗ್ತಾ ಬಂತು.

ಇನ್ನೂ ಈಗ ನನ್ನ ಗಂಡ ನಾನು ಬದುಕಿರೋವಾಗಲೇ ಮತ್ತೊಂದು ಮದುವೆ ಆಗೋಕೆ ಹೊರಟಿದ್ದಾನೆ ಎಂದು ತನ್ನ ಹಣೆಬರಹವನ್ನು ಶಪಿಸಿಕೊಂಡವಳ ಕಣ್ಣಲ್ಲಿ ಬೇಸರಕ್ಕೆ ನೀರು ಒಂದೇ ಸಮನೇ ಹರಿಯುತ್ತಿರುತ್ತದೆ. ಟೇಬಲ್‌ಗೆ ತಲೆಯಾನಿಸಿ ಸ್ವಲ್ಪ ಹೊತ್ತು ಅತ್ತು ಅತ್ತು ತನ್ನ ಮನಸ್ಸಿನ ಭಾರವನ್ನು ಹೊರಹಾಕಿದವಳು ಬಳಿಕ...

ನಾನು ಎಷ್ಟು ಅತ್ತರು ನನ್ನ ಹಣೆಬರಹ ಚೇಂಜ್ ಆಗೋಲ್ಲ ನಾನ್ ಕೇಳಿಕೊಂಡು ಬಂದಿರುವುದೇ ಇಷ್ಟು. ನಾನು ಹೀಗೆ ಅಳ್ತಾ ಕೂರಬಾರದು ಇದೆಲ್ಲಾ ನಡೀಬೇಕಾಗಿರೋದೇ ಇದನ್ನ ನನ್ನಿಂದ ತಪ್ಪಿಸೋಕೆ ಆಗೋಲ್ಲ ಇನ್ನೂ ಮುಂದೆ ಇದನ್ನೆಲ್ಲಾ ರೂಡಿ ಮಾಡ್ಕೋಬೇಕು ಅದಕ್ಕೆ ನಾನು ಇನ್ನಷ್ಟು ಗಟ್ಟಿ ಆಗಬೇಕು ಎಂದು ನಿಶ್ಚಯಿಸಿ ತನ್ನ ಕಣ್ಣಿನಲ್ಲಿದ್ದ ನೀರನ್ನು ಒರೆಸಿಕೊಂಡು ಮುಖ ತೊಳೆಯುವ ಸಲುವಾಗಿ ಎದ್ದು ಭಾತ್ರುಮ್‌ಗೆ ಹೋಗುತ್ತಾಳೆ.

ಇದೆಲ್ಲವನ್ನು ತನ್ನ ಕ್ಯಾಬಿನ್‌ನಲ್ಲಿ ಇದ್ದ ಸಿಸಿಟಿವಿ ಮೂಲಕ ನೋಡುತ್ತಿದ್ದ ಆರವ್‌ಗೆ ಒಂದು ಕ್ಷಣ ಬೇಸರವಾದರೂ ಮರುಕ್ಷಣವೇ ಇಲ್ಲಾ ನಾನು ಕರಗಬಾರದು ಇವಳು ಇದಕ್ಕೆ ಲಾಯಕ್ಕು ಹೀಗೆ ನೋವನ್ನು ಅನುಭವಿಸಬೇಕು ಇವಳು ಎಂದುಕೊಳ್ಳುತ್ತಾ ಅವಳ ಚಲನವಲನಗಳನ್ನು ನೋಡುತ್ತಾ ಕೂರುತ್ತಾನೆ.

ಮಧ್ಯಾಹ್ನ ಊಟದ ಸಮಯಕ್ಕೆ ಆಯುಷಿ ಆರವ್‌ಗೆ ಊಟ ತರಿಸಿ ಅದನ್ನು ಕೊಡಲು ಬರುತ್ತಾಳೆ. ಆಗ ಆರವ್ ತನ್ನ ನಿಶ್ಚಿತಾರ್ಥದ ಬಗ್ಗೆ ಪ್ರಶ್ನಿಸುವಳೆನೋ ಎಂದು ಅವಳನ್ನೇ ಗಮನಿಸುತ್ತಾನೆ.. ಆದರೆ ಈಗಾಗಲೇ ದೃಢವಾಗಿ ನಿಶ್ಚಯಿಸಿದ ಆಯುಷಿ ಆರವ್ ನನ್ನ ಪ್ರಶ್ನಿಸದೆ ತನ್ನ ಪಾಡಿಗೆ ತಾನು ತನ್ನ ಕೆಲಸ ಮಾಡುತ್ತಾಳೆ ಅದನ್ನು ನೋಡಿದ ಆರವ್‌ಗೆ ಅವಳ ಮೌನ ಏನೋ ಕಳೆದುಕೊಂಡಂತೆ ಭಾಸವಾಗುತ್ತದೆ.

ಆರವ್‌ಗೆ ಊಟ ಬಡಿಸಿದ ಆಯುಷಿ ಅದನ್ನು ಅವನಿಗೆ ಕೊಟ್ಟು... ತನ್ನ ಕ್ಯಾಬಿನ್‌ಗೆ ಹೋಗಿ ತನಗೆ ಊಟ ಮಾಡಲು ಮನಸ್ಸಿಲ್ಲದ ಕಾರಣ ಒಂದು ಲೋಟ ನೀರನ್ನು ಕುಡಿದು ಟೇಬಲ್‌ಗೆ ತಲೆಯಾನಿಸಿ ಮೌನವಾಗಿ ಕೂತಿರುತ್ತಾಳೆ. ಅದನ್ನ ತನ್ನ ಕ್ಯಾಬಿನ್‌ನಿಂದ ಗಮನಿಸಿದ ಆರವ್ ಆಯುಷಿಯನ್ನು ತನ್ನ ಕ್ಯಾಬಿನ್‌ಗೆ ಕರೆಸುತ್ತಾನೆ.ಊಟದ ಸಮಯದಲ್ಲಿ ಕರೆದ ಕಾರಣ ಮತ್ತೇನು ಹೇಳಲು ಕರೆದರೋ ಎಂದು ಗಾಬರಿಯಲ್ಲಿ ಆರವ್ ಬಳಿ ಬರುತ್ತಾಳೆ.

ಆಯುಷಿ ಕ್ಯಾಬಿನ್ ಒಳಗೆ ಬಂದೊಡನೆ ಆರವ್ ಅವಳಿಗೆ ಸೋಫಾ ಮೇಲೆ ಕೂರುವಂತೆ ಸನ್ನೆ ಮಾಡಿದಾಗ ಆಯುಷಿ ಬೇಡ ಎಂದು ತಲೆಯಾಡಿಸುತ್ತಾಳೆ.

ಆಗ ಕೋಪಗೊಳ್ಳುವ ಆರವ್ ನಿನ್ಗೆ ಎಷ್ಟು ಸಲ ಹೇಳಬೇಕು ನಾನ್ ಹೇಳಿದ್ದಕ್ಕೆ ನೋ ಅನ್ನಬೇಡ ಅಂತ ಅದು ನನಗೆ ಇಷ್ಟ ಆಗೋಲ್ಲ ಅಂತ ಎನ್ನುತ್ತಾ ಅವಳ ಕೈಗಳನ್ನು ಒರಟಾಗಿ ಒತ್ತಿ ಹಿಡಿದು ಸೋಫಾ ಬಳಿ ಬಂದು ಅವಳನ್ನು ಸೋಫಾ ಮೇಲೆ ಕೂರುವಂತೆ ದಬ್ಬುತಾನೆ.

(ಮುಂದುವರೆಯುವುದು...)

# ಆಸ್ತಿಯ ಆಸೆಗೆ ಮಲಮಗಳನ್ನು ಮಹಡಿ ಮೇಲಿಂದ ನೂಕಿ ಕೊಂದಳಲ್ಲಾ!


ಆರೋಪಿ ಮಹಾತಾಯಿ ರಾಧಾ

**ಬೀದರ ನಗರದ ಆದರ್ಶ ಕಾಲೋನಿಯಲ್ಲಿ ಭೀಕರ ಘಟನೆಯನ್ನು ನಡೆದಿದೆ! ಮಲತಾಯಿಯೊಬ್ಬಳು ಮನೆಯ ಮೂರನೇ ಮಹಡಿಯಿಂದ ಏಳು ವರ್ಷದ ಪುಟಾಣಿ ಕಂದಮ್ಮನನ್ನು ಥಳಿಸಿಬಿಟ್ಟ ಪರಿಣಾಮ ಬಾಲಕಿ ಬರ್ಬರವಾಗಿ ಸಾವನ್ನಪ್ಪಿದ್ದಾಳೆ.**


ಶಾನ್ವಿ ಬದುಕಿದ್ದಾಗ

**ಬೀದರ**
✍ ವೀರಶೆಟ್ಟಿ ಕುಂಬಾರ

ವಿಜಯಶ್ರೀ, ಗಂಡ ಸುರೇಶ ತೂಗಾಂವೆ (52) ಇವರಿಗೆ ಸಿದ್ಧಾಂತ (31) ಮಗನಿದ್ದು, ಸಿದ್ಧಾಂತ ಟೈಲರ್ ಕೆಲಸ ಮಾಡುತ್ತಿರುತ್ತಾನೆ. ಈತನಿಗೆ 2017ನೇ ಸಾಲಿನಲ್ಲಿ ಕೊಟಿಗ್ಯಾಳ ಗ್ರಾಮದ ಗಾಯತ್ರಿ ಎಂಬುವವಳ ಜೊತೆಗೆ ಮದುವೆ ಮಾಡಿದ್ದು, ಇವರಿಗೆ ಒಂದು ಹೆಣ್ಣು ಮಗು ಜನಿಸಿದ್ದು ಅದರ ಹೆಸರು ಶಾನ್ವಿ (7). ಕಾಲಕ್ರಮೇಣ ಗಾಯತ್ರಿ ಟಿಬಿ ಕಾಯಿಲೆಯಿಂದ ಮೃತಪಟ್ಟಿರುತ್ತಾಳೆ.

2023ನೇ ಸಾಲಿನಲ್ಲಿ ಮಹಾರಾಷ್ಟ್ರದ ಉದಗೀರದ ಪ್ರಭು ಕಾಂಬಳೆರವರ ಮಗಳಾದ ರಾಧಾ ಇವಳೊಂದಿಗೆ ಸಿದ್ಧಾಂತನು ಎರಡನೇ ಮದುವೆಯಾಗಿದ್ದನು. ಇವರಿಗೆ ದೀಕ್ಷಿತ್ ಹಾಗೂ ಯತೀಕಾ (18) ಅವಳಿ ಜವಳಿ ಮಕ್ಕಳು ಜನಿಸಿವೆ.

**ಮನೆ ಮೇಲೆ ಕಣ್ಣು**

ರಾಧಾಗೆ ಅವಳಿ ಮಕ್ಕಳು ಜನಿಸಿದ ಬೆನ್ನೆಲೇ ಇವಳಿಗೆ ಮೂರು ಮಹಡಿಯ ಮನೆಯ ಮೇಲೆ ಕಣ್ಣು ಬಿದ್ದಿದೆ. ಅದನ್ನು ತನ್ನ ಹೆಸರಿಗೆ ಮಾಡಿಕೊಳ್ಳಬೇಕೆಂಬ ದುರಾಸೆ ಬಂದಿದೆ. ತನ್ನ ಗಂಡನ ಮೊದಲನೆ ಹೆಂಡತಿಯ ಮಗಳು ಶಾನ್ವಿಯನ್ನೇ ಇಲ್ಲವಾಗಿಸಿದರೆ ಇರುವ ಆಸ್ತಿಯನ್ನೆಲ್ಲಾ ತನ್ನ ಅವಳಿ ಜವಳಿ ಮಕ್ಕಳಿಗೆ ಆಗುತ್ತದೆ ಎಂಬ ಕೆಟ್ಟ ಆಲೋಚನೆಯಿಂದ ಇವರು ವಾಸಿಸುವ ಮೂರನೇ ಮಹಡಿಯಿಂದ 22-8-2025ರಂದು ಮಧ್ಯಾಹ್ನ 2.30 ಗಂಟೆ ಸುಮಾರಿಗೆ ಶಾನ್ವಿಯನ್ನು ಮನೆಯ ಮೇಲ್ಮಹಡಿಯಿಂದ ತಳ್ಳಿರುವಂತಿದೆ! ಮಗು ಆಟ ಆಡುವಾಗ ಆಯತಪ್ಪಿ ಅಥವಾ ಕಾಲು ಜಾರಿ ಮಹಡಿಯಿಂದ ಕೆಳಗೆ ಬಿದ್ದು ಮುಖಕ್ಕೆ ಹಾಗೂ ತಲೆಗೆ ಭಾರಿ ರಕ್ತಗಾಯವಾಗಿದ್ದ ಕಾರಣ ಆಸ್ಪತ್ರೆಯಲ್ಲಿ ಚಿಕಿತ್ಸೆ ಫಲಕಾರಿಯಾಗದೇ ಮೃತಪಟ್ಟಿರುತ್ತಾಳೆ ಎಂದು ಮನೆಯವರೆಲ್ಲರೂ ಭಾವಿಸಿ ಈ ಬಗ್ಗೆ ಮೃತಳ ತಂದ ಸಿದ್ಧಾಂತ ದಿನಾಂಕ 28-8-2025ರಂದು ಗಾಂಧಿಗಂಜ ಪೊಲೀಸ್ ಠಾಣೆಯಲ್ಲಿ ಆಕಸ್ಮಿಕ ಅಥವಾ ಅಸ್ವಾಭಾವಿಕ ಸಾವು ಅಡಿಯಲ್ಲಿ ಕೇಸು ದಾಖಲಿಸಿದ್ದನು.

**ಮಲತಾಯಿ ಧೋರಣೆ!**

ರಾಧಾಗೆ ಇಬ್ಬರು ಅವಳಿ ಜವಳಿ ಮಕ್ಕಳು ಜನಿಸಿದ ನಂತರ ಶಾನ್ವಿಯೊಂದಿಗೆ ಮಲತಾಯಿ ಧೋರಣೆಯನ್ನು ಅನುಸರಿಸಿ ಆಕೆಗೆ ವಿನಾಕಾರಣ ಮನೆಯಲ್ಲಿ ಬೈಯ್ಯುವುದು, ಹಿಂಸೆ ನೀಡುವುದು ಸಣ್ಣ ಸಣ್ಣ ಮಾತಿಗೆ ಕೋಪ ಮಾಡುವುದು ಹಾಗೂ ಯಾರೂ ಮನೆಯಲ್ಲಿ ಇಲ್ಲದ ಸಮಯದಲ್ಲಿ ಶಾನ್ವಿಗೆ ಮನೆ ಕಸ ಗಡಿಸುವುದು, ಪಾತ್ರೆ, ಬಟ್ಟೆ ತೊಳಿಸುವ ಕೆಲಸ ಹಚ್ಚುತ್ತಿದ್ದಳು. ಇದನ್ನು ಗಮನಿಸಿದ ಶಾನ್ವಿ ಅಜ್ಜಿ ವಿಜಯಶ್ರೀಯವರು ರಾಧಾಳಿಗೆ ಬುದ್ಧಿಮಾತು ಹೇಳಿದ್ದು, ಸಣ್ಣ ಮಗುವಿಗ ಈ ರೀತಿ ಕೆಲಸಗಳು ಹಚ್ಚಬಾರದು. ಆಕೆಯೂ ಸಹ ನಿನ್ನ ಇಬ್ಬರು ಮಕ್ಕಳ ಹಾಗೆ. ಅದೂ ಸಹ ನಿನ್ನ ಮಗುವಿದ್ದು ಆಕೆಯ ಜೊತೆ ಸಹ ಪ್ರೀತಿ, ವಾತ್ಸಲ್ಯದಿಂದ ನಡೆದುಕೋ ಎಂದು ತಿಳುವಳಿಕೆ ಹೇಳಿದ್ದರು. ಆದರೂ ಸಹ ರಾಧಾಳು ಬಗ್ಗೆ ಶಾನ್ವಿಯ ತನ್ನ ಮನಸ್ಸಿನಲ್ಲಿ ದ್ವೇಷ ಸಾಧಿಸುತ್ತಿದ್ದಳು.


ಶವಾಗಾರದಲ್ಲಿ ಶಾನ್ವಿ ಶವ

ರಾಧಾಗೆ ಮನೆಯವರು ಎಷ್ಟು ಬುದ್ಧಿವಾದ ಹೇಳಿದರೂ ಆಕೆ ಸರಿಯಾಗಲಿಲ್ಲ.

ದಿನಾಂಕ 12-9-2025ರಂದು ಮಧ್ಯಾಹ್ನ ಸಮಯದಲ್ಲಿ ಅಜ್ಜಿ ವಿಜಯಶ್ರೀ ಮನೆಯಲ್ಲಿದ್ದಾಗ ಆಕೆಯ ಮಗ ಸಿದ್ಧಾಂತರವರ ಮೊಬೈಲ್‌ಗೆ ಇವರ ಮನೆ ಪಕ್ಕದಲ್ಲಿರವ ಶ್ರೀ ದತ್ತಾಕಿರಣ ಅಂಗಡಿಯವರು ಒಂದು ಸಿಸಿಟಿವಿ ವಿಡಿಯೋ ಕಳಿಸಿದ್ದು, ಅದರಲ್ಲಿ ದಿನಾಂಕ 27-8-2025ರಂದು ಮಧ್ಯಾಹ್ನ ಅಂದರೆ ಶಾನ್ವಿ ಮನೆಯ ಮೇಲಿಂದ ಬಿದ್ದ ಸಮಯದಲ್ಲಿ ಮಲತಾಯಿ ರಾಧಾ ಕಾಂಪೌಂಡ್ ಗೋಡೆ ಹತ್ತಿ ಪ್ಲಾಸ್ಟಿಕ್ ಕುರ್ಚಿಯ ಒಂದು ಸಣ್ಣ ಬಕೆಟ್‌ನ್ನು ಬಳಿ ಇಟ್ಟು ಅದರ ಮೇಲೆ ಶಾನ್ವಿಯನ್ನ ನಿಲ್ಲಿಸಿ ಅವಳಿಗೆ ಛಾವಣಿಯಿಂದ ಕೆಳಗಡೆ ಏನೋ ತೋರಿಸುತ್ತಾ ಓಡಾಡುತ್ತಿದ್ದಳು. ಮತ್ತೆ ರಾಧಾ ಎರಡು-ಮೂರು ಸಲ ತನ್ನ ಮುಖವನ್ನು ಮರೆಮಾಚಿ ಯಾರಿಗೂ ಕಾಣಿಸದ ಹಾಗೆ ಕೆಳಗಡೆ ಕುಳಿತು ಓಡಾಡುತ್ತಾ ಸಂಶಯಾಸ್ಪದ ರೀತಿಯಲ್ಲಿ ಕಾಣಿಸಿಕೊಂಡು ಶಾನ್ವಿಯು ನಿಂತಿದ್ದ ಪ್ಲಾಸ್ಟಿಕ್ ಕುರ್ಚಿಯ ಹತ್ತಿರ ಹೋಗಿ ಶಾನ್ವಿಯನ್ನು ಮೇಲಿನಿಂದ ನೂಕಿ ಬಿಟ್ಟಳು! ಆಕೆಯು ಕೆಳಗಡೆ ಬಿದ್ದ ತಕ್ಷಣ ಒಮ್ಮೆಲೇ ಮನೆಯಲ್ಲಿ ಓಡಿ ಹೋಗಿರುವ ದೃಶ್ಯಾವಳಿಗಳನ್ನು ಮನೆಯವರು ನೋಡಿ ರಾಧಾಗೆ ಶಾನ್ವಿ ಮನೆಯ ಮೇಲಿಂದ ಬಿದ್ದ ಸಮಯದಲ್ಲಿ ನೀನು ಏನು ಮಾಡುತ್ತಿದ್ದಿ ಮತ್ತು ಎಲ್ಲಿದ್ದಿ ಎಂದು ಕೇಳಿದಾಗ ಅವಳು ಆ ಸಮಯದಲ್ಲಿ ತಾನು ಮನೆಯಲ್ಲಿ ಮಲಗಿಕೊಂಡಿದ್ದು, ಶಾನ್ವಿ ಬಿದ್ದ ಬಗ್ಗೆ ನನಗೆ ಏನು ಗೊತ್ತಿಲ್ಲ ಎಂದು ತಿಳಿಸಿದ್ದಳು!


ಎಸ್ಪಿ ಪ್ರದೀಪ್ ಗುಂಟಿ


ಅ|| ಎಸ್ಪಿ ಚಂದ್ರಕಾಂತ್ ಪೂಜಾರಿ

**ಸಿಸಿ ಫುಟೇಜ್‌ನಲ್ಲಿ...**

ಆದರೆ ಸಿಸಿಟಿವಿ ದೃಶ್ಯಾವಳಿಗಳಲ್ಲಿ ರಾಧಾ ಶಾನ್ವಿಯ ಜೊತೆ ಮೇಲ್ಛಾವಣಿಯಲ್ಲಿ ಕಂಡು ಬಂದಿದ್ದಲ್ಲದೇ ಸಂಶಯ ರೀತಿಯಿಂದ ವರ್ತಿಸಿ ಯಾರೂ ನೋಡಬಾರದೆಂದು ಮುಖಮರೆ ಮಾಡುವ ಸಲುವಾಗಿ ಮಂಡಿಯೂರಿ ಓಡಾಡಿ ಶಾನ್ವಿಯನ್ನು ಮೇಲಿಂದ ನೂಕಿಬಿಟ್ಟು ಮನೆಯಲ್ಲಿ ಓಡಿ ಬಂದಿರುತ್ತಾಳೆ! ಇದರಿಂದ ರಾಧಾಳೇ ಶಾನ್ವಿಯನ್ನ ತಮ್ಮ ಮನೆಯ ಮೇಲ್ಛಾವಣೆಗೆ ಕರೆದುಕೊಂಡು ಹೋಗಿ ಮಲತಾಯಿ ಧೋರಣೆಯಿಂದ ಮೇಲಿನಿಂದ ನೂಕಿಬಿಟ್ಟು ಕೊಲೆ ಮಾಡಿರುತ್ತಾಳೆ. ರಾಧಾಳು ಶಾನ್ವಿಗೆ ನೂಕಿಬಿಟ್ಟಿದ್ದ ವಿಡಿಯೋ ತುಣುಕು ತಮ್ಮ ಮನೆಯ ಹಿಂದಿನ ಮನೆಯವರಾದ ನೀಲಕಂಠರವರ ಮನೆಯ ಮೂರನೇ ಅಂತಸ್ತಿನ ಮೇಲೆ ಹೊರಗಡೆ ಭಾಗದಲ್ಲಿ ಅಳವಡಿಸಿದ ಸಿಸಿ ಕ್ಯಾಮರಾದಲ್ಲಿ ಸೆರೆಯಾಗಿದ್ದವು.

ತನ್ನ ಎರಡನೇ ಸೊಸೆ ರಾಧಾ (25) ಮಲತಾಯಿ ಧೋರಣೆ ಅನುಸರಿಸಿ ಶಾನ್ವಿಯ ವಿರುದ್ಧ ದ್ವೇಷ ಸಾಧಿಸಿ ಮುಂದಿನ ದಿನಗಳಲ್ಲಿ ಅವಳು ತನ್ನ ಇಬ್ಬರು ಮಕ್ಕಳಿಗೆ ಶಾನ್ವಿಯು ಮುಳುವಾಗಬಹುದೆಂದು ಭಾವಿಸಿ ಕೊಲೆ ಮಾಡುವ ಉದ್ದೇಶದಿಂದ ಶಾನ್ವಿಯನ್ನು ಮನೆಯ ಮೇಲ್ಛಾವಣೆಗೆ ಕರೆದುಕೊಂಡು ಹೋಗಿ, ಕುರ್ಚಿ ಮೇಲೆ ಸಣ್ಣ ಬಕೆಟ್‌ನ್ನು ಬಾಳಿಟ್ಟು, ಅದರ ಮೇಲೆ ನಿಲ್ಲಿಸಿ ನೂಕಿಬಿಟ್ಟು ಕೊಲೆ ಮಾಡಿದ್ದಾಳೆ ಎಂದು ಗಾಂಧಿಗಂಜ ಪೊಲೀಸ್ ಠಾಣೆಗೆ ದೂರು ನೀಡಿ ತನ್ನ ಎರಡನೇ ಸೊಸೆ ರಾಧಾಳ ಸೂಕ್ತ ಕಾನೂನು ಜರುಗಿಸಲು ಮನವಿ ಮಾಡಿದರು!


ಡಿವೈಎಸ್ಪಿ ಶಿವನಗೌಡ ಪಾಟೀಲ್


ಸಿಪಿಐ ಆನಂದ್

ಸಿಪಿಐ ಆನಂದ್ ಠಾಣೆಯ ಅಪರಾಧ ಸಂಖ್ಯೆ 183/2025 ಕಲಂ 103 ಬಿಎನ್‌ಎಸ್ 2023ರ ಪ್ರಕಾರ ಕೇಸು ದಾಖಲಿಸಿಕೊಂಡರು. ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಪ್ರದೀಪ್ ಗುಂಟೆ, ಹೆಚ್ಚವರಿ ಎಸ್ಪಿ ಚಂದ್ರಕಾಂತ ಪೂಜಾರಿ, ಡಿವೈಎಸ್ಪಿ ಶಿವನಗೌಡ ಪಾಟೀಲರವರ ಸೂಕ್ತ ಮಾರ್ಗದರ್ಶನದಲ್ಲಿ ಸಿಪಿಐ ಆನಂದರವರು ತನಿಖೆ ಕೈಗೊಂಡು ದಿನಾಂಕ 13-9-2025ರಂದು ಆರೋಪಿ ರಾಧಾಳನ್ನು ಬಂಧಿಸಿ ತನಿಖೆ ಮುಂದುವರೆಸಿದ್ದಾರೆ.

# ಸೌಜನ್ಯ ಫೈಲ್ಸ್



5

ನಿರೂಪಣೆ :

ಮೋಹನ್ ಬೋಳಂಗಡಿ

# ಬೆಳ್ತಂಗಡಿಯಲ್ಲಿ ನಡೆಯಿತು ಬೃಹತ್ ಸಮಾವೇಶ!

ಆ ಸಮಯದಲ್ಲಿ ಸೌಜನ್ಯ ಹತ್ಯೆಯಾಗಿ ಒಂದು ತಿಂಗಳು ಕಳೆದಿತ್ತು. ಸ್ಥಳೀಯವಾಗಿ ಯಾವುದೇ ಕುತೂಹಲ ಆ ಪ್ರಕರಣದ ಬಗ್ಗೆ ಇರಲಿಲ್ಲ. ಪೊಲೀಸರು ಸೌಜನ್ಯ ಹಂತಕ ಸಂತೋಷ್‌ರಾವ್‌ನನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿ ಪೊಲೀಸ್ ಕಸ್ಟಡಿಗೆ ಪಡೆದುಕೊಂಡು ರಿಕವರಿ ಮಹಜರು ನಡೆಸಿ ಮತ್ತೆ ನ್ಯಾಯಾಲಯಕ್ಕೆ ಹಾಜರುಪಡಿಸಿ ಮಂಗಳೂರಿನ ಸಬ್ ಜೈಲಿಗೆ ಬಿಟ್ಟು ಬಂದಿದ್ದರು. ಸೌಜನ್ಯ ಹತ್ಯೆಯಾದ ಎರಡು ದಿನಗಳ ಬಳಿಕ ಧರ್ಮಸ್ಥಳದಲ್ಲಿ ಮತ್ತು ಬೆಳ್ತಂಗಡಿ ಪೊಲೀಸ್ ಠಾಣೆಯ ಬಳಿ ನಡೆದಿದ್ದಂತಹ ಘಟನೆಗಳಿಗೆ ಸಂಬಂಧಿಸಿದಂತೆ ದಾಖಲಾಗಿದ್ದ ಪ್ರಕರಣಗಳ ತನಿಖೆ ನಡೆಯುತ್ತಿತ್ತು. ಪೊಲೀಸರು ಆ ಸಂದರ್ಭದಲ್ಲಿ ಉಂಟಾದ ಉದ್ವಿಗ್ನತೆಯಿಂದ ಸಂಭವಿಸಿದ ಅನಾಹುತ ಎಂದು ಮನವರಿಕೆ ಮಾಡಿಕೊಂಡು ತನಿಖೆ ನಡೆಸಿ ಕೊನೆಗೆ ಬಿ ವರದಿ ಸಲ್ಲಿಸಿದ್ದರು.

ಸೌಜನ್ಯ ಹತ್ಯಾ ಪ್ರಕರಣ ಸ್ಥಳೀಯವಾಗಿ ಸಾಕಷ್ಟು ಚರ್ಚೆಯನ್ನು ಉಂಟುಮಾಡಿತ್ತು. ಮಗಳನ್ನು ಕಳೆದುಕೊಂಡ ಕುಟುಂಬದ ಪರವಾಗಿ ಸಮಾಜ ನಿಂತುಕೊಳ್ಳಬೇಕಾದಂತಹ ಸ್ಥಿತಿ ನಿರ್ಮಾಣವಾಗಿತ್ತು. ಇಂತಹ ಸಂದರ್ಭದಲ್ಲಿ ಕೇಮಾರು ಶ್ರೀ ಈಶ ವಿಠಲದಾಸ ಸ್ವಾಮೀಜಿಯವರು ಆ ಕುಟುಂಬದ ಪರವಾಗಿ ನಿಂತುಕೊಳ್ಳಲು ನಿರ್ಧರಿಸಿದ್ದರು. ಅವರು ಸೌಜನ್ಯ ಮನೆಗೆ ಭೇಟಿ ನೀಡಿ ಮನೆ ಮಂದಿಗೆ ಸಾಂತ್ವನ ಹೇಳಲು ಮುಂದಾಗಿದ್ದರು. ಅವರು ಆ ಸಂದರ್ಭದಲ್ಲಿ ಹಿಂದೂ ಪರ ಸಂಘಟನೆಗಳಲ್ಲಿ ಸಕ್ರಿಯರಾಗಿದ್ದು ತನ್ನದೇ ಆದ ರಾಷ್ಟ್ರೀಯ ಹಿಂದೂ ಜಾಗರಣಾ ವೇದಿಕೆಯನ್ನು ಕಟ್ಟಿಕೊಂಡು ಹೋರಾಟ ನಡೆಸುತ್ತಿದ್ದ ಮಹೇಶ್ ಶೆಟ್ಟಿ ತಿಮರೋಡಿಯವರಿಗೆ ದೂರವಾಣಿ ಕರೆ ಮಾಡಿ ತನ್ನ ಇಂಗಿತವನ್ನು ಕೋರಿಕೊಂಡಿದ್ದರು. ಸ್ವಾಮೀಜಿಯೊಬ್ಬರು ಈ ರೀತಿಯ ಕೋರಿಕೆ ಸಲ್ಲಿಸಿದಾಗ ತಿಮರೋಡಿಯವರು ಅದಕ್ಕೆ ಸ್ಪಂದಿಸಿದರು. ಸ್ವಾಮೀಜಿಯವರು ಸೌಜನ್ಯ ಮನೆಗೆ ಭೇಟಿ ನೀಡಿದಂತಹ ಸಂದರ್ಭದಲ್ಲಿ ಮಹೇಶ್ ಶೆಟ್ಟಿ ತಿಮರೋಡಿ ಮತ್ತು ಅವರ ಸಂಘಟನೆಯ ಪ್ರಮುಖರು ಉಪಸ್ಥಿತರಿದ್ದರು. ಕೇಮಾರು ಸ್ವಾಮೀಜಿಯವರು ಸೌಜನ್ಯ ಮನೆಯವರಿಗೆ ಸಾಂತ್ವನ ಹೇಳಿ ಕುಟುಂಬದೊಂದಿಗೆ ಸದಾ ನಿಲ್ಲುವುದಾಗಿ ಭರವಸೆ ನೀಡಿದ್ದರು. ಆ ಘಟನೆಯ ಬಗ್ಗೆ ವ್ಯಾಪಕ ಪ್ರಚಾರ ಸಿಕ್ಕಿತು. ಹಿಂದುಳಿದ ವರ್ಗದ ಸ್ವಾಮೀಜಿಯೊಬ್ಬರು ಗೌಡ ಸಮಾಜದ ಹೆಣ್ಣೊಬ್ಬಳ ಮನೆಗೆ ಬಂದು ಸಾಂತ್ವನ ಹೇಳಿದ ವಿಚಾರ ಆ ಸಮಾಜದಲ್ಲಿ ಚರ್ಚಿತವಾಯಿತು.

ಅದೇ ಸಂದರ್ಭದಲ್ಲಿ ಶ್ರೀ ಕ್ಷೇತ್ರ ಧರ್ಮಸ್ಥಳದವರೊಂದಿಗೆ ವೈಯಕ್ತಿಕ ಭಿನ್ನಾಭಿಪ್ರಾಯ ಇದ್ದ ಮಹೇಶ್ ಶೆಟ್ಟಿ ತಿಮರೋಡಿ ಅವರ ಮನಸ್ಸಿನಲ್ಲಿ ಮತ್ತೊಂದು ಆಲೋಚನೆ ಹೊಳೆಯಿತು. ಸೌಜನ್ಯ ವಿಚಾರ ಭಾವನಾತ್ಮಕವಾದದ್ದು. ತಾಲೂಕಿನಾದ್ಯಂತ ಸೌಜನ್ಯಳ ಬಗ್ಗೆ ಅನುಕಂಪ ತಲೆದೋರಿತು. ಅಪ್ರಾಪ್ತ ವಯಸ್ಸಿನ ಹೆಣ್ಣೊಬ್ಬಳನ್ನು ಮೃಗೀಯ ರೀತಿಯಲ್ಲಿ ಅತ್ಯಾಚಾರಗೈದು ಕೊಲೆಗೈದಂತಹ ಅಪರೂಪದಲ್ಲಿ ಅಪರೂಪದ ಪ್ರಕರಣದಲ್ಲಿ ಆರೋಪಿ ಸಂತೋಷ್‌ರಾವ್‌ನನ್ನು ಧರ್ಮಸ್ಥಳದ ಬಾಹುಬಲಿಬೆಟ್ಟದಿಂದ ಓಡಿಸಿಕೊಂಡು ಬಂದು ಹಿಡಿದು ಪೊಲೀಸರಿಗೆ ಧರ್ಮಸ್ಥಳದ ನೌಕರರೇ ಹಿಡಿದು ಕೊಟ್ಟಂತಹ ಘಟನೆಯನ್ನು ಧರ್ಮಸ್ಥಳದ ಆಡಳಿತ ವರ್ಗದ ವಿರುದ್ಧವೇ ತಿರುಗಿಸಲು ಸಕಾಲ ಎಂದು ಭಾವಿಸಿದ ಮಹೇಶ್ ಶೆಟ್ಟಿ ತಿಮರೋಡಿ ಅದಕ್ಕಾಗಿ ಮಾಸ್ಟರ್ ಪ್ಲ್ಯಾನ್ ರೂಪಿಸಿದರು. ಆ ಸಂದರ್ಭದಲ್ಲಿ ಅವರಿಗೆ ಜೊತೆಯಾದವರು ಗುರುವಾಯನಕೆರೆ ನಾಗರಿಕ ಸೇವಾ ಟ್ರಸ್ಟ್‌ನ ಸೋಮನಾಥ ನಾಯಕ್. ಅವರು ಎನ್‌ಜಿಒ ನಡೆಸುತ್ತಿದ್ದರು. ಧರ್ಮಸ್ಥಳದವರೊಂದಿಗೆ ಸೈದ್ಧಾಂತಿಕ ಭಿನ್ನಾಭಿಪ್ರಾಯ ಹೊಂದಿದ್ದರು.

ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ 1982ರಲ್ಲಿ ಆರಂಭಗೊಂಡಂತಹ ಸಂದರ್ಭದಲ್ಲಿ ಸೋಮನಾಥ ನಾಯಕ್ ಆ ಯೋಜನೆಯ ಬೆನ್ನೆಲುಬು ಆಗಿದ್ದರು. ಅವರ ಪತ್ನಿ ವಿದ್ಯಾ ನಾಯಕ್ ಅವರು ಯೋಜನೆಯ ಪ್ರಬಂಧಕರಾಗಿದ್ದರು. ಧರ್ಮಸ್ಥಳದವರಿಗೂ ಸೋಮನಾಥ ನಾಯಕ್ ಅವರಿಗೂ ವ್ಯಾವಹಾರಿಕ ಭಿನ್ನಾಭಿಪ್ರಾ ಯಗಳು ಬಂದು ಅವರನ್ನು ಹೊರಗಿಡಲಾಗಿತ್ತು. ಇದು ಅವರಿಗೆ ಧರ್ಮಸ್ಥಳದ ವಿರುದ್ಧ ಹೋರಾಟಕ್ಕೆ ಸ್ಫೂರ್ತಿಯಾಗಿತ್ತು. ಇವರೊಂದಿಗೆ ಕೆಲಸದಲ್ಲಿ ಇದ್ದಂತಹ ಜಗದೀಶ್ ಸೌಜನ್ಯಳಿಗೆ ಹತ್ತಿರದ ಸಂಬಂಧಿ . ಆಕೆಯ ಮೃತದೇಹ ಸಿಕ್ಕಿದ ಸಂದರ್ಭದಲ್ಲಿ ಬೆಳ್ತಂಗಡಿ ಪೊಲೀಸ್ ಠಾಣೆಗೆ ಅತ್ಯಾಚಾರ ಮತ್ತು ಕೊಲೆ ಪ್ರಕರಣಕ್ಕೆ ಸಂಬಂಧಿಸಿದಂತೆ ದೂರು ನೀಡಿದ್ದು ಇದೇ ಜಗದೀಶ್. ಇವರನ್ನೆಲ್ಲಾ ಬಳಸಿಕೊಂಡು ಶ್ರೀಕ್ಷೇತ್ರ ಧರ್ಮಸ್ಥಳದ ವಿರುದ್ಧ ಹೋರಾಟವೊಂದನ್ನು ರೂಪಿಸುವ ಯೋಜನೆ ಹೊಳೆದದ್ದು ಮಹೇಶ್ ಶೆಟ್ಟಿ ತಿಮರೋಡಿಯವರಿಗೆ. ಆದರೆ ಈ ಹೋರಾಟ ರೂಪಿಸುವ ಸಂದರ್ಭದಲ್ಲಿ ಧರ್ಮಸ್ಥಳ ಗ್ರಾಮದ ಕೆಲವು ಪ್ರಮುಖರನ್ನು ಸೇರಿಸುವುದು ಅವರ ಯೋಚನೆಯಾಗಿತ್ತು. ಅದಕ್ಕಾಗಿ ರಾಷ್ಟ್ರೀಯ ಹಿಂದೂ ಜಾಗರಣಾ ವೇದಿಕೆಯ ಬ್ಯಾನರ್‌ನ ಅಡಿಯಲ್ಲಿ ಒಂದು ಸಮಾಲೋಚನಾ ಸಭೆಯನ್ನು ತಿಮರೋಡಿಯ ಮನೆಯಲ್ಲಿ ಕರೆಯಲಾಗಿತ್ತು. ಅದಕ್ಕೆ ಸೌಜನ್ಯ ಅತ್ಯಾಚಾರ ಮತ್ತು ಹತ್ಯಾ ಪ್ರಕರಣವನ್ನು ವಿರೋಧಿಸಿ ನ್ಯಾಯಯುತ ತನಿಖೆಗೆ ಒತ್ತಾಯಿಸುವ ಅಜೆಂಡಾವನ್ನು ರೂಪಿಸಲಾಯಿತು. ಬಹುತೇಕ ಸ್ಥಳೀಯ ಪ್ರಮುಖರಿಗೆ ಆಹ್ವಾನ ನೀಡಲಾಯಿತು. ಈ ಆಹ್ವಾನದ ಹಿನ್ನೆಲೆಯಲ್ಲಿ ಹಲವು ಮಂದಿ ತಿಮರೋಡಿಯವರ ಮನೆಯಲ್ಲಿ ಸೇರಿದ್ದರು. ಶ್ರೀ ಕ್ಷೇತ್ರ ಧರ್ಮಸ್ಥಳದವರೊಂದಿಗೆ ಭಿನ್ನಾಭಿಪ್ರಾಯವಿದ್ದಂತಹ ಕೆಲವರೊಂದಿಗೆ ಕ್ಷೇತ್ರದ ಬಗ್ಗೆ ಸದಾಭಿಪ್ರಾಯ ಹೊಂದಿದ್ದವರೂ ಈ ಸಭೆಯಲ್ಲಿ ಭಾಗವಹಿಸಿದ್ದರು. ಅಲ್ಲಿ ಸೇರಿದ್ದಂತಹ ಕೊಚ್ಚಿ ಕ್ರಿಶ್ಚಿಯನ್ ಮತಕ್ಕೆ ಸೇರಿದ್ದವರು ಮತ್ತು ಮುಸ್ಲಿಂ ಧರ್ಮದ ಪ್ರಮುಖರು. ಆ ಸಮಾಲೋಚನಾ ಸಭೆಯಲ್ಲಿ ಬ್ಯಾನರ್‌ನ ಬಗ್ಗೆ ಆಕ್ಷೇಪ ವ್ಯಕ್ತಪಡಿಸಿದ್ದರು. ರಾಷ್ಟ್ರೀಯ ಹಿಂದೂ ಜಾಗರಣ ವೇದಿಕೆಯ ಬ್ಯಾನರ್‌ನ ಅಡಿಯಲ್ಲಿ ಎಲ್ಲರೂ ಒಟ್ಟು ಸೇರಲು ಸೈದ್ಧಾಂತಿಕ ಭಿನ್ನಾಭಿಪ್ರಾಯ ಉಂಟಾದ ಹಿನ್ನೆಲೆಯಲ್ಲಿ ಸೌಜನ್ಯ ನ್ಯಾಯಕ್ಕಾಗಿ ಪ್ರಜಾಪ್ರಭುತ್ವ ವೇದಿಕೆ ಎಂಬ ಸಂಘಟನೆಯನ್ನು ಹುಟ್ಟು ಹಾಕಲಾಯಿತು. ಇದಕ್ಕೆ ಎಲ್ಲರೂ ಸಹಮತ ವ್ಯಕ್ತಪಡಿಸಿದರು. ಅಲ್ಲಿಂದ ಹೋರಾಟದ ರೂಪುರೇಷೆಗಳು ಆರಂಭಗೊಂಡವು.



ಮಹೇಶ್ ಶೆಟ್ಟಿ ತಿಮರೋಡಿ

ಹೋರಾಟದ ಆರಂಭದಲ್ಲಿ ಬೆಳ್ತಂಗಡಿ ತಾಲೂಕು ಕ್ರೀಡಾಂಗಣದಲ್ಲಿ ಬೃಹತ್ ಮಟ್ಟದ ಜನಜಾಗೃತಿ ಸಮಾವೇಶ ನಡೆಸಲು ತೀರ್ಮಾನಿಸಲಾಯಿತು. ಅದಕ್ಕೆ ಸೌಜನ್ಯ ಸಮುದಾಯದ ಒಕ್ಕಲಿಗ ಸಂಸ್ಥಾನದ ಪೀಠಾಧಿಪತಿಗಳನ್ನು ಆಹ್ವಾನಿಸಲು ನಿರ್ಧರಿಸಲಾಯಿತು. ಅದರಂತೆ ಮಂಗಳೂರಿನ ಕಾವೂರು ಶ್ರೀ ಅದಿ ಚುಂಚನಗಿರಿ ಶಾಖಾ ಮಠದ ಸ್ವಾಮಿಗಳನ್ನು ಆಹ್ವಾನಿಸಲಾಯಿತು. ಈ ಸಂದರ್ಭದಲ್ಲಿ ಬೆಳ್ತಂಗಡಿ ತಾಲೂಕಿನ ಒಕ್ಕಲಿಗರ ಸಂಘದ ಪದಾಧಿ ಕಾರಿಗಳು ಶಾಖಾ ಮಠದ ಸ್ವಾಮಿಗಳನ್ನು ಸಂಪರ್ಕಿಸಿ ಮಹೇಶ್ ಶೆಟ್ಟಿ ತಿಮರೋಡಿ ನೇತೃತ್ವದ ಸಭೆಗೆ ಹಾಜರಾಗದಂತೆ ಮನವರಿಕೆ ಮಾಡಿದ್ದರು. ಈ ಸಂದರ್ಭದಲ್ಲಿ ಮಹೇಶ್ ಶೆಟ್ಟಿ ತಿಮರೋಡಿ ಮತ್ತು ಸೌಜನ್ಯ ಮನೆಯವರು ಆದಿ ಚುಂಚನಗಿರಿ ಮಠದ ಸ್ವಾಮಿಗಳಾದ ನಿರ್ಮಲಾನಂದ ಸ್ವಾಮೀಜಿಯವರನ್ನು ಬೆಂಗಳೂರಿನ ವಿಜಯನಗರದಲ್ಲಿರುವ ಶಾಖಾ ಮಠದಲ್ಲಿ ಭೇಟಿಯಾಗಿ ಹತ್ಯೆಗೀಡಾದ ಸಮಾಜದ ಹೆಣ್ಣುಮಗುವಿಗೆ ನ್ಯಾಯ ಕೋರಿ ನಡೆಸಲಾಗುವಂತಹ ಸಮಾವೇಶಕ್ಕೆ ಸಮಾಜದ ಗುರುಗಳ ಮಾರ್ಗದರ್ಶನದ ಅಗತ್ಯತೆಯ ಬಗ್ಗೆ ವಿವರಿಸಿದರು. ಅವರು ಶಾಖಾ ಮಠದ ಸ್ವಾಮಿಗಳಿಗೆ ಸಮಾವೇಶಕ್ಕೆ ಹೋಗುವಂತೆ ಸೂಚನೆ ನೀಡಿದ್ದರು.

ಸಮಾವೇಶದ ಸಿದ್ಧತೆಗಳು ಆರಂಭಗೊಂಡಿತು. ಬೆಳ್ತಂಗಡಿ ತಾಲೂಕಿನ ಪ್ರತಿಯೊಂದು ಗ್ರಾಮಗಳಲ್ಲೂ ಪ್ರಚಾರ ಮಾಡಲಾಯಿತು. ಸಮಾವೇಶದಲ್ಲಿ ಭಾಗಿಗಳಾಗುವ ಸಾರ್ವಜನಿಕರಿಗೆ ಊಟೋಪಚಾರದ ವ್ಯವಸ್ಥೆಗಾಗಿ ಗ್ರಾಮಸ್ಥರಿಂದ ಹೊರೆಕಾಣಿಕೆ ಸ್ವೀಕರಿಸುವ ವ್ಯವಸ್ಥೆ ಮಾಡಲಾಯಿತು. ಸಮಾವೇಶದ ಹಿಂದಿನ ದಿವಸ ಕಾಸರಗೋಡು ಜಿಲ್ಲೆಯ ಪೈವಳಿಕೆಯ ಮಂತ್ರವಾದಿಯೊಬ್ಬರಿಂದ ಬೆಳ್ತಂಗಡಿ ಪ್ರವಾಸಿ ಮಂದಿರದ ಹಿಂಬದಿಯ ಜಾಗದಲ್ಲಿ ಯಾಗವೊಂದನ್ನು ನಡೆಸಲಾಯಿತು. ಸಮಾವೇಶಕ್ಕೆ ಯಾವುದೇ ಕ್ಷುದ್ರ ಶಕ್ತಿಗಳ ತೊಂದರೆ ಉಂಟಾಗಬಾರದು ಎಂದು ಪ್ರಾರ್ಥಿಸಲಾಯಿತು. ತಾಲೂಕಿನ ಜನಸಾಮಾನ್ಯರು ಸೌಜನ್ಯ ನ್ಯಾಯಕ್ಕಾಗಿ ಬೆಳ್ತಂಗಡಿಗೆ ಆಗಮಿಸಿದರು. ಸುಮಾರು 25000 ಮಂದಿ ಸಮಾವೇಶದಲ್ಲಿ ಭಾಗಿಗಳಾದರು. ಕಾವೂರು ಶಾಖಾ ಮಠದ ಸ್ವಾಮೀಜಿಗಳು, ಕೇಮಾರು ಸ್ವಾಮೀಜಿಗಳು, ಕೊಚ್ಚಿ ಕ್ರಿಶ್ಚಿಯನ್ ಧರ್ಮಗುರುಗಳು, ಮುಸ್ಲಿಂ ಸಮಾಜದ ಸ್ಥಳೀಯ ಪ್ರಮುಖರು ಭಾಗಿಗಳಾಗಿದ್ದರು. ಕಾವೂರು ಶಾಖಾ ಮಠದ ಸ್ವಾಮೀಜಿಗಳು ಪ್ರಾಥಮಿಕವಾಗಿ ಆಶೀರ್ವಚನ ನೀಡಿ ನಿರ್ಗಮಿಸಿದ ನಂತರ ಸಮಾವೇಶದ ಇಡೀ ಆಶಯವೇ ಬದಲಾಗುವಂತೆ ವೇದಿಕೆಯ ಮೇಲಿದ್ದಂತಹ ಮಹೇಶ್ ಶೆಟ್ಟಿ ತಿಮರೋಡಿಯವರ ಮಾತಿನ ಓಘಕ್ಕೆ ಇಡೀ ಸೇರಿದ್ದ ಜನರು ಚಪ್ಪಾಳೆ ತಟ್ಟಿದರು. ಅವರು ಸೌಜನ್ಯ ಹತ್ಯೆಯಲ್ಲಿ ಧರ್ಮಸ್ಥಳದವರ ಕೈವಾಡ ಇದೆ ಎಂದು ನೇರವಾಗಿ ಆರೋಪಿಸಿದರು. ಪರಿಣಾಮವಾಗಿ ಯಾವ ಉದ್ದೇಶಕ್ಕಾಗಿ ಆ ಸಮಾವೇಶ ಸೇರಿತ್ತೋ ಅದು ಭಿನ್ನ ದಾರಿಗೆ ಹೋಯಿತು. ಆ ಸಂದರ್ಭದಲ್ಲಿ ಸೌಜನ್ಯ ಮನೆಯವರಿಗೆ ನೆರವಾಗುವ ಉದ್ದೇಶದಿಂದ ಸಮಾವೇಶದ ಸ್ಥಳದಲ್ಲಿ ಆರು ಕಡೆಗಳಲ್ಲಿ ನೀರು ತುಂಬಿಸುವಂತಹ ಡ್ರಮ್‌ಗಳನ್ನು ಇಡಲಾಗಿತ್ತು ಮತ್ತು ಅದಕ್ಕೆ ಹಣ ಹಾಕುವಂತೆ ಕೋರಲಾಗಿತ್ತು. ಅನ್ನ ಸಂತರ್ಪಣೆಗೆ ಎಂದು ಬಂದಿದ್ದಂತಹ ಹೊರೆಕಾಣಿಕೆಯು ನೇರವಾಗಿ ತಿಮರೋಡಿಯವರ ಮನೆಗೆ ಹೋದರೆ ಡಬ್ಬಿಗಳನ್ನು ಸಹ ಮನೆಗೆ ಸಾಗಿಸಲಾಯಿತು. ಅದರಲ್ಲಿ ಸುಮಾರು 25 ಲಕ್ಷ ರೂ.ಗಳಷ್ಟು ಸಂಗ್ರಹವಾಗಿರಬಹುದು ಎಂದು ನಂಬಲಾಗಿದೆ. ಈ ಸಮಾವೇಶದ ನಂತರ ತಿಮರೋಡಿ ಮತ್ತವರ ತಂಡದೊಂದಿಗೆ ಸಂಪರ್ಕದಲ್ಲಿದ್ದಂತಹ ಧರ್ಮಸ್ಥಳದ ನಾಗರೀಕರು ಸಂಬಂಧ ಕಡಿದುಕೊಂಡರು.

ಈ ಸಮಾವೇಶಕ್ಕೆ ಸಂಪೂರ್ಣ ಬೆಂಬಲ ನೀಡಿದ್ದಂತಹ ಕಮ್ಯೂನಿಷ್ಟ್ ಪಕ್ಷದ ಮುಖಂಡರು ಸಹ ಸಮಾವೇಶದಲ್ಲಿ ಸಂಗ್ರಹವಾದಂತಹ ಹಣ ಕಾಸಿನ ಲೆಕ್ಕಾಚಾರ ಕೇಳಿ ದೂರ ಸರಿದರು. ಆದರೆ ಮಹೇಶ್ ಶೆಟ್ಟಿ ತಿಮರೋಡಿಯವರಿಗೆ ಈ ರೀತಿಯ ಸಭೆಗಳನ್ನು ನಡೆಸಿದರೆ ಸ್ಥಳೀಯ ಜನರನ್ನು ಧರ್ಮಸ್ಥಳದ ವಿರುದ್ಧ ರೊಚ್ಚಿಗೆಬ್ಬಿಸಿ ಹಣ ಸಂಗ್ರಹ ಮಾಡಬಹುದು ಎಂಬ ಐಡಿಯಾ ಹೊಳೆಯಿತು. ತದನಂತರ ಅವರು ಬೆಳ್ತಂಗಡಿ ತಾಲೂಕಿನ ವಿವಿದೆಡೆಗಳಲ್ಲಿ ಸಣ್ಣ ಸಣ್ಣ ಸಮಾವೇಶಗಳನ್ನು ನಡೆಸಿ ಹಣ ಸಂಗ್ರಹಕ್ಕೆ ಮುಂದಾದರು. ಪ್ರತಿಯೊಂದು ಸಮಾವೇಶದಲ್ಲೂ ಸಹ ಧರ್ಮಸ್ಥಳದ ಆಡಳಿತದವರ ವಿರುದ್ಧವೇ ಪುಂಖಾನುಪುಂಖವಾಗಿ ನಿಂದಿಸಿ ಭಾಷಣ ಮಾಡತೊಡಗಿದ್ದರು. ಆ ಸಂದರ್ಭದಲ್ಲಿ ಕೆಲವರು ಅವರ ಸಮಾವೇಶಕ್ಕೆ ಅಪಸ್ವರ ಎತ್ತತೊಡಗಿದ್ದರು. ಅದರಲ್ಲಿ ಪ್ರಮುಖರಾಗಿದ್ದವರು ನಡ ಗ್ರಾಮದ ಶ್ಯಾಮ್‌ಸುಂದರ್. ಅದಕ್ಕೆ ತಿಮರೋಡಿಯವರು ಶ್ಯಾಮ್‌ಸುಂದರ್‌ರವರ ಮನೆಯ ಪಕ್ಕದಲ್ಲೇ ಸಮಾವೇಶವೊಂದನ್ನು ಆಯೋಜಿಸಿದ್ದರು. ಅದರಲ್ಲಿ ಶ್ಯಾಮ್ ಸುಂದರ್ ವಿರುದ್ಧವೇ ಮಾತನಾಡಿದರು. ಮನೆಯಲ್ಲಿದ್ದ ಶ್ಯಾಮ್ ಅವರು ತನ್ನ ಬುಲೆಟ್ ಬೈಕಿನಲ್ಲಿ ನೇರವಾಗಿ ಬಂದು ಸಮಾವೇಶದ ಮಧ್ಯಕ್ಕೆ ನುಗ್ಗಿಸಿದರು. ಸೇರಿದ್ದವರೆಲ್ಲರೂ ದಿಕ್ಕಾಪಾಲಾಗಿ ಹೋದರು. ಶ್ಯಾಮ್ ಅವರ ಸಹೋದರರು ಅಲ್ಲಿದ್ದವರ ಮೇಲೆ ಹಲ್ಲೆ ನಡೆಸಿದರು ಎಂದು ಬೆಳ್ತಂಗಡಿ ಠಾಣೆಯಲ್ಲಿ ದೂರು ದಾಖಲಿಸಲಾಯಿತು. ಅವರ ಮನೆಯ ಗಂಡಸರೆಲ್ಲರೂ ಜೈಲು ಪಾಲಾದರು. ತಿಮರೋಡಿ ಮತ್ತವರ ತಂಡದ ಸಮಾವೇಶಗಳು ದಿಕ್ಕು ತಪ್ಪಿ ನಡೆಯುತ್ತಿರುವಂತಹ ಸಂದರ್ಭದಲ್ಲಿ ಧರ್ಮಸ್ಥಳದ ನಾಗರೀಕರು ಒಟ್ಟಾದರು. ಈ ಸಮಾವೇಶಗಳಿಗೆ ಕುಯುಕ್ತಿ ಮಾಡುತ್ತಿರುವುದೇ ಗುರುವಾಯನಕೆರೆಯ ನಾಗರಿಕ ಸೇವಾ ಟ್ರಸ್ಟ್‌ನ ಸೋಮನಾಥ ನಾಯಕ್ ಎಂದು ತಿಳಿದು ಆತನ ಮನೆ ಬಾಗಿಲಲ್ಲೇ ಪ್ರತಿ ಸಮಾವೇಶ ನಡೆಸಬೇಕು ಎಂದು ಧರ್ಮಸ್ಥಳದ ನಾಗರಿಕರು ನಿರ್ಧರಿಸಿದರು.



ಸೋಮನಾಥ ನಾಯಕ್

(ಮುಂದುವರಿಯುವುದು...)

# ಕಬ್ಬು ಬೆಳೆಗಾರರು V/S ರಾಜ್ಯಸರ್ಕಾರ

# ಕಬ್ಬಿಗೆ ಸೂಕ್ತ ದರ ನಿಗದಿಗೆ ರೈತರಿಂದ ಹೋರಾಟ!

ರಾಜ್ಯದ ಬೆಳಗಾವಿ ಬಾಗಲಕೋಟೆ ರೈತರಿಂದ ಸುಮಾರು 8-9 ದಿನಗಳಿಂದ ರೈತರು ತಾವು ಬೆಳೆದಿರುವ ಕಬ್ಬಿನ ಬೆಲೆ ಹೆಚ್ಚಿಸುವಂತೆ ಹೋರಾಟಗಳು ನಡೆದಿವೆ. ಇದಕ್ಕೆ ಸರ್ಕಾರವು ಕೂಡಲೇ ಸೂಕ್ತ ದರ ನೀಡುವಂತೆ ಸರ್ಕಾರದ ಹಾಗೂ ಕಾರ್ಖಾನೆ ಮಾಲೀಕರುಗಳ ವಿರುದ್ಧ ಕಿಡಿಕಾರುತ್ತ ತಮ್ಮ ಹೋರಾಟವನ್ನು ಮುಂದುವರಿಸಿದ್ದಾರೆ. ರಾಜ್ಯದ ನಾನಾ ಜಿಲ್ಲೆಗಳಿಂದ


ಬಾಗಲಕೋಟೆ ಜಿಲ್ಲಾ ಉಸ್ತುವಾರಿ ಸಚಿವ ಆರ್.ಬಿ. ತಿಮ್ಮಾಪೂರ


ಬೆಳಗಾವಿ ಜಿಲ್ಲಾ ಉಸ್ತುವಾರಿ ಸಚಿವ ಸತೀಶ್ ಜಾರಕಿಹೊಳಿ

ರೈತರು ಈ ಹೋರಾಟಕ್ಕೆ ಬೇಂಬಲಿಸಿ ಸಾಥ್ ನೀಡಿದ್ದಾರೆ. ಆದರೆ ಸರ್ಕಾರ ಇತ್ತ ರೈತರ ಹೋರಾಟಕ್ಕೆ ಪ್ರತಿಕ್ರಿಯಿ ಸದೇ ಇರುವುದು ಮತ್ತು ಮೌನ ಧೋರಣೆ ವಹಿಸುತ್ತಿದೆ ಎಂದು ರೈತರು ಆಕ್ರೋಶ ವ್ಯಕ್ತಪಡಿಸುತ್ತಿದ್ದಾರೆ. ರೈತರಿಗೆ ಪ್ರಸ್ತುತದಲ್ಲಿ ಒಂದು ಟನ್ ಕಬ್ಬಿಗೆ 3 ಸಾವಿರ ರೂಪಾಯಿ ಗಳು ಪಡೆಯುತ್ತಿದ್ದಾರೆ. ಇದು ಬೆಳೆದ ಕಬ್ಬಿಗೆ ನಷ್ಟವಾಗು ತ್ತಿದ್ದು, ರೈತ ಸಂಕಷ್ಟದ ಪರಿಸ್ಥಿತಿಯಲ್ಲಿ ಇರುವುದರಿಂದ ಅದಕ್ಕಾಗಿ ಪ್ರತಿ ಟನ್‌ಗೆ 3500 ರೂಪಾಯಿಗಳನ್ನು ನಿಗದಿಪಡಿಸಬೇಕು ಎಂದು ರೈತ ಮುಖಂಡರುಗಳು ಹಾಗೂ ರೈತರು ಹೆಚಿನ ಜನಸಂಖ್ಯೆಯಲ್ಲಿ ಸೇರಿ ಹೋರಾಟ ನಡೆಸುತ್ತಿರುವುದು ಹಾಗೂ ಸರ್ಕಾರವೇ ಮಧ್ಯಸ್ಥಿಕೆ ವಹಿಸಿ ಬೆಲೆ ನಿಗದಿ ಮಾಡುವಂತೆ ಧರಣಿ ಸತ್ಯಾಗ್ರಹ ಮೂಲಕ ಹೋರಾಟ ನಡೆಸುತ್ತಿದ್ದಾರೆ.

ಅವಳಿ ಜಿಲ್ಲೆಗಳಾದ ಬಾಗಲಕೋಟೆ - ಬೆಳಗಾವಿ ಜಿಲ್ಲೆಗಳಲ್ಲಿ ಸಾವಿರಾರು ರೈತರಿಂದ ಸುಮಾರು ಒಂದು


ರೈತರ ಪ್ರತಿಭಟನೆಯಲ್ಲಿ ಸಂಸದ ಪಿ.ಸಿ. ಗದಿಗೌಡರ


ವಾರದಿಂದ ನಡೆಯುತ್ತಿರುವ ರೈತರ ಹೋರಾಟ ಉಗ್ರ ಸ್ವರೂಪ ಪಡೆದುಕೊಳ್ಳುತ್ತಿರುವುದು ಹಾಗೂ ಅವಳಿ ಜಿಲ್ಲೆಗಳಿಂದ ಜಿಲ್ಲಾ ಉಸ್ತುವಾರಿ ಸಚಿವರುಗಳು ಹಾಗೂ ಸ್ಥಳೀಯ ನಾಯಕರುಗಳು ಮೌನವಹಿಸಿದ್ದಾರೆ. ನಮ್ಮದು ರೈತಪರ ಸರ್ಕಾರ ಅಂತ ಹೇಳುವ ಸರ್ಕಾರವು ಈಗ ಕಬ್ಬು ಬೆಲೆ ನಿಗದಿಗೆ ಹಿಂದೇಟು ಹಾಕುತ್ತಿದೆ. ಮಲತಾಯಿ ಧೋರಣೆ ಮಾಡುತ್ತಿದೆ ಎಂದು ರೈತರು ಆಕ್ರೋಶ ವ್ಯಕ್ತ ಪಡಿಸುತ್ತಿದ್ದಾರೆ. ಬೆಳಗಾವಿ ಜಿಲ್ಲೆಯ ಗುರ್ಲಾಪೂರ ಕ್ರಸ್ ಬಳಿ ರೈತರ ಹೋರಾಟ ಇಂದಿಗೆ ಒಂದು ವಾರ ಕಳೆದರೂ ಯಾವುದೇ ನಾಯಕರು ಮುಂದಾಗಿ ಸರ್ಕಾರಕ್ಕೆ ಮನವಿ ಮಾಡಿಲ್ಲ ಹಾಗೂ ಬೆಳಗಾವಿಯ ಜಿಲ್ಲಾ ಉಸ್ತುವಾರಿ ಸಚಿವರು ಇದರ ಬಗ್ಗೆ ಗಮನಹರಿಸಿಲ್ಲೆಂದೂ ರೈತ ಸೇನೆ ರಾಜ್ಯಾದ್ಯಕ್ಷ ಚೆನ್ನಪ್ಪ ಆಕ್ರೋಶ ವ್ಯಕ್ತಪಡಿಸಿದ್ದಾರೆ. ರಾಜ್ಯದ ಅವಳಿ ಜಿಲ್ಲೆಯಿಂದ ನಾನಾ ಜಿಲ್ಲೆಗಳಿಂದ ಸಾವಿರಾರು ರೈತರು ಈ ಒಂದು ಹೋರಾಟಕ್ಕೆ ಸಾಕ್ಷಿಯಾಗಿದ್ದಾರೆ.


ಇದುವರೆಗಿನ ಹೋರಾಟ ಕಾರ್ಖಾನೆ ಮಾಲಿಕರ ವಿರುದ್ಧ ನಡೆಯುತ್ತಿದ್ದವು. ಈ ಹೋರಾಟವು ಸರ್ಕಾರದ ವಿರುದ್ಧ ವಾಗಿದೆ ಎಂದು ಹೇಳಿದ್ದಾರೆ.


ರೈತರ ಪ್ರತಿಭಟನೆ

### ಬಿಜೆಪಿರಾಜಾಧ್ಯಕ್ಷ ವಿಜಯೇಂದ ಭೇಟಿ ನೀಡಿ ರೈತರಿಗೆ ಬೆಂಬಲ!

ಸುಮಾರು ದಿನಗಳಿಂದ ನಡೆದ ರೈತರ ಹೋಟಕ್ಕೆ ರಾಜ್ಯ ಬಿಜೆಪಿ ರಾಜ್ಯಾದ್ಯಕ್ಷ ವಿಜಯೇಂದ್ರ ಭೇಟಿ ನೀಡಿ ಅವರ ಹೋರಾಟಕ್ಕೆ ಬೆಂಬಲ ವ್ಯಕ್ತಪಡಿಸಿದ್ದಾರೆ. ಬಳಿಕ


ಗ್ರಾಮೀಣಾಭಿವೃದ್ಧಿ ಸಚಿವ ಹೆಚ್.ಕೆ. ಪಾಟೀಲ್


ಸಕ್ಕರೆ ಸಚಿವ ಶಿವಾನಂದ ಪಾಟೀಲ

ಮಾತನಾಡಿದ ಅವರು ರೈತರು 3500 ಬೆಲೆ ಕೇಳುವುದು ಹೆಚ್ಚಳ ಅಷ್ಟು ದರ ನಿಗದಿ ಮಾಡಲೇಬೇಕು. ಇದರಿಂದ ರೈತರು ಸಂತೃಪ್ತಿಯಾಗಿ ಬೆಳೆ ಬೆಳೆದು ಜೀವನ ಮಾಡು ತ್ತಾರೆ. ಇದರಲ್ಲಿ ರಾಜಕೀಯ ಮಾಡದೇ ಪಕ್ಷಾತೀತವಾಗಿ ನಾನು ಈ ಒಂದು ಹೋರಾ

**ಬಾಗಲಕೋಟೆ**

✍ ಮಂಜುನಾಥ ಕರೋಳಿ

ಟಕ್ಕೆ ಬೆಂಬಲ ನೀಡಿದ್ದು, ನಮ್ಮ ಪಕ್ಷದ ನಾಯಕರದ್ದು ಕಾರ್ಖಾನೆಗಳಿವೆ. ಸರ್ಕಾರವು ಇದನ್ನು ಮನದಟ್ಟು ಮಾಡಿಕೊಳ್ಳಬೇಕು. ರೈತನಿಗೆ ಸೂಕ್ತ ನ್ಯಾಯ ಬೇಕು. ಸಂಪುಟ ಸಭೆಯಲ್ಲಿ ಈ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ರೈತರ ಪ್ರತಿ ಒಂದು ಟನ್ ಕಬ್ಬಿನ ಬೆಲೆಗೆ 3500 ಎಂದು ಘೋಷಣೆ ಮಾಡಬೇಕು. ಅದು ಆಗುವರೆಗೂ ನನ್ನ ಬೆಂಬಲ ರೈತರ ಪರವಾಗಿ ಇರುತ್ತದೆ ಎಂದು ಹೇಳಿದರು. ಅವರು ಭೇಟಿ ನೀಡಿದ ದಿನ ರಾತ್ರಿ ರೈತರೊಂದಿಗೆ ವಾಸ್ತವ್ಯ ಮಾಡಿದ್ದಾರೆ.

### ಕಬ್ಬು ಬೆಳೆಗಾರರ ಬೇಡಿಕೆ ಎನು?

ಈಗಾಗಲೇ ಹೋರಾಟ ನಡೆಸುವ ರೈತರು ತಮ್ಮ ಬೇಡಿಕೆಗಳನ್ನು ಸರ್ಕಾರದ ಮುಂದೆ ಇಡಲಾಗಿದ್ದು ★ ಕಬ್ಬಿಗೆ ಕ್ರೇಂದ್ರ ನಿಗದಿಪಡಿಸಿರುವ (ಕನಿಷ್ಠ 3291 ರೂ. - ಗರಿಷ್ಠ 4399 ರೂ.) ದರಕ್ಕಿಂತ ಹೆಚ್ಚು ಫಿಕ್ಸ್ ಮಾಡಬೇಕು. ★ ಕೇಂದ್ರ ನಿಗದಿ ಮಾಡಿದ ದರಕ್ಕೆ ಸಮ್ಮ ಒಪ್ಪಿಗೆ ಇಲ್ಲ. ★ ಒಂದು ಟನ್ ಕಬ್ಬು ಬೆಳೆಗೆ 3500 ರೂಪಾಯಿ ಫಿಕ್ಸ್ ಮಾಡಬೇಕು. ★ ಕಳೆದ ಬಾರಿಯ ಬಾಕಿ ಉಳಿದಿರುವ ಬಿಲ್ ಪಾವತಿಸಬೇಕು. ★ ಗರಿಷ್ಠ ಎರಡು ಕಂತುಗಳಲ್ಲಿ ಬಿಲ್ ಪಾವತಿ ಮಾಡಬೇಕು. ★ ವಾರ್ಷಿಕ ಹಂಗಾಮು ಆರಂಭಕ್ಕೆ ಮುನ್ನವೇ ಪ್ರತಿ ವರ್ಷ ದರ ನಿಗದಿಯಾಗಬೇಕು. ★ ಕಬ್ಬಿನ ಉಪ ಉತ್ಪನ್ನಗಳ ಲಾಭದ ಪಾಲು ರೈತರಿಗೂ ಸಿಗಬೇಕು. ಈಗಾಗಲೇ ಮಹಾರಾಷ್ಟ್ರ, ಗುಜರಾತ್ ಅಂತ ಇನ್ನೂ ಹಲವು ರಾಜ್ಯಗಳಲ್ಲಿ ಕಬ್ಬು ದರ ಹೆಚ್ಚಿದ್ದು, ಅದೇ ರೀತಿ ನಮ್ಮ ರಾಜ್ಯದಲ್ಲೂ ದರ ನಿಗದಿಪಡಿಸಬೇಕು ಎಂದು ರೈತರ ಹಲವು ಬೇಡಿಕೆಗಳಾಗಿವೆ

### ಸಚಿವರಿಂದ ಸಂಧಾನ ವಿಫಲ !

ರಾಜ್ಯದ ಗ್ರಾಮಿಣಾಭಿವೃದ್ದಿ ಸಚಿವರಾದ ಎಚ್.ಕೆ. ಪಾಟೀಲ ಗುರ್ಲಾಪೂರ ಗ್ರಾಮಕ್ಕೆ ಆಗಮಿಸುತ್ತಿದ್ದಂತೆ ಅವರ ಕಾರನ್ನು ಹಾಗೂ ಸಚಿವರು, ನೀವು ರೈತ ಮುಖಂಡರು ಬೆಂಗಳೂರಿಗೆ ಬನ್ನಿ ಮುಖ್ಯಮಂತ್ರಿಗಳನ್ನು ನಿಮಗೆ ಭೇಟಿ ಮಾಡಿಸು ತ್ತೇನೆ, ಅವರೊಂದಿಗೆ ಚರ್ಚಿಸಿ ಒಂದು ಸೂಕ್ತ ನಿರ್ದಾರ ಮಾಡೋಣ ಅಂತ ಹೇಳಿದಾಗ ರೈತ ಮುಖಂಡರು, ನಾವ್ಯಾಕೆ ಅಲ್ಲಿ ಬರೋದು ನಮ್ಮ ಬೇಡಿಕೆಗೆ ಅವರೇ ಸ್ಪಂದಿಸಿ ನಮ್ಮ ಬೆಳೆಗೆ ಸೂಕ್ತ ಬೆಲೆ ನಿಗದಿ ಮಾಡಿ ಘೋಷಣೆ ಮಾಡಿಸಿ ಅಂತ ಸಚಿವರಿಗೆ ತಿರುಗೇಟು ಸಂದೇಶ ಮಾಡಿದ್ದಾರೆ. ಕೂಡಲೇ ಸರ್ಕಾರ ಇದರ ಬಗ್ಗೆ ನಿಗಾವಹಿಸದೇ ಇದ್ದರೆ ಮುಂದಿನ ದಿನಗಳಲ್ಲಿ ಉಗ್ರ ಹೋರಾಟ ನಡೆಸುವುದಾಗಿ ಸರ್ಕಾರಕ್ಕೆ ಎಚ್ಚರಿಕೆ ನೀಡಿದ್ದಾರೆ. ಈ ಸಂದರ್ಭದಲ್ಲಿ ವಿಧಾನ ಪರಿಷತ್ ಸದಸ್ಯ ಮಹಾಂತೇಶ ಕವಗಿಮಠ, ಬಿಜೆಪಿ ಗ್ರಾಮೀಣ ಜಿಲ್ಲಾ ಘಟಕದ ಅಧ್ಯಕ್ಷ ಸುಭಾಸ ಪಾಟೀಲ, ತೇರದಾಳ ಮತಕ್ಷೇತ್ರದ ಶಾಸಕ ಸಿದ್ದು ಸವದಿ, ಕುಡಚಿಯ ಮತಕ್ಷೇತ್ರದ ಮಾಜಿ ಶಾಸಕ ಪಿ. ರಾಜೀವ ಈ ಸಂಧರ್ಭದಲ್ಲಿ ಹೊರಾಟಕ್ಕೆ ಬೆಂಬಲ ವ್ಯಕ್ತಪಡಿಸಿದ್ದಾರೆ. ☯




ಬಿಜೆಪಿ ರಾಜ್ಯಾಧ್ಯಕ್ಷ ವಿಜಯೇಂದ್ರ ರೈತರೊಂದಿಗೆ

*ಈ ರೈತ ಹೋರಾಟದಲ್ಲಿ ರೈತರಿಗೆ ಸೂಕ್ತ ಬೆಲೆ ಸಿಗಬೇಕು. ಇದರಲ್ಲಿ ಪಕ್ಷಾತೀತವಾಗಿ ನಮ್ಮನ್ನಾಳುವ ನಾಯಕರು ರಾಜಕೀಯವಾಗಿ ಬಳಸಿಕೊಳ್ಳದೇ ನ್ಯಾಯಯುತವಾಗಿ ರೈತನಿಗೆ ಸೂಕ್ತ ದರ ಒದಗಿಸಬೇಕೆಂಬುದು ರೈತನ ಕಣ್ಣೀರಿನ ದ್ವನಿಯಾಗಿದೆ. ಒಂದು ಸಮೀಕ್ಷೆ ವರದಿಯ ಪ್ರಕಾರವಾಗಿ 3500 ಕೊಡಬೇಕೆಂಬುದು ರೈತರ ದ್ವನಿಯಾದರೆ ಒಂದು ಟನ್ ಕಬ್ಬಿನಿಂದ ಎಷ್ಟೆಲ್ಲಾ ಉತ್ಪಾದನೆ ಆಗತ್ತದೆ? ಎಂದು ಒಂದು ಅಂದಾಜಿನಲ್ಲಿ ಹೇಳುವುದಾದರೆ ಒಂದು ಟನ್ ಕಬ್ಬಿನಿಂದ 1)ಸಕ್ಕರೆ 120 ಕೆಜಿ ಉತ್ಪಾದನೆಯಾದರೆ, 2)ಮೊಲಾಸಿಸ್ (ಕಾಕಂಬಿ) 50ಲೀಟರ್, 3) ಎಥೆನಾಲ್ (ಆಲ್ಕೊಹಾಲ್) 40 ಲೀಟರ್, 4)ವಿದ್ಯುತ್160 ಕಿಲೋವ್ಯಾಟ್ ಉತ್ಪಾಸನೆಗೆ ಅಂದಾಜಿಸಿದರೆ ಸುಮಾರು ಒಂದು ಟನ್ ಕಬ್ಬಿಗೆ ಸುಮಾರು ಒಟ್ಟು 14,120 ರೂಪಾಯಿ ಲಾಭದ ಅಂದಾಜಿಸಿದರೆ ಅದರಲ್ಲಿ ರೈತರು ಪ್ರತಿ ಟನ್‌ಗೆ 3500 ಕೊಡುವುದು ಹೆಚ್ಚಲ್ಲ ಎಂದು ಕೆಲವು ಮೂಲಗಳು ವರದಿ ಮಾಡಿವೆ. ಈಗಾಗಲೇ ದಾಲ್ಮಿಯಾ ಸಕ್ಕರೆ ಕಾರ್ಖಾನೆ ಪ್ರತಿಟನ್‌ಗೆ 3,550, ಜವಾಹರ ಸಹಕಾರ ಸಕ್ಕರೆ ಕಾರ್ಖಾನೆ 3500, ದತ್ತ ಸಕ್ಕರೆ ಕಾರ್ಖಾನೆ 3,450, ಸದಾಶಿವ ಮಾಂಡಲಿಕ ಕಾರ್ಖಾನೆ ಹಾಗೂ ಫೋರ್ಪಡೆ ಕಾರ್ಖಾನೆಗಳು 3400 ದರ ಘೋಷಿಸಿವೆ. ಬೆಳಗಾವಿ ಜಿಲ್ಲೆಯ ಗಡಿಭಾಗದ ಹಲವು ರೈತರು ಈಗಾಗಲೇ ಮಹಾರಾಷ್ಟ್ರಕ್ಕೆ ಕಬ್ಬು ಸಾಗಣೆ ಮಾಡುತ್ತಿದ್ದಾರೆ. ಈಗಾಗಲೇ ಜಿಲ್ಲೆಯ 15 ತಾಲ್ಲೂಕುಗಳಲ್ಲಿ ರೈತರ ಹೋರಾಟ ತೀವ್ರ ಸ್ವರೂಪ ಪಡೆದುಕೊಂಡಿದ್ದು, ಧರಣಿ ಅರೆಬೆತ್ತಲೆ ಸಕ್ಕರೆ ಸಚಿವ ಶಿವಾನಂದ ಪಾಟೀಲರ ಪ್ರತಿಕೃತಿ ದಹನ ಮಾಡಿ ಆಕ್ರೋಶ ವ್ಯಕ್ತಪಡಿಸಲಾಗಿದೆ.*

### *ಕಬ್ಬು ಬೆಳೆಗಾರರ ಹೋರಾಟಕ್ಕೆ ಮಣಿದ ಸರ್ಕಾರ*

*ಸುಮಾರು 9 ದಿನಗಳಿಂದ ನಡೆಯುತ್ತಿದ್ದ ಕಬ್ಬು ಬೆಳೆಗಾರರ ಹೊರಾಟಕೆ ರಾಜ್ಯ ಸರ್ಕಾರ ಸಚಿವ ಸಂಪುಟದಲ್ಲಿ ಮಹತ್ವದ ನಿರ್ಧಾರ ತೆಗೆದುಕೊಂಡಿದ್ದು, ರೈತರಿಗೆ ಪ್ರತಿ ಟನ್‌ಗೆ 3,300 ರೂಪಾಯಿಗಳನ್ನು ಘೊಷಣೆ ಮಾಡಿ ಸರ್ಕಾರ ಹೊರಡಿಸಲಾಗಿದೆ. ಇದರಿಂದ ರೈತರು ತಮ್ಮ ಹೋರಾಟದಿಂದ ಯಶಸ್ವಿಯಾಗಿದ್ದು ರೈತರಲ್ಲಿ ಮಂದಹಾಸ ಮೂಡಿದೆ.* ☯

# ...ತಮ್ಮನ ಮಗನನ್ನೇ ಬಲಿ ಪಡೆದ ಕೀಚಕರು!

4 ☞ ಶುರುವಾಗಿದ್ದು, ಹೀಗಿರುವಾಗ ಯಮುನವ್ವಳ ಅಣ್ಣನಾದ ಬಸಪ್ಪ ಹಾಗೂ ಸಂಬಂಧಿಗಳಾದ ಪ್ರಕಾಶ, ಗಣೇಶ, ರಂಗಪ್ಪ, ಕುಮಾರ, ಯಲ್ಲಪ್ಪ, ಬಸಪ್ಪ, ಯಂಕಪ್ಪ ಸೇರಿ ವಿಶ್ವನಾಥನಿಗೆ ರಾಡ್‌ನಿಂದ ತೀವ್ರ ಹಲ್ಲೆ ಮಾಡಿದ್ದಾರೆ. ಇದರಿಂದ ಸ್ಥಳದಲ್ಲಿ ಕುಸಿದ್ದು ಬಿದ್ದಿದ್ದ ವಿಶ್ವನಾಥನನ್ನು ತಕ್ಷಣದಲ್ಲಿ ಬಾಗಲಕೋಟಿ ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಆದರೆ ಚಿಕಿತ್ಸೆ ಫಲಕಾರಿಯಾಗದೇ ವಿಶ್ವನಾಥ ಕೊನೆಯುಸಿರು ಎಳೆದಿದ್ದಾನೆ. ನಂತರದಲ್ಲಿ ವಿಶ್ವನಾಥನ ತಂದೆ ಹನಮಂತ ನೇರವಾಗಿ ಬೀಳಗಿ ಪೊಲೀಸ್ ಠಾಣೆಗೆ ತೆರಳಿ ಕರ್ತವ್ಯದಲ್ಲಿದ್ದ ಬೀಳಗಿ ಪೊಲೀಸ್ ಠಾಣೆ ಪಿಎಸ್‌ಐ ಎಸ್.ಎನ್. ಸಂಗಲದ ಅವರಿಗೆ ಲಿಖಿತವಾಗಿ ದೂರು ದಾಖಲಿಸಿದ್ದರು. ದೂರು ದಾಖಲಿಸಿಕೊಂಡ ಕ.ಖ.ಐ ರವರು ತಮ್ಮ ಠಾಣಾ ಇ.ಫೊಣ 221/2025 ಬಿಎನ್‌ಎಸ್ 2023ವಿ/ಎಸ್ 189(2), 191(2), 191(3), 115(2), 118(1), 126(2), 76, 109, 309(4), 352, 351(2), 351(3), (190) ನೆದರಡಿ ಯಲ್ಲಿ ಪ್ರಕರಣ ದಾಖಲಿಸಿಕೊಂಡು ಘಟನಾಸ್ಥಳಕ್ಕೆ ತೆರಳಿ ಸ್ಥಳ ಮತ್ತು ಶವ ವೀಕ್ಷಿಸಿ ನಂತರ ತಮ್ಮ ಹಿರಿಯ ಅಧಿಕಾರಿಗಳಾದ ಬೀಳಗಿ ಸಿಪಿಐ ಹನಮಂತ ಸಣ್ಣಮುನಿ ಬಾಗಲಕೋಟ ಡಿವೈಎಸ್ಪಿ ಗಜಾನಂದ ಸುತಾರ, ಬಾಗಲಕೋಟ ಅಪರ ಎಸ್ಪಿ ಪಸನ್ನ ದೇಸಾಯಿ ಬಾಗಲಕೋಟ ಎಸ್ಪಿ ಸಿದ್ದಾರ್ಥ ಗೊಯಲ್‌ರವರಿಗೆ ಸುದ್ದಿ ರವಾನಿಸಿದರು. ಸುದ್ದಿ ತಿಳಿದ ಹಿರಿಯ ಅಧಿಕಾರಿಗಳು ಘಟನಾ ಸ್ಥಳಕ್ಕೆ ಬಂದು ಪರಿಶೀಸಲಿಸಿ ಘಟನೆಗೆ ಸಂಬಂಧಿಸಿದ ಆರೋಪಿಗಳನ್ನ ಕೂಡಲೇ ಬಂಧಿಸುವಂತೆ ಮಾರ್ಗದರ್ಶನ ನೀಡಿದರು.


ವಿಶ್ವನಾಥನ ತಂದೆ ಹನಮಂತ

**ಆರೋಪಿಗಳ ಬಂಧನ**

ಈ ಪ್ರಕರಣಕ್ಕೆ ಸಂಬಂಧಪಟ್ಟಂತೆ ಪ್ರಮುಖ ಆರೋಪಿ ಬಸಪ್ಪ ರಂಗಪ್ಪ ಮರೆಮ್ಮನವರ, ಆರೋಪಿಗಳಾದ ಗಣೇಶ ಮರೆಮ್ಮನವರ, ರಂಗಪ್ಪ ಬಸಪ್ಪ ಮರೆಮ್ಮನವರ, ನಾಗರಾಜ ಕನ್ನಪ್ಪನವರ, ಯಮುನವ್ವ ಭೀಮಪ್ಪ ಮರೆಮ್ಮನವರ, ತಿಮ್ಮನ ಗೌಡ ಪಾವೀಲರನ್ನು ವಶಕ್ಕೆ ಪಡೆದು ವಿಚಾರಿಸಲಾಗಿ ಆರೋಪಿತರೆಲ್ಲರೂ ಮಾಡಿದ ಕೃತ್ಯವನ್ನು ಒಪ್ಪಿಕೊಂಡಿದ್ದು, ನಂತರ ಅವರನ್ನು ವಶಕ್ಕೆ ಪಡೆದು ನ್ಯಾಯಾಂಗ ಬಂಧನಕ್ಕೆ ಒಪ್ಪಸಲಾಗಿದೆ. ☯

5 ☞ ಲೋಕ ತ್ಯಜಿಸುವ ತೀರ್ಮಾನವನ್ನು ಒಳಗೊಳಗೆ ಮಾಡಿಯೇ ಬಿಟ್ಟಿದ್ದಳು. ಅಕ್ಟೋಬರ್ 31ರಂದು ರಾತ್ರಿಯೇ ದೃಢ ನಿರ್ಧಾರವೊಂದನ್ನು ಮಾಡಿ ಬಿಟ್ಟಿದ್ದಳು. ತನಗೂ ತನ್ನ ಮಕ್ಕಳಿಗೂ ಈ ಬದುಕು ಸಾಕು ಎಂದ ಅವಳು ನಿರ್ಧಯಿಯಾಗಿ ಬಿಟ್ಟಿದ್ದಳು. ಕೋಣೆಯ ಬಾಗಿಲು ಭದ್ರಪಡಿಸಿದ ಅವಳು ಮೊದಲಿಗೆ ಮಕ್ಕಳ ಕತ್ತನ್ನು ಕೊಯ್ದು ಕೊಲೆಗೈದ ಅವಳು ಬಳಿಕ ತಾನು ಆತ್ಮಹತ್ಯೆ ಮಾಡಿಕೊಂಡಿದ್ದಾಳೆ. ಇದೆಲ್ಲವೂ ಮನೆಯಲ್ಲಿ ಯಾರಿಗೂ ಸ್ವಲ್ಪವೂ ಗೊತ್ತಾಗದಂತೆ ನಡೆದು ಹೋಗಿದೆ.

ಅವತ್ತು ನವೆಂಬರ್ 1 ಶನಿವಾರ ಬೆಳಿಗ್ಗೆ 9 ಗಂಟೆಯಾದರೂ ಕೋಣೆಯಿಂದ ಯಾವುದೇ ಶಬ್ದ ಬಾರದೆ ಇದ್ದಾಗ ಬಾಗಿಲು ತಟ್ಟಿ ಕರೆದರೂ ಬಾಗಿಲು ತೆರೆಯದೆ ಇದ್ದಾಗ ಕಿಟಕಿಯ ಮೂಲಕ ಪೋಷಕರು ಒಳಗೆ ನೋಡಿದಾಗ ರಕ್ತದ ಮಡುವಿನಲ್ಲಿ ಬಿದ್ದಿದ್ದ ಮಕ್ಕಳು ಮತ್ತು ರುಬಿಯಾ ಬಾನು ಕಾಣಿಸಿದ್ದಾರೆ. ಆ ಕ್ಷಣಕ್ಕೆ ಇಡೀ ಆಕಾಶವೇ ಅವರ ಮೇಲೆ ಕಳಚಿ ಬಿದ್ದಂತಾಗಿದೆ. ವಿಷಯ ತಿಳಿಯುತ್ತಿದ್ದಂತೆಯೇ ಸ್ಥಳೀಯರು ಅತ್ತ ಧಾವಿಸಿದ್ದಾರೆ. ಅಲ್ಲದೆ ಬೆಟ್ಟದ ಪುರ ಪೊಲೀಸರು ಸ್ಥಳಕ್ಕೆ ಧಾವಿಸಿ ಪರಿಶೀಲಿಸಿ ಪ್ರಕರಣ ದಾಖಲಿಸಿಕೊಂಡು ಮುಂದಿನ ಕ್ರಮ ಕೈಗೊಂಡಿದ್ದಾರೆ. ಯಾರೇ ಆಗಲಿ ಇಂತಹ ಕೃತ್ಯಕ್ಕೆ ಕೈಹಾಕದಿರಲಿ ಎನ್ನುವುದೇ ನಮ್ಮ ಕಳಕಳಿಯಾಗಿದೆ. ☯

# ...ಗುಂಡು ಹಾರಿಸಿ ಹಂತಕನ ಎಡೆಮುರಿ ಕಟ್ಟಿದರು!

7 ☞ ಕನ್ನೂರು ಡಬಲ್ ಮರ್ಡರ್ ಕೇಸ್ ವಿಜಯಪುರ ಬೆಚ್ಚಿಬೀಳಿಸಿದೆ. ಇನ್ನೂ ಮರ್ಡರ್‌ನ ಇನ್‌ಸೈಡ್ ಸ್ಟೋರಿ ಇನ್ನೂ ಹಾರರ್ ಆಗಿದೆ. ಯಾಕಂದರೆ ಎರಡು ವರ್ಷಗಳ ಹಿಂದೆ ನಡೆದಿದ್ದ ದೊಡ್ಡಪ್ಪನ ಹತ್ಯೆಯ ಸೇಡು ತೀರಿಸಿಕೊಳ್ಳಲು ತಮ್ಮನ ಮಕ್ಕಳೆ ಈ ಹತ್ಯಾಕಾಂಡಲ್ಲಿ ಭಾಗವಹಿಸಿದ್ದ ವಿಚಾರ ಖುದ್ದು ಪೊಲೀಸರನ್ನೆ ಅವಕ್ಕಾಗಿಸಿದೆ. ಸಾಗರ್, ಇಸಾಕ್ ಡಬಲ್ ಮರ್ಡರ್‌ನಲ್ಲಿ ಈರನಗೌಡನ ತಮ್ಮನ ಮಕ್ಕಳಾದ ಸಂಜಯ್ ಪಾಟೀಲ್, ಸಂತೋಷ ಪಾಟೀಲ್ ಪ್ರಮುಖ ಪಾತ್ರವಹಿಸಿದ್ದಾರೆ. ಕಳೆದ ಅವರು ಎರಡು ವರ್ಷಗಳಿಂದ ತಮ್ಮ ದೊಡ್ಡಪ್ಪನ ಹತ್ಯೆ ಸೇಡು ತೀರಿಸಿಕೊಳ್ಳಲು ಕಾಯುತ್ತಿದ್ದರು. ಆಗ ಇವರ ಕುಟುಂಬಕ್ಕೆ ಆಪ್ತನಾಗಿದ್ದ ಅಕ್ಷಯ್ ಹಾಗೂ ಗೆಳೆಯ ಮುಸ್ತಾಕ್ ಪಠಾನ್ ನನ್ನು ಹತ್ಯಾಕಾಂಡಕ್ಕೆ ಬಳಸಿಕೊಂಡಿದ್ದಾರೆ. ಭೀಮಾತೀರದಲ್ಲಿದ್ದ ಇಶಾರ್ ಹತ್ಯಾಕಾಂಡ ಕನ್ನೂರಿಗೂ ಎಂಟ್ರಿ ಕೊಟ್ರಾ ಎಂದು ಜನರು ಗಾಭರಿ ಬಿದ್ದಿದ್ದಾರೆ.

ಹೀಗೆ ಡಬಲ್ ಮರ್ಡರ್ ಮಾಡಿದ ಬಳಿಕ ಹಂತಕರು ಮಾಡಿದ ಕೆಲಸ ಶಾಕಿಂಗ್ ಆಗಿದೆ. ಹೆಣಗಳ ಪಕ್ಕ ಖಾಲಿ ಬೀಯರ್ ಬಾಟಲ್ ಇಟ್ಟು ಪ್ರತಿಕಾರದ ಸಂದೇಶ ಸಾರಿದ್ದಾರೆ! ಯಸ್, ಡಬಲ್ ಮರ್ಡರ್ ತನಿಖೆಗೆ ಇಳಿದ ಪೊಲೀಸರಿಗೆ ಇದೊಂದು ಇಶ್ರಾ ಹತ್ಯೆ ಅನ್ನೋದು ಕನ್ಫರ್ಮ್ ಆಗಿತ್ತು. ಆದರೆ ಸಾಗರ್ ಹಾಗೂ ಇಸಾಕ್ ಹೆಣಗಳನ್ನ ಉರುಳಿಸಿದ್ದ ಹಂತಕರಿಗೆ ಒಂದು ಸಂದೇಶವನ್ನು ಸಹ ಕೊಡಬೇಕಿತ್ತು ಅಂತಾ ಕಾಣಿಸುತ್ತೆ. ಅಂದು ರಾತ್ರಿ, ಹತ್ಯಾಕಾಂಡ ನಡೆದಾಗ ಸ್ಥಳಕ್ಕೆ ಬಂದ ಪೊಲೀಸರಿಗೆ ಅಲ್ಲಿ ಬಿದ್ದಿದ್ದ ಎರಡು ಖಾಲಿ ಬಿಯರ್ ಬಾಟಲಿಗಳು ಅನುಮಾನ ಹುಟ್ಟಿಸಿದ್ದವು. ಹತ್ಯೆ ನಡೆದ ಸ್ಥಳದಲ್ಲಿ ಯಾಕೆ ಖಾಲಿ ಬೀಯರ್ ಬಾಟಲ್ ಇವೆ ಎಂದು ಪೊಲೀಸರು ಸಹ ತಲೆಗೆ ಹುಳ ಬಿಟ್ಟುಕೊಂಡಿದ್ದರು. ಆದರೆ ಬಳಿಕ ಗೊತ್ತಾಗಿದ್ದು ಈರನಗೌಡ ಹತ್ಯೆಯ ಪ್ರತೀಕಾರದ ಸಂದೇಶವಾಗಿ ಇಲ್ಲಿ ಬೀಯರ್ ಬಾಟಲ್ ಗಳನ್ನ ಸ್ವತಃ ಹಂತಕರೆ ಇಟ್ಟಿದ್ದರು ಅನ್ನೋದು. ಯಾಕಂದರೆ ಇದೇ ಸಾಗರ್ ಹಾಗೂ ಇಸಾಕ್ ಈರನಗೌಡನನ್ನ ಬೀಯರ್ ಬಾಟಲ್‌ನಿಂದ ತಲೆಯ ಮೇಲೆ ಹೊಡೆದಿದ್ದರು! ಹೀಗಾಗಿ ಈ ಹತ್ಯೆ ಪ್ರತಿಕಾರ ತೀರಿಸಿಕೊಂಡಿದ್ದೇವೆ ಎನ್ನುವ ಸಂದೇಶವನ್ನ ಕೊಡೊದಕ್ಕೆ ಸಾಗರ್ ಹಾಗೂ ಇಸಾಕ್ ತಲೆಯನ್ನ ಕಲ್ಲಿನಿಂದ ಜಜ್ಜಿಹಾಕಿ ಶವಗಳ ಪಕ್ಕದಲ್ಲಿ ಬೀಯರ್ ಬಾಟಲಿಗಳನ್ನ ಇಟ್ಟಿದ್ದಾರೆ ಎನ್ನಲಾಗುತ್ತಿದೆ! ಘಟನೆ ನಡೆದ 24 ಗಂಟೆಗಳಲ್ಲೇ ಆರೋಪಿಗಳನ್ನ ಬಂಧಿಸಿರೋ ಪೊಲೀಸರು ನ್ಯಾಯಾಲಯಕ್ಕೆ ಹಾಜರುಪಡಿಸಿ ಜೈಲಿಗಟ್ಟಿದ್ದಾರೆ. ಪ್ರಕರಣದ ಹೆಚ್ಚಿನ ತನಿಖೆಗಾಗಿ ಕಸ್ಟಡಿಗೆ ಪಡೆದುಕೊಳ್ಳುವ ಸಾಧ್ಯತೆಗಳಿವೆ. ಆದ್ರೆ ಮೊದಲೇ ಇಶಾರ್ ಹತ್ಯೆಗಳಿಂದ ಕುಖ್ಯಾತಿ ಗಳಿಸಿರೋ ಭೀಮಾತೀರದ ಸಂಸ್ಕೃತಿ ಇಲ್ಲಿಂದ ಬೇರೆ ಕಡೆಗಳಿಗೂ ಹಬ್ಬುತ್ತಿರೋದು ಆತಂಕದ ವಿಚಾರ. ☯

9 ☞ ಕೇಂದ್ರ ಕಾರಾಗೃಹದ ವಿಶೇಷ ಭದ್ರತಾ ವಿಭಾಗದ ಸೆಲ್‌ನಲ್ಲಿ ಶಕೀಲ್ ಇದ್ದಾನೆ. ಇನ್ನು ಅಮಾಯಕ ಮಹಿಳೆಯರ ಮೇಲೆ ಅತ್ಯಾಚಾರ ನಡೆಸಿ, ಭೀಕರವಾಗಿ ಕೊಂದು, ಅವರ ಕಾಚಾ ಬ್ರಾ ಸಂಗ್ರಹಿಸಿಟ್ಟುಕೊಂಡು ಮೂಸುತ್ತಿದ್ದ ವಿಕೃತಕಾಮಿ ಉಮೇಶ್ ರೆಡ್ಡಿ ಈಗ ಪರಪ್ಪನ ಅಗ್ರಹಾರ ಜೈಲಿನಲ್ಲಿದ್ದಾನೆ. ಗಲ್ಲುಶಿಕ್ಷೆಗೆ ಗುರಿಯಾಗಿದ್ದ ಆತನಿಗೆ ನಂತರ ಜೀವಾವಧಿ ಶಿಕ್ಷೆ ಆಗಿ ಕಡೆಗೆ 30 ವರ್ಷ ಕಠಿಣ ಸಜೆ ಮುಗಿಸಿ ರಿಲೀಸ್ ಮಾಡುವ ಆದೇಶವಾಗಿದೆ. ಇಂಥವನಿಗೆ ಕ್ಷಮೆ ಎಂಬುದೇ ಇಲ್ಲಾ. ಅಂಥದರಲ್ಲಿ ಕಲರ್ ಟಿವಿ, ಆಂಡ್ರಾಯ್ಡ್ ಮೊಬೈಲು... ಸವಲತ್ತು ಕೊಡಲಾಗಿದೆ!




ಇನ್ನೂ ಕಳೆದ ಮಾರ್ಚ್‌ನಲ್ಲಿ ಡಿಜಿಪಿ ರಾಮಚಂದ್ರ ರಾವ್ ಅವರ ಮಲ ಮಗಳು ನಟಿ ರನ್ಯಾ ರಾವ್ ವಿರುದ್ಧ ವಿದೇಶದಿಂದ ಅಕ್ರಮ ಚಿನ್ನ ಕಳ್ಳ ಸಾಗಾಣಿಕೆ ಪ್ರಕರಣದಲ್ಲಿ ಬೆಂಗಳೂರಿನ ಪ್ರಸಿದ್ಧ ಹೋಟೆಲ್ ಉದ್ಯಮಿ ಮೊಮ್ಮಗ ಹಾಗೂ ತೆಲುಗು ನಟ ತರುಣ್ ಕೊಂಡರಾಜು ಬಂಧನವಾಗಿ ಇದೇ ಜೈಲಿನಲ್ಲಿದ್ದಾರೆ. ಇವರೆಲ್ಲ ವಿಶೇಷ ಭದ್ರತಾ ವಿಭಾಗದಲ್ಲೇ, ಸಿಸಿ ಕ್ಯಾಮರಾ ಕಣ್ಗಾವಲಲ್ಲೇ ಇದ್ದಾರೆ. ಈ ಮೂವರ ಕೈಗೆ ಮೊಬೈಲ್ ಸಿಕ್ಕಿದೆ... ಅಂದ್ರೆ?!

ಕೆಲ ಮೂಲಗಳ ಮಾಹಿತಿ ಪ್ರಕಾರ, ನಟಿ ರನ್ಯಾ ರಾವ್ ಗೃಹ ಸಚಿವರನ್ನು ಅಂಕಲ್ ಅಂತಲೇ ಮಾತಾಡಿಸುತ್ತಾ ಳಂತೆ! ಗೃಹ ಮಂತ್ರಿಗಳ ಖಾತೆಯಿಂದಲೇ ರನ್ಯಾ ಅಕೌಂಟ್‌ಗೆ ಲಕ್ಷಾಂತರ ರೂ. ಅಮೌಂಟ್ ವರ್ಗಾವಣೆ ಆಗಿತ್ತು ಅನ್ನೋ ಸುದ್ದಿ ಈ ಹಿಂದೆ ಬ್ರೇಕಿಂಗ್ ನ್ಯೂಸ್ ಆಗಿತ್ತು! ಬೇಲಿಯೇ ಎದ್ದು ಹೊಲ ಮೇಯ್ದರೆ ತನಿಖೆ ಮಾಡುವುದು ಯಾರನ್ನ?! ಮೇಲ್ಕಂಡ ಪಾತಕಿಗಳು ಜೈಲಿನಲ್ಲಿ ಬಿಂದಾಸ್ ಆಗಿ ಓಡಾಡಿಕೊಂಡಿದ್ದಾರೆ. ಅಲ್ಲದೆ ತಮ್ಮ ಕುಟುಂಬದವರು ಹಾಗೂ ಸ್ನೇಹಿತರಿಗೆ ವಿಡಿಯೋ ಕಾಲ್ ಮಾಡಿ ಮಾತನಾಡುತ್ತಿರುವ ವಿಡಿಯೋಗಳು ಕೂಡ ಬಹಿರಂಗವಾಗಿವೆ. ಹೀಗಾಗಿ, ಕೇಂದ್ರ ಕಾರಾಗೃಹ ವ್ಯವಸ್ಥೆ ವಿರುದ್ಧ ಸಾರ್ವಜನಿಕರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

**ಎಡಿಜಿಪಿ ದಯಾನಂದರು ಫುಲ್ ಗರಂ....**

ಜೈಲಿನ ಈ ಅಕ್ರಮದ ವಿಡಿಯೋ ತುಣುಕುಗಳು ಬಹಿರಂಗವಾದ ಬೆನ್ನಲ್ಲೇ ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹ ಅಧಿಕಾರಿಗಳನ್ನು ರಾಜ್ಯ ಕಾರಾಗೃಹ ಮತ್ತು ಸುಧಾರಣಾ ಇಲಾಖೆಯ ಹೆಚ್ಚುವರಿ ಪೊಲೀಸ್ ಮಹಾನಿರ್ದೇಶಕ ಬಿ. ದಯಾನಂದ್ ಸರ್ ತರಾಟೆಗೆ ತೆಗೆದುಕೊಂಡಿದ್ದಾರೆ. ಈ ಅಕ್ರಮದ ಕುರಿತು ಡಿಐಜಿ ಆನಂದ್ ರೆಡ್ಡಿ, ಡಿಐಜಿ ದಿವ್ಯಶ್ರೀ ಅವರಿಗೆ ವಿಚಾರಣೆ ನಡೆಸಿ ವರದಿ ನೀಡುವಂತೆ ಸೂಚಿಸಿದ್ದಾರೆ. ಅಲ್ಲದೆ, ಸಿ.ಎಸ್. ಸುರೇಶ್ ಅವರನ್ನು ವರ್ಗಾವಣೆಗೊಳಿಸಿ, ಅಧೀಕ್ಷಕರಾದ ಖಾಸಿಂ ಸಾಬ್ ಮ್ಯಾಗೇರಿ, ಅಶೋಕ್ ಭಜಂತ್ರಿ ಇಬ್ಬರನ್ನೂ ಸಸ್ಪೆಂಡ್ ಮಾಡಿದ್ದಾರೆ. ಸದ್ಯ, ಸೆಂಟ್ರಲ್ ಜೈಲ್ ತನಿಖೆ ಮುಂದುವರೆದಿದೆ. ಅಂದಹಾಗೆ, ಜೈಲಿನಲ್ಲಿ ಖೈದಿಗಳ ವಿಲಾಸಿ ಜೀವನ ಕುರಿತು ಬಿಡುಗಡೆ ಗೊಂಡಿರುವ ವಿಡಿಯೋಗಳ ಅಸಲಿತನಕ್ಕೆ ಆಂಗ್ಲ ದಿನಪತ್ರಿಕೆಯೊಂದನ್ನು ತೋರಿಸಿ ದಿನಾಂಕವನ್ನು ಉಲ್ಲೇಖಿಸಲಾಗಿದೆ. ಈಗ ಬಹಿರಂಗವಾದ ಐದು ವಿಡಿಯೋಗಳ ಪೈಕಿ ಒಂದನ್ನು 2022ರಲ್ಲಿ ಚಿತ್ರೀಕರಿಸಲಾಗಿದೆ ಎನ್ನಲಾಗಿದೆ. ಇನ್ನುಳಿದವು ಇತ್ತೀಚಿನ ದಿನಗಳಲ್ಲಿ ಚಿತ್ರೀಕರಿಸಿದ ವಿಡಿಯೋಗಳಾಗಿವೆ ಎಂದು ಕ್ಯಾಲೆಂಡರ್ ಪುರಾವೆ ನುಡಿಯುತ್ತದೆ!

ಸದರಿ ವಿಡಿಯೋಗಳ ಬಿಡುಗಡೆಯ ಹಿಂದಿನ ಕೈಗಳ ಕುರಿತು ಇಲಾಖೆ ತನಿಖೆ ನಡೆಸುತ್ತಿದೆ. ತನಿಖೆಯ ಭಾಗವಾಗಿ, ದರ್ಶನ್ ಆಪ್ತ ಮಿತ್ರ ನಟ ಧನ್ವೀರ್‌ನನ್ನು ಸಿಸಿಬಿ ಪೊಲೀಸ್ ವಿಚಾರಣೆ ನಡೆಸುತ್ತಿದೆ! 10 ತಾರೀಖು ಮುಂಜಾನೆ 3 ಗಂಟೆಯಲ್ಲಿ ಧನ್ವೀರ್ ಅವರನ್ನು ಅವರ ಮನೆಯಿಂದಲೇ ಎಬ್ಬಿಸಿಕೊಂಡು ಬಂದು, ಸರಿಸುಮಾರು 4 ಗಂಟೆಗಳ ಕಾಲ ವಿಚಾರಣೆ ನಡೆಸಲಾಗಿದೆ. ಧನ್ವೀರ್ ನಾನೇನು ತಪ್ಪು ಮಾಡಿಲ್ಲ, ಇದಕ್ಕೂ ನನಗೂ ಸಂಬಂಧವಿಲ್ಲ... ಎಂದು ತಿಳಿಸಿ, ಪೊಲೀಸರಿಗೆ ತಮ್ಮ ಮೊಬೈಲ್ ಕೊಟ್ಟು, ಬೇಕಿದ್ರೆ ಪರಿಶೀಲಿಸಿಕೊಳ್ಳಿ... ಎಂದು ಹೇಳಿ ಎದ್ದು ಹೋಗಿದ್ದಾರೆ ಎನ್ನಲಾಗಿದೆ!


ಎಡಿಜಿಪಿ ಬಿ. ದಯಾನಂದ ಸರ್

ಇಷ್ಟಕ್ಕೂ ಸಿಸಿಬಿ ಪೊಲೀಸ್‌ಗೆ ಧನ್ವೀರ್ ಮೇಲೇಕೆ ಡೌಟ್ ಬಂತು? ಹಾಗಾದ್ರೆ ಈ ವಿಡಿಯೋ ಬಿಡುಗಡೆ ಹಿಂದೆ, ದಿಂಬು ಬೆಡ್‌ಶೀಟ್ ವಂಚಿತ ದಾಸನ ಕೈವಾಡ ಇದೆಯಾ?! ಅಥವಾ ಜೈಲಿನಲ್ಲಿರೋ ದಾಸನ ಅಭಿಮಾನಿ ವೃಂದ ಪೊಲೀಸರನ್ನು ಇಕ್ಕಟ್ಟಿಗೆ ಸಿಲುಕಿಸಿ ಆಟ ನೋಡಲು ವಿಡಿಯೋ ಹರಿಬಿಟ್ಟಿದೆಯಾ?! ಅಥವಾ ಒಳಗಿನ ಪೊಲೀಸರೆ ತಮ್ಮ ಸಹಪಾಠಿಗಳ ಮೇಲೆ ಸೇಡು ತೀರಿಸಿಕೊಳ್ಳಲು ಸಂಚು ರೂಪಿಸಿ ತಮಗೆ ಆಪ್ತರಾದ ಪಾತಕಿಗಳಿಂದ ವಿಡಿಯೋ ಪಸರ್ ಮಾಡಿಸಿದ್ದಾರಾ?! ಅಥವಾ ರೌಡಿಗಳು ಅಧಿಕಾರಿಗಳನ್ನು ಬ್ಲ್ಯಾಕ್ ಮೇಲ್ ಮಾಡ್ತಿದ್ದಾರ?! ಯಾವ ಹುತ್ತದಲ್ಲಿ ಯಾವ ಹಾವಿದೆಯೋ ಬಲ್ಲವರಾರು.

ಒಟ್ಟಾರೆ, ಈ ಸೆಂಟ್ರಲ್ ಜೈಲಿಗೆ ದಕ್ಷ ಅಧಿಕಾರಿಯೊಬ್ಬರು ಚೀಫ್ ಸೂಪರಿಟೆಂಡೆಂಟ್ (ಸಿ.ಎಸ್) ಆಗಿ ಬರಬೇಕು. ಸದ್ಯ, ಕಾರಾಗೃಹ ಎಸ್ಪಿ ಅಂಶುಕುಮಾರ್ ಅವರನ್ನ ಪರಪ್ಪನ ಅಗ್ರಹಾರ ಜೈಲಿಗೆ ಸಿಎಸ್ ಆಗಿ ನೇಮಕ ಮಾಡಲಾಗಿದೆ. ಇವರು ಹೇಗೆ ಸಂಭಾಳಿಸುತ್ತಾರೋ ಗೊತ್ತಿಲ್ಲ. ಇವರ ಬದಲು ಸೆಂಟ್ರಲ್ ಜೈಲ್ ಅನ್ನು ಗತ್ತಾಗಿ ಸಂಭಾಳಿಸಿರೋ ಹಳಬರನ್ನೇ ನೇಮಿಸಿದ್ದರೆ ಒಳ್ಳೆಯದಿತ್ತು. ಯಾಕೆಂದರೆ, ಅಲ್ಲಿರೋ ಬಿಲಗಳು ಹೆಗ್ಗಣಗಳು ನಡೆಯೋ ಸಂಚುಗಳು ಅವರಿಗೆ ಮಾತ್ರ ತಿಳಿದಿರುತ್ತವೆ! ಹೊಸಬರು ಯಾರೇ ಬಂದರೂ ಸೆಂಟ್ರಲ್ ಜೈಲ್ ಒಳಗಿರೋ ಕಿಲಾಡಿಗಳನ್ನ ಸಂಭಾಳಿಸುವುದು ಕಷ್ಟ ಕಷ್ಟ!! ☯

# ಉಡುಪಿ ಹರೀಶ್ ಆಚಾರ್ 'ರಾಯ್' ಆದ ಸೋಜಿಗವು!



ಹರೀಶ್ ರೈ ಇನ್ನಿಲ್ಲ... ಅನ್ನುವುದನ್ನ ಅರಗಿಸಿಕೊಳ್ಳಲಿಕ್ಕೆ ಸಾಧ್ಯವೇ ಆಗುತ್ತಿಲ್ಲ! ಅವರೊಬ್ಬ ಅಪರೂಪದ ಕಲಾವಿದರು. ಈ ನಟನನ್ನು ಕನ್ನಡ ಚಿತ್ರರಂಗ ಮೊದಲ ಬಾರಿಗೆ ಗುರುತಿಸಿದ್ದು 'ಓಂ' ಚಿತ್ರದಲ್ಲಿ. ಅದರಲ್ಲಿ ಅವರು ಮಾಡಿದ ರಾಯ್ ಪಾತ್ರ ಇಂದಿಗೂ ಹಸಿರಾಗಿದೆ. ಕುತ್ತಿಗೆಯ ವರೆಗೆ ಇಳಿಬಿದ್ದ ಉದ್ದನೆಯ ಕೂದಲು, ಸಣಕಲು ದೇಹ, ಸ್ವಲ್ಪ ಕೀರಲು ಧ್ವನಿ ಮತ್ತು ಪವರ್ ಫುಲ್ ಎನಿಸುತ್ತಿದ್ದ ಕಣ್ಣುಗಳು! ಓಂ ನಲ್ಲಿ ಮುತ್ತಪ್ಪ ರೈ ಕ್ಯಾರೆಕ್ಟರ್ ಮಾಡಿದ್ದ ಹರೀಶ್ ರೈ, ಅನಂತರ ರಾಯ್ ಅಂತಲೇ ಫೇಮಸ್ ಆದರು. ವಾಸ್ತವದಲ್ಲಿ ಅವರ ಮೂಲ ಹೆಸರು ರೈ ರಾಯ್ ಇದ್ಯಾವುದೂ ಅಲ್ಲ.

ಹರೀಶ್ ಆಚಾರ್! ಉಡುಪಿಯ ವಿಶ್ವಕರ್ಮ ಸಮುದಾಯದವರಾದ ಹರೀಶ್ ಆಚಾರ್ ಅವರ ತಾಯಿಯ ತಂದೆ ಅಂದ್ರೆ, ಅಜ್ಜ ಚಿನ್ನದ ಅಂಗಡಿ ಮಾಲೀಕರಾದರೆ, ತಂದೆ ಜಮೀನ್ದಾರರು. ಟೆನೆನ್ಸಿ ಆಕ್ಟ್ (ಉಳುವವನೇ ಭೂಮಿಯ ಒಡೆಯ) ಕಾಯ್ದೆ ಜಾರಿಯಾದ ನಂತರ ಹರೀಶ್ ಆಚಾರ್‌ಯವರ ಕುಟುಂಬದ ಬಹುತೇಕ ಜಮೀನು, ತೋಟ ಗದ್ದೆಗಳು ಅವರ ಕೈ ಬಿಟ್ಟವಂತೆ. ಉಳಿದ ಒಂದಿಷ್ಟು ತೋಟ ಇತ್ತು ಅಷ್ಟೇ ಎನ್ನಲಾಗಿದೆ.



ಹರೀಶ್ ಬೆಳೆದಿದ್ದು ನೆಂಟರ ಮನೆಯಲ್ಲಿ. ಶಾಲೆಯಲ್ಲಿ ಭಯಂಕರ ತುಂಟನಾಗಿದ್ದ ಹರೀಶ್, 10ನೇ ಕ್ಲಾಸ್ ಓದುತ್ತಿರುವಾಗಲೇ ಬಾಂಬೆಗೆ ಹೋದವರು. ಒಮ್ಮೆ ನಿಮ್ಮ ಅಪ್ಪನನ್ನು ಸ್ಕೂಲಿಗೆ ಕರೆದುಕೊಂಡು ಬಾ ಎಂದು ಮೇಷ್ಟರು ಹೇಳಿದ್ದಕ್ಕೆ ಹರೀಶ್ ಉಡುಪಿಯನ್ನೇ ಬಿಟ್ಟು ಹೋದ ಮುಂಬೈಗೆ ಹೋದರು. ಅಲ್ಲಿ ಹೋಟೆಲ್ಲೊಂದರಲ್ಲಿ ಕೆಲಸ ಮಾಡಿದರು. ಅಲ್ಲಿದ್ದವರಿಗೆ ಹರೀಶ್ ಆಚಾರ್ ಅವರ ಹಿನ್ನೆಲೆ ಗೊತ್ತಾಗಿ ಊರಿಗೆ ಕಳಿಸಿದರೂ... ಅಷ್ಟು ಹೊತ್ತಿಗಾಗಲೇ ಬಾಂಬೆಯಲ್ಲಿದ್ದ ಕೆಲವು ಭೂಗತ ಜಗತ್ತಿನ ಚೋಟು ಮೋಟುಗಳ ಪರಿಚಯ ಆಗಿತ್ತು. ಒರಟುತನ ಹರೀಶ್ ಅವರ ವ್ಯಕ್ತಿತ್ವದಲ್ಲೇ ಇತ್ತು.



1992, ನವೆಂಬರ್ 13. ಉಡುಪಿಯಲ್ಲಿ ಹರೀಶ್ ಅವರು ಒಂದು ಗ್ಯಾಂಗ್ ಕಟ್ಟಿಕೊಂಡು ಹೋಗಿ ಜಯರಾಮ್ ಎಂಬ ಸ್ಕೂಲ್ ಮಾಸ್ಟರ್‌ನನ್ನು ಹೊಡೆದು ಬಂದಿದ್ದರು. ಯಾವ ಮಟ್ಟಿಗೆ ಹೊಡೆದಿದ್ದರೆಂದರೆ ಆತ ಒಂದು ವಾರ ಕಾಲ ಆಸ್ಪತ್ರೆಯಲ್ಲಿದ್ದ. ನಂತರ ಅಲ್ಲಿಯೇ ಪ್ರಾಣ ಬಿಟ್ಟಿದ್ದರು. ಹರೀಶ್‌ಗೆ ಮರ್ಡರ್ ಕೇಸ್ ಬೆನ್ನು ಹತ್ತಿದ್ದೇ ಆಗ. ಆ ಕೇಸಿನ ಬಗ್ಗೆ ಹರೀಶ್ ಹೆಚ್ಚು ತಲೆಕೆಡಿಸಿಕೊಳ್ಳಲಿಲ್ಲ.

ಜಾಮೀನಿನ ಮೇಲೆ ಹೊರಗಿದ್ದರು. ಆದರೆ ಊರಿನಲ್ಲಿ ಇರಲು ಆಗದೆ ಬೆಂಗಳೂರಿಗೆ ಬಂದರು. ಉಡುಪಿ ಕುಂದಾಪುರ ಸಂಪರ್ಕಗಳ ಮೂಲಕ ಉಪೇಂದ್ರ ಪರಿಚಯ ಮಾಡಿಕೊಂಡು, 'ಓಂ'ನಲ್ಲಿ ನಟಿಸಿದರು. ಮುಂದೆ ಇನ್ನು ಹತ್ತಾರು ಸಿನಿಮಾ ಸಿಕ್ಕಿದವು.



ಒಂದೆಡೆ ನಟನೆ, ಇನ್ನೊಂದೆಡೆ ಕೋರ್ಟ್ ವಿಚಾರಣೆ. ಜಿಲ್ಲಾ ನ್ಯಾಯಾಲಯದಲ್ಲಿ ವಾದ ವಿವಾದ ನಡೆದು 2003ರಲ್ಲಿ ಜೀವಾವಧಿ ಶಿಕ್ಷೆ ಪ್ರಕಟವಾಗಿತ್ತು! ಉಡುಪಿ ಜೈಲು ಸೇರಿದ ಹರೀಶ್ ರಾಯ್, ಆಮೇಲೆ ಕೇಸಿನ ಬಗ್ಗೆ ತುಂಬಾ ತಲೆಕೆಡಿಸಿಕೊಂಡರು.

ಅವಾಗ ಪರಪ್ಪನ ಅಗ್ರಹಾರ ಜೈಲಿನಲ್ಲಿ ಮುತ್ತಪ್ಪ ರೈ ಸಿಕ್ಕಿ 'ಸ್ನೇಹ' ಕುದುರಿತ್ತು. ಅವರ ಕೃಪೆಯಿಂದಲೆ ಉಡುಪಿ ಮೇಷ್ಟ್ರು ಜಯರಾಮ್ ಮೇಲೆ ಹಲ್ಲೆ ನಡೆದಾಗ ಹರೀಶ್ ರಾಯ್ ಸ್ಥಳದಲ್ಲೇ ಇರಲಿಲ್ಲವೆಂದು ಅವರ ಲಾಯರ್ ವಾದಿಸಿ ಗೆದ್ದರು. ಕೊನೆಗೆ ಹರೀಶ್ ರಾಯ್ ಆ ಕೇಸ್‌ನಿಂದ ಖುಲಾಸೆಯಾದರು... ಒಂಬತ್ತು ತಿಂಗಳು ಜೈಲಿನಲ್ಲಿದ್ದು ಹೊರಗೆ ಬಂದರು. ಆದರೆ ಅಷ್ಟೊತ್ತಿಗೆ ಅವರ ಕೈಲಿದ್ದ ಹಲವು ಸಿನಿಮಾಗಳು ಕೈ ತಪ್ಪಿ ಹೋಗಿದ್ದವು. ಜೈಲಿನಿಂದ ಹೊರ ಬಂದ ಮೇಲೆ ಹರೀಶ್ ರಾಯ್ ಕೂಡ ಬದಲಾಗಿದ್ದರು. ಆದರೆ... ಈ ಹಿಂದೆ ನಟಿಸಿದ್ದ ಚಿತ್ರಗಳಲ್ಲಿ ಹರೀಶ್ ರಾಯ್ ಅವರ ಹುಚ್ಚು ವರ್ತನೆ, ಕುಡಿತಗಳನ್ನು ನೋಡಿದ್ದವರು ಮತ್ತೆ ಹರೀಶ್ ರಾಯ್ ಹತ್ತಿರವೂ ಸುಳಿಯಲಿಲ್ಲ.

ತಾನು ಬದಲಾಗಿದ್ದೇನೆ ಎಂದು ಸಾಬೀತು ಮಾಡುವಷ್ಟರಲ್ಲಿ ಹರೀಶ್ ರಾಯ್ ಅವರ ವೃತ್ತಿ ಜೀವನದ ಒಂದಷ್ಟು ವರ್ಷಗಳು ಕಳೆದು ಹೋಗಿದ್ದವು. ಮುಂದೆ ಯಾವ ಜನ್ಮದ ಪುಣ್ಯವೋ ಎಂಬಂತೆ, ಕೆಜಿಎಫ್ ಸಿಕ್ಕಿತು! ಅದರಲ್ಲಿ ಅವರು ಮಾಡಿದ ಖಾಸಿಂ ಚಾಚಾ ಪಾತ್ರ ವರ್ಣನಾತೀತವಾದದ್ದು. ರಾಕಿ ಭಾಯ್ ಯಶ್ ಮತ್ತು ಹರೀಶ್ ರಾಯ್ ನಡುವೆ ತಂದೆ ಮಗನ ಬಾಂಧವ್ಯ ಬೆಳೆದಿತ್ತು. ಈ ಜೋಡಿ ಮುಂದೆ ಕೆಜಿಎಫ್ 3 ನಲ್ಲಿ ನಟಿಸುವುದಿತ್ತು... ಆದರೆ....ವಿಧಿಯಾಟ.

ಹರೀಶ್ ರಾಯ್ ಅವರ ದೇಹದಲ್ಲಿ ಕ್ಯಾನ್ಸರ್ ವ್ಯಾದಿ... ಅವರ ರಕ್ತದ ಕಣಕಣದಲ್ಲೂ ವ್ಯಾಪಿಸಿಬಿಟ್ಟಿತ್ತು! ಥೈರಾಯಿಡ್ ಕ್ಯಾನ್ಸರ್ ಅಂತೇ. ಕಿದ್ವಾಯಿ ಆಸ್ಪತ್ರೆಯಲ್ಲಿ ಕಳೆದ ಎರಡು ವರ್ಷದಿಂದಲೂ ಚಿಕಿತ್ಸೆ ತೆಗೆದು ಕೊಳ್ಳುತ್ತಿದ್ದರು. ಈ ನಡುವೆ ವ್ಯಾದಿ ಉಲ್ಬಣಗೊಂಡಿತ್ತು. ಹರೀಶ್ ರಾಯ್ ಅವರ ದುಸ್ಥಿತಿಗೆ ಮರುಗಿದವರಿಲ್ಲ. ಅದಕ್ಕೆ ಕಾರಣ... ಅವರು ತುಂಬಾ ನೊಂದಿದ್ದರು ಮತ್ತು ಬದಲಾಗಿದ್ದರು. ಹರೀಶ್ ರಾಯ್ ಅವರಿಂದ ತೊಂದರೆ ಅನುಭವಿಸಿದ್ದವರೂ ಕೂಡ ಈ ಮನುಷ್ಯ ಬದುಕಿ ಬಿಡಲಿ ದೇವರೇ ಎಂದು ಪ್ರಾರ್ಥಿಸಿದ್ದರು ಗೊತ್ತಾ... ಆದರೆ ಅವರ ಪ್ರಾರ್ಥನೆ ಫಲಿಸಲಿಲ್ಲ.

ದಿನಾಂಕ 06-11-2025 ಗುರುವಾರ ಮಧ್ಯಾಹ್ನ 11 ಗಂಟೆ ವೇಳೆಗೆ ಆ ಆಸ್ಪತ್ರೆಯಲ್ಲೇ ಉಸಿರು ಚೆಲ್ಲಿದರು ಹರೀಶ್ ರಾಯ್! ಹರೀಶ್ ಅವರ ಪತ್ನಿ ಹೇಮಾ. ಖಾಸಗಿ ಸ್ಕೂಲ್ ಟೀಚರ್. ಇಬ್ಬರು ಗಂಡು ಮಕ್ಕಳು.... ಓದುತ್ತಿವೆ. ಈಗ ಅವರಿಗೆ ಯಾರೂ ದಿಕ್ಕಿಲ್ಲ!

ಇಲ್ಲೇ ಬೆಂಗಳೂರಲ್ಲಿದ್ದ ಧ್ರುವ ಸರ್ಜಾ ಓಡೋಡಿ ಬಂದು ಆ ಮಕ್ಕಳಿಗೆ ಕೈ ತುತ್ತು ತಿನ್ನಿಸಿ ಕಣ್ಣೀರಿಟ್ಟಿದ್ದಾರೆ. ಮುಂಬೈನಲ್ಲಿ ಶೂಟಿಂಗ್‌ನಲ್ಲಿದ್ದ ರಾಕಿ ಭಾಯ್ ಪ್ರೈವೇಟ್ ಜೆಟ್ ವಿಮಾನದಲ್ಲಿ ಆಗಮಿಸಿ, ತಾಯಿ ಮಕ್ಕಳಿಗೆ ಸಾಂತ್ವನ ಹೇಳಿ, ಕೈಲಾದಷ್ಟು ಹಣ ಕೊಟ್ಟು ನಿಮ್ಮೊಂದಿಗೆ ನಾನಿದ್ದೇನೆ...ಎಂದಿದ್ದಾರೆ. ಉಳಿದಂತೆ, ಚಲನ ಚಿತ್ರರಂಗದ ಇಷ್ಟದ ನಟನಟಿಯರು ರಾಯ್ ಅಂತಿಮ ದರ್ಶನ ಪಡೆದು ಕೈಲಾದ ನೆರವು ನೀಡಿದ್ದಾರೆ. ಶುಕ್ರವಾರ ಜನ್ಮಸ್ಥಳ ಉಡುಪಿಯಲ್ಲಿ ಶವಸಂಸ್ಕಾರ ಕಾರ್ಯ ನೆರವೇರಿಸಿ ರಾಯ್ ಅವರ ಆತ್ಮಕ್ಕೆ ಶಾಂತಿ ಕೋರಲಾಗಿದೆ! ☯










## ಕಲಾವಿದರ ಸಂಘದಲ್ಲಿ ದುಡ್ಡಿಲ್ಲವೇ? ನಮ್ಮ ಸ್ಟಾರ್‌ಗಳೇಕೆ ಹೀಗೆ?!

ಆಂಧ್ರ, ತಮಿಳುನಾಡು, ಕೇರಳ ಮುಂತಾದ ರಾಜ್ಯಗಳಲ್ಲಿ ಯಾವುದೇ ಕಲಾವಿದರಿಗೆ, ತಂತ್ರಜ್ಞರಿಗೆ ತೊಂದರೆ ಆದರೆ ಅಲ್ಲಿನ ಕಲಾವಿದರ ಸಂಘ ಕೂಡಲೇ ನೆರವಿಗೆ ನಿಲ್ಲುತ್ತದೆ. ಅಲ್ಲಿನ ಸ್ಟಾರ್‌ಗಳು ಕೂಡಲೇ ಸಹಾಯಸ್ತ ಚಾಚಿ 'ಹೆದರಬೇಡಿ, ನಾನಿದ್ದೇನೆ' ಅನ್ನುತ್ತಾರೆ.

ಕಳೆದ ವರ್ಷ ಹೆಸರಾಂತ ಖಳ ಪಾತ್ರಧಾರಿ ಪೊನ್ನ ಬಲಂಗೆ ಕ್ಯಾನ್ಸರ್ ಆಗಿ ಆತ ಆಸ್ಪತ್ರೆಯಲ್ಲಿದ್ದಾಗ, ಎಷ್ಟೇ ಖರ್ಚ ಆಗಲಿ... ನಾನು ಭರಿಸುತ್ತೇನೆ ' ಎಂದು ಹೇಳಿದ್ದು, ಚಿಕಿತ್ಸೆ ಕೊಡಿಸಿ ಆಸ್ಪತ್ರೆ ಬಿಲ್ ಪಾವತಿಸಿದ್ದು ಮೆಗಾಸ್ಟಾರ್ ಚಿರಂಜೀವಿ! ಪೊನ್ನಂ ಬಲಂ ಚೆನ್ನೈನಲ್ಲಿದ್ದವರು. ಇಲ್ಲಿದ್ದ ರಜನಿಗೂ ಚಾನ್ಸ್ ಕೊಡದೆ ಹೈದ್ರಾಬಾದ್‌ನಿಂದ ಬಂದು ಒಬ್ಬ ಕಲಾವಿದನ ಜೀವ ಉಳಿಸಿದರು ಚಿರಂಜೀವಿ! ಇಂಥ ಸಹೃದಯ ನಮ್ಮ ಸ್ಟಾರ್‌ಗಳಿಗೇಕಿಲ್ಲ? ಎಲ್ಲೋ ಒಬ್ಬ ದರ್ಶನ್, ಒಬ್ಬ ಧ್ರುವ ಒಂದಷ್ಟು ಲಕ್ಷ ಕೊಟ್ರೆ ಉಳಿದವರು??

ಹರೀಶ್ ರಾಯ್ ಅವರಿಗೆ ಚಿಕಿತ್ಸೆ ನೀಡುತ್ತಿದ್ದ ಆಸ್ಪತ್ರೆಯಲ್ಲಿ ಒಂದು ಇಂಜೆಕ್ಷನ್‌ಗೆ ಮೂರು ಲಕ್ಷ ರೂ. ಆಗುತ್ತಿತ್ತಂತೆ. ಬಡ ಕಲಾವಿದ ಪ್ರತಿನಿತ್ಯ ಅಷ್ಟೊಂದು ಹಣ ಎಲ್ಲಿಂದ ತಂದು ಕೊಡುತ್ತಾರೆ ಹೇಳಿ? ಒಟ್ಟು 80 ಲಕ್ಷ ರೂ ಕೊಟ್ಟು ಶೀಘ್ರ ಆಪರೇಷನ್ ಮಾಡಿಸಿದ್ರೆ, ಹರೀಶ್ ಬದುಕುತ್ತಿದ್ದರಂತೆ! ನಮ್ಮಲ್ಲಿ ಎಂಟು ಜನ ಸ್ಟಾರ್ಸ್ ತಲಾ 20 ಲಕ್ಷ ಕೊಟ್ಟಿದ್ದರೂ ಆಗುತ್ತಿತ್ತಲ್ಲವೇ?? ಇನ್ನಾದರೂ ಸಹೃದಯವಂತರಾಗಿ... ಸ್ಟಾರ್‌ಗಳೇ... ಹೋಗುವಾಗ ಹೊತ್ಕೊಂಡು ಹೋಗ್ತೀರಾ... ಕಾಚಾ ಉಡುದಾರ ಕೂಡ ಕಿತ್ತು ಬಿಸಾಡುತ್ತಾರೆ, ಹೂಳೋರು!! ☯

POLICE NEWS REGISTERED KA/BGW-1618/2024-26 REGD. WITH RNI NO. 36669/82 PAGES : 16 | POSTED AT BANGALORE PSO BG 560026 Every Tuesday | Publishing Date : 9.11.2025




# ಲವ್ ಯು ಮುದ್ದು



ಟೈಟಲ್ ಹಾಗೂ ತನ್ನ ಕಂಟೆಂಟ್ ಮೂಲಕವೆ ಪ್ರೇಕ್ಷಕರಲ್ಲಿ ನಿರೀಕ್ಷೆ ಹೆಚ್ಚಿಸಿತ್ತು. ಕೆಮಿಸ್ಟ್ರಿ ಆಫ್ ಕರಿಯಪ್ಪ ಖ್ಯಾತಿಯ ನಿರ್ದೇಶಕ ಕುಮಾರ್ ಅವರು 'ಲವ್ ಯು ಮುದ್ದು' ಚಿತ್ರವನ್ನು ತೆರೆಗೆ ತರುತ್ತಿದ್ದಾರೆ. ಇದು ಪ್ರೇಮಿಗಳಿಬ್ಬರ ನೈಜ ಘಟನೆ ಆಧರಿಸಿ ತೆಗೆದಿರೋ ಸಿನಿಮಾ. ಮಹಾರಾಷ್ಟ್ರದ ಸೊಲ್ಲಾಪುರದ ಯುವ ದಂಪತಿ ಆಕಾಶ್ ನಾರಾಯಣ್ಕರ್ ಮತ್ತು ಅಂಜಲಿ ಭಾಯ್ ಶಿಂಧೆ ಅವರ ಪ್ರೇಮ ಕಥೆಯೇ ಈಗ ಟಿಲವ್ ಯು ಮುದ್ದುಟಿ ಸಿನಿಮಾ ರೂಪ ತಾಳಿದೆ ಎನ್ನಲಾಗಿದೆ. ಜಗತ್ತಿನಲ್ಲಿ ಎಲ್ಲವೂ ಶೂನ್ಯ, ಪ್ರೀತಿಯೇ ಸರ್ವಸ್ವ.... ಎನ್ನುವುದನ್ನು ಸಾಬೀತು ಮಾಡಿದ ಮಹಾರಾಷ್ಟ್ರದ ಆಕಾಶ್ ಹಾಗೂ ಅಂಜಲಿ ಜೋಡಿಯ ಹೃದಯ ಹಿಂಡುವ ಕಥೆಯನ್ನು ಕುಮಾರ್ ಸೊಗಸಾಗಿ ಕಟ್ಟಿಕೊಟ್ಟಿದ್ದಾರೆ, ರಘು ಕೋವಿ.

ಅವರ ಪ್ರೇಮಿಗಳಾದ ಆಕಾಶ್ ಹಾಗೂ ಅಂಜಲಿ ಪರಸ್ಪರ ಪ್ರೀತಿಸಿ, ಹಲವಾರು ತೊಡಕುಗಳನ್ನು ಎದುರಿಸಿ ಮದುವೆಯಾದ ಜೋಡಿ. ನವದಂಪತಿಗಳು ದೇವರ ದರ್ಶನ ಪಡೆಯಲು ದೇವಸ್ಥಾನವೊಂದಕ್ಕೆ ಹೋಗಿ ದ್ದಾಗ ಯಾರೂ ಊಹಿಸಲಾಗದ ಘಟನೆಯೊಂದು ನಡೆಯುತ್ತದೆ. ಅವರಿಬ್ಬರ ಬಾಳಲ್ಲಿ ನಡೆದ ಆ ಘೋರ ದುರಂತವೇನು ಅನ್ನೋದನ್ನು ಇಲ್ಲಿ ಬರೆಯುವುದು ಬೇಡ. 'ಲವ್ ಯು ಮುದ್ದು' ಸಿನಿಮಾದಲ್ಲಿ ನೋಡಬೇಕು ನೀವು....



ಒಂದಂತೂ ಸತ್ಯ.ಲವ್ ಯು ಮುದ್ದು ನಿಮ್ಮನ್ನು ಕಾಡುವ ಭಾವುಕ ಸಿನಿಮಾ. ಪ್ರೀಮಿಯರ್ ಶೋ ನೋಡಿ ಹೊರಬಂದವರ ಕಣ್ಣಂಚಲ್ಲಿ ನೀರು ಜಿನುಗುತ್ತಿತ್ತು... ಅಂದಮೇಲೆ, ನಿಮ್ಮ ಕಣ್ಣುಗಳು ಒದ್ದೆಯಾಗುವುದು ಖಚಿತ... ಅಂದಹಾಗೆ, ಸೀರಿಯಲ್ ಹೀರೋ ಸಿದ್ದು ಮೂಲಿಮನಿ ಮತ್ತು ರೇಷ್ಮಾ ಜೋಡಿ 'ಲವ್ ಯು ಮುದ್ದು' ಚಿತ್ರದಲ್ಲಿದೆ. ☯

# ಪತ್ರಿಕೆ ಆಡ್ಸ್ ಎಕ್ಸಿಕುಟಿವ್ ಆಗಿದ್ದ ರಿಷಬ್ ಶೆಟ್ಟಿ!

## ಈ ಚಿತ್ರದಲ್ಲಿ ಇರಿವವರು ಯಾರೆಂದು ಗುರುತಿಸಿ..?





## ಇವರು ಈಗ PAN INDIA STAR ಗೇಸ್ ಮಾಡಿ ನೋಡೋಣ..?

ಕಾಂತಾರ ಡಿವೈನ್ ಸ್ಟಾರ್ ರಿಷಬ್ ಶೆಟ್ಟಿ ಸಿನಿಮಾ ರಂಗಕ್ಕೆ ಬರುವ ಮುನ್ನ ಏನೆಲ್ಲಾ ಕಷ್ಟ ಪಟ್ಟಿದ್ದರೋ, ಆ ಪೈಕಿ ಅವರು ಮೈಸೂರಿನ ದಿನಪತ್ರಿಕೆಯೊಂದರಲ್ಲಿ ಜಾಹಿರಾತು ವಿಭಾಗದ ಎಕ್ಸಿಕುಟಿವ್ ಆಗಿದ್ದರು ಎಂಬ ವಿಚಾರ ಗೊತ್ತೇ. ಯಸ್, ಆಗಿನ್ನೂ ಪ್ರಶಾಂತ್ ಶೆಟ್ಟಿಯಾಗಿಯೇ ಉಳಿದಿದ್ದ ರಿಷಬ್ ಶೆಟ್ಟಿ, ಮೈಸೂರಿನ 'ಕನ್ನಡಿಗರ ಪ್ರಜಾನುಡಿ' ದಿನಪತ್ರಿಕೆಯಲ್ಲಿ ಆಡ್ಸ್ ಎಕ್ಸಿಕುಟಿವ್ ಆಗಿ ಕೆಲಸ ಮಾಡುತ್ತಿದ್ದರು. ಮೈಸೂರು ಮಿತ್ರ, ಆಂದೋಲನ ಎರಡು ಪತ್ರಿಕೆಗಳ ಪೈಪೋಟಿ ನಡುವೆ ಮೈಸೂರು ಭಾಗದಲ್ಲಿ ಬಂದ ಮೂರನೇ ದಿನಪತ್ರಿಕೆ ಪ್ರಜಾನುಡಿ. ಮಾಜಿ ಶಾಸಕ ವಾಸು ಅದರ ಮಾಲೀಕರು.

ಕುಂದಾಪುರದಿಂದ ಮೈಸೂರಿಗೆ ಬಂದು ಅದು ಹೇಗೋ ವಾಸು ಅವರ ಗರಡಿ ಸೇರಿಕೊಂಡಿದ್ದ ಪ್ರಶಾಂತ್ ಶೆಟ್ಟಿಗೆ ಮಾಸಿಕ 3 ಸಾವಿರ ರೂ. ಸಂಬಳ ನಿಗಧಿ ಮಾಡಿ ಜಾಹಿರಾತು ವಿಭಾಗದಲ್ಲಿ ಕೆಲಸ ಕೊಡಲಾಗಿತ್ತು. ಒಂದು ಬೈಕ್ ಕೂಡ. ಆ ಬೈಕ್‌ನಲ್ಲಿ ಮೈಸೂರು ಸಿಟಿ ಸುತ್ತುತ್ತಾ ಜಾಹಿರಾತು ಸಂಪಾದಿಸಲು ಹರಾಸಾಹಸ ಪಡುತ್ತಿದ್ದರು ಶೆಟ್ರು... ಈಗ? ಎಲ್ಲಿಂದ ಎಲ್ಲಿಗೆ ಪಯಣ... ಅದಕ್ಕೆ ಹೇಳೋದು, ದೈವಸಂಕಲ್ಪವೊಂದಿದ್ದರೆ ಯಾರು ಏನು ಬೇಕಾದ್ರೂ ಆಗಬಹುದು! ಕುಬೇರ ಮಲ್ಯ ದಿವಾಳಿ ಆಗಿ ದೇಶ ತೊರೆದ ಇದೇ ದೇಶದಲ್ಲಿ, ಕುಂದಾಪುರದ ಬಡ ಜ್ಯೋತಿಷಿ ಭಾಸ್ಕರ ಶೆಟ್ಟರ ಮಗ ಪ್ರಶಾಂತ್ ಶೆಟ್ಟಿ @ ರಿಷಬ್ ಶೆಟ್ಟಿ ಇವತ್ತು ಕಾಂತಾರ ಸೂಪರ್ ಸ್ಟಾರ್!! ☯



# ರಘು 'ರೂಬಿ'ಗೆ ಬಂದ್ಲು ಬ್ಯೂಟಿ ಕ್ವೀನ್ ವೈಭವಿ!




ಸ್ಯಾಂಡಲ್‌ವುಡ್ ಒಡಲೊಳಗೆ ಅದ್ಭುತವಾಗಿ ಕೆಲಸ ಮಾಡುವ ಅದೆಷ್ಟೋ ಪ್ರತಿಭೆಗಳು ತೆರೆಮರೆಯಲ್ಲೇ ಬದುಕು ಸವೆಸುತ್ತಿವೆ. ತಮಗೂ ಒಂದು ಚಾನ್ಸ್ ಸಿಕ್ರೆ ಸಾಕೆಂದು ನಿದ್ದೆಗೆಟ್ಟು ಕಾಯುತ್ತಿವೆ. ಜಡೇಶ್ ಹಂಪಿ (ಕಾಟೇರಾ), ಪುನೀತ್ ರಂಗಸ್ವಾಮಿ(ಏಳುಮಲೆ), ಉಮೇಶ್ ಕೃಪಾ (ಟಗರು ಪಲ್ಯ), ಶಂಕರ್ ಗುರು (ಬಡವ ರಾಸ್ಕಲ್) ಮುಂತಾದವರೆಲ್ಲ ತುಂಬಾ ವರ್ಷ ಅವರಿವರ ಬಳಿ ಜೀತ ಮಾಡಿ ಇದೀಗ ತಮ್ಮ ಪ್ರತಿಭೆ ಬೆಳಗುತ್ತಿರುವವರೇನೆ.

ಈಗ ರಘು ಕೋವಿ ಸರಧಿ. ಇವರು ದಿ ಬ್ಲಾಕ್ ಬಸ್ಟರ್ ಮೂವಿ 'ಕೃಷ್ಣಲೀಲಾ'ದ ಚಿತ್ರಕತೆಗಾರರು ಮತ್ತು ಶಶಾಂಕ್ ಬಳಿ ಅಸೋಸಿಯೇಟ್ ಆಗಿದ್ದವರು. ಆ ಚಿತ್ರದ ಸ್ಕ್ರಿಪ್ಟ್ ರಚನೆಗಾಗಿ ರಾಜ್ಯ ಪ್ರಶಸ್ತಿ ಸಿಕ್ಕಿತ್ತು, ರಘು ಅವರಿಗೆ. ಇದೀಗ ಅವರು 'ರೂಬಿ' ಎಂಬ ಒಳ್ಳೆ ಸ್ಕ್ರಿಪ್ಟ್ ಇಟ್ಟುಕೊಂಡು ಸ್ವತಂತ್ರವಾಗಿ ಸಿನಿಮಾ ಚಿತ್ರಿಸಲು ಸಿದ್ಧತೆ ನಡೆಸಿದ್ದಾರೆ. ದಿಲ್ ಮಾರ್ ಫೇಮ್ ರಾಮ್ 'ರೂಬಿ' ಚಿತ್ರದ ಹೀರೋ. ಇವರಿಗೆ ನಾಯಕಿಯಾಗಿ ಮಾರ್ಟಿನ್ ಬ್ಯೂಟಿ ವೈಭವಿ ಶಾಂಡಿಲ್ಯ ಆಯ್ಕೆಯಾಗಿದ್ದಾಳೆ. ಶರಣ್, ದಿಗಂತ್, ಧ್ರುವ ಸರ್ಜಾ ಜೊತೆ ನಟಿಸಿರೋ ವೈಭವಿಗೆ 'ರಾಮ್' ನಿಜಕ್ಕೂ ಗುಡ್ ಪೇರ್ ಅಂತ ಗಾಂಧಿನಗರ ಈಗಾಗಲೇ ಮಾತಾಡುತ್ತಿದೆ. 'ರೂಬಿ' ಕತೆಯ ಬಗ್ಗೆ ಕೂಡ ಒಳ್ಳೆ ಮಾತುಗಳಿವೆ. ಇನ್ನು, ತಾಂತ್ರಿಕ ವರ್ಗದ ಬಗ್ಗೆ ಹೇಳುವುದಾದರೆ, ಆಕಾಶ್, ಎಕ್ಸ್ ಕ್ಯೂಸ್ ಮಿ ಖ್ಯಾತಿಯ ಆರ್.ಪಿ. ಪಟ್ನಾಯಕ್ ಮ್ಯೂಸಿಕ್, ಕೆಜಿಎಫ್ ಖ್ಯಾತಿಯ ವಿಕ್ರಂ ಮೋರ್ ಸಾಹಸ ಸಂಯೋಜನೆ, ರೋಜಾ, ಬಾಂಬೆ, ದಿಲ್ ಸೇ ಖ್ಯಾತಿಯ ಸುರೇಶ್ ಅರಸ್ ಸಂಕಲನ ಹಾಗೂ ರಾಜ ಕುಮಾರ, ಯುವರತ್ನ ಖ್ಯಾತಿಯ ವೆಂಕಟೇಶ್ ಅಂಗುರಾಜ್ ಕ್ಯಾಮರಾ ವರ್ಕ್ ಈ ಚಿತ್ರಕ್ಕಿದೆ. ದಿಗ್ಗಜರ ಪಟ್ಟಿ ನೋಡಿದರೆ 'ರೂಬಿ' ಹೊಸ ದಾಖಲೆ ನಿರ್ಮಿಸುವುದರಲ್ಲಿ ಡೌಟ್ ಇಲ್ಲ ಅನ್ನಿಸುತ್ತಿದೆ ಅಲ್ವೇ. ರಘು ಕೋವಿ, ರಾಮ್ ಜೋಡಿಗೆ ಆಲ್ ದ ಬೆಸ್ಟ್ ಹೇಳೋಣ... ☯


ರಾಮ್‌ಗೌಡ

Vol. 41 No. 23 Edited, Printed, Published & Owned by M. RAHUL, Printed by him at Shri Omkar Printers, # 4/1, Mahimappa Industrial Estate, Near PIA Bhavan, 100ft Road, Jalahalli Cross, Chokkasandra, T. Dasarahalli Post, BANGALORE-560 057. ☎ 080-23588510, 9513892666 policenewsreporter@gmail.com
http//policenews.news https://www.facebook.com/profile.php?id=61579674874846 https://www.instagram.com/police_news?igsh=MWJ6bHJwZDRmZDc1aQ==